ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 1 ಸೋಮವಾರ 2026

47

ಸಂಪುಟ: 47 | ಸಂಚಿಕೆ: 46 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


ಜನ್ಮದಿನದ
ಹಾರ್ದಿಕ
ಶುಭಾಶಯಗಳು
ರಾಘವೇಂದ್ರ
ಅಣ್ಣನವರಿಗೆ
ಕೆಪಿಸಿಸಿ ಸದಸ್ಯರು
ಶುಭಕೋರುವವರು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 1 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 46 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಈ ಸಲನೂ ಕಪ್ ನಮ್ದೆ

● ಸತತ 2ನೇ ಬಾರಿಗೆ ಆರ್‌ಸಿಬಿ ಚಾಂಪಿಯನ್: ಗುಜರಾತ್ ಟೈಟಾನ್ಸ್ ರನ್ನರ್ ಅಪ್ ● ಮುಗಿಲು ಮುಟ್ಟಿದ ಅಭಿಮಾನಿಗಳ ಸಂಭ್ರಮಾಚರಣೆ ● ವಿರಾಟ್ ಕೊಹ್ಲಿ ಪಂದ್ಯ, ವೈಭವ್ ಸೂರ್ಯವಂಶಿ ಸರಣಿ ಶ್ರೇಷ್ಠ

ಅಹಮದಾಬಾದ್, ಮೇ 31– ಐಪಿಎಲ್ ಪಂದ್ಯಾವಳಿಯಲ್ಲಿ ಮೊದಲ ಟ್ರೋಫಿ ಗೆಲ್ಲಲು ಬರೋಬ್ಬರಿ 18 ವರ್ಷ ಕಾದಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಸತತ 2ನೇ ಬಾರಿಗೆ ಚಾಂಪಿಯನ್ ಆಗುವ ಮೂಲಕ ಈ ಸಲ ಕೂಡ ಕಪ್ ನಮ್ದೆ ಎಂದು ಬೀಗಿದೆ.

ಮತ್ತೊಮ್ಮೆ ಚಾಂಪಿಯನ್ಸ್ ಆಗುವ ಕನಸಿನೊಂದಿಗೆ 19ನೇ ಆವೃತ್ತಿಯ ಐಪಿಎಲ್ ಪಂದ್ಯಾವಳಿಯಲ್ಲಿ ಕಣಕ್ಕಿಳಿದಿದ್ದ ರಜತ್ ಪಾಟೀದಾರ್ ನಾಯಕತ್ವದ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಇದೀಗ ಮತ್ತೊಮ್ಮೆ ಚಾಂಪಿಯನ್ ಆಗುವ ಮೂಲಕ ಕೋಟ್ಯಾಂತರ ಅಭಿಮಾನಿಗಳ ಆಸೆ ಈಡೇರಿಸಿ, ಇತಿಹಾಸ ನಿರ್ಮಿಸಿದೆ. ಅಲ್ಲದೇ ಸತತ 2ನೇ ಬಾರಿಗೆ ಐಪಿಎಲ್ ಟ್ರೋಫಿಗೆ ಮುತ್ತಿಟ್ಟಿದ್ದು, ಈ ಮೂಲಕ ಚೆನ್ನೈ ಸೂಪರ್ ಕಿಂಗ್ಸ್(2010–2011), ಮುಂಬೈ ಇಂಡಿಯನ್ಸ್ (2019–2020) ಬಳಿಕ ಐಪಿಎಲ್ ಟ್ರೋಫಿ ಉಳಿಸಿಕೊಂಡ 3ನೇ ತಂಡವಾಗಿ ಆರ್‌ಸಿಬಿ (2025–2026) ಹೊರಹೊಮ್ಮಿದೆ. ಈ ಐತಿಹಾಸಿಕ ಗೆಲುವಿನ ಬೆನ್ನಲ್ಲೇ ವಿಶ್ವದಾದ್ಯಂತ ಇರುವ ಕೋಟ್ಯಾಂತರ ಆರ್‌ಸಿಬಿ ಅಭಿಮಾನಿಗಳಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿದ್ದು, 'ಈ ಸಲವೂ ಕಪ್ ನಮ್ದೇ' ಎಂಬ ಘೋಷಣೆ ಎಲ್ಲೆಡೆ ಮೊಳಗುತ್ತಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ಅನ್ನು 5 ವಿಕೆಟ್‌ಗಳಿಂದ ಮಣಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಐಪಿಎಲ್ ಟ್ರೋಫಿ ಹಾಗೂ 20 ಕೋಟಿ ರೂ. ಬಹುಮಾನದೊಂದಿಗೆ ಚಾಂಪಿಯನ್ ಪಟ್ಟ ಅಲಂಕರಿಸಿದರೆ, ಮತ್ತೊಂದೆಡೆ ಗುಜರಾತ್ ಟೈಟಾನ್ಸ್ 13 ಕೋಟಿ ರೂ. ಬಹುಮಾನದೊಂದಿಗೆ ರನ್ನರ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತ್ತು. ಇದರೊಂದಿಗೆ ■ 6ನೇ ಪುಟಕ್ಕೆ




ವೈಯಕ್ತಿಕ ಬಹುಮಾನಗಳ ವಿವರ

ಫೈನಲ್ ಪಂದ್ಯದ ಪಂದ್ಯಶ್ರೇಷ್ಠ:	ವಿರಾಟ್ ಕೊಹ್ಲಿ
ಸರಣಿ ಶ್ರೇಷ್ಠ	: ವೈಭವ್ ಸೂರ್ಯವಂಶಿ
ಹೆಚ್ಚು ರನ್	: ವೈಭವ್ ಸೂರ್ಯವಂಶಿ (776)
ಹೆಚ್ಚು ವಿಕೆಟ್	: ಕಗಿಸೋ ರಬಾಡ (29)
ಹೆಚ್ಚು ಸಿಕ್ಸ್	: ವೈಭವ್ ಸೂರ್ಯವಂಶಿ (72)
ಹೆಚ್ಚು ಫೋರ್ಸ್	: ಸಾಯಿ ಸುದರ್ಶನ್ (75)
ಎಮರ್ಜಿಂಗ್ ಪ್ಲೇಯರ್:	ವೈಭವ್ ಸೂರ್ಯವಂಶಿ
ಅತ್ಯುತ್ತಮ ಕ್ಯಾಚ್	: ಮನೀಶ್ ಪಾಂಡೆ
ಫೇರ್ ಪ್ಲೇ ಅವಾರ್ಡ್	: ಪಂಜಾಬ್ ಕಿಂಗ್ಸ್

ವಂಡರ್ ಕಿಡ್ ಸೂರ್ಯವಂಶಿ ದಾಖಲೆ

ರಾಜಸ್ತಾನ ರಾಯಲ್ಸ್ ತಂಡದ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ಈ ಬಾರಿ 2 ವಿಶಿಷ್ಟ ದಾಖಲೆಗಳನ್ನು ತಮ್ಮದಾಗಿಸಿಕೊಂಡರು. 16 ಪಂದ್ಯಗಳಿಂದ 48.50ರ ಸರಾಸರಿಯಲ್ಲಿ 776 ರನ್ ಕಲೆಹಾಕುವ ಮೂಲಕ ಆರೆಂಜ್ ಕ್ಯಾಪ್ ವಿನ್ನರ್ ಆಗಿದ್ದಾರೆ. ಇದರೊಂದಿಗೆ ಅನ್‌ಕ್ಯಾಪ್ಡ್ ಆಟಗಾರನೊಬ್ಬ ಈ ಪ್ರಶಸ್ತಿ ಗೆದ್ದ ದಾಖಲೆ ಜೊತೆಗೆ, ಆರೆಂಜ್ ಕ್ಯಾಪ್ ಗೆದ್ದ ಅತೀ ಕಿರಿಯ ಆಟಗಾರ ಎಂಬ ದಾಖಲೆ ತಮ್ಮದಾಗಿಸಿಕೊಂಡಿದ್ದಾರೆ. ಹಾಗೆಯೇ ಟೂರ್ನಿಯೊಂದರಲ್ಲಿ ಗರಿಷ್ಠ ಸಿಕ್ಸರ್ ಬಾರಿಸಿದ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಅವರು 16 ಇನ್ನಿಂಗ್ಸ್‌ನಿಂದ 72 ಸಿಕ್ಸರ್ ಬಾರಿಸಿದ್ದಾರೆ. 2013ರಲ್ಲಿ ಕ್ರಿಸ್ ಗೇಲ್ ಅವರು 59 ಸಿಕ್ಸರ್ ಬಾರಿಸಿದ್ದೇ ಇವರೆಗಿನ ದಾಖಲೆಯಾಗಿತ್ತು. ಇದನ್ನು ಮುರಿದು ನೂತನ ದಾಖಲೆ ನಿರ್ಮಿಸಿದ್ದಾರೆ.



ನೂತನ ಮುಖ್ಯಮಂತ್ರಿ ಪ್ರಮಾಣ ವಚನಕ್ಕೆ ಸಕಲ ಸಿದ್ಧತೆ

ಬಣ ಸಮತೋಲಿತ ಸಚಿವ ಸಂಪುಟ ರಚನೆಗೆ ಕಸರತ್ತು

ನಿಯೋಜಿತ ಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಹೈಕಮಾಂಡ್ ಆಯ್ಕೆಗೆ ಸಮಪಾಲು



ಬೆಂಗಳೂರು: ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲು ಡಿ.ಕೆ.ಶಿವಕುಮಾರ್ ಸಜ್ಜಾಗುತ್ತಿದ್ದು, ಈ ನಡುವೆ ಸಚಿವ ಸಂಪುಟ ರಚನೆಗೆ ಕಾಂಗ್ರೆಸ್ ಹೈಕಮಾಂಡ್ ಭಾರೀ ಕಸರತ್ತು ನಡೆಸಿದೆ.

ಪಕ್ಷದ ವಿವಿಧ ಬಣಗಳ ನಡುವೆ ಸಮತೋಲನ ಕಾಯ್ದುಕೊಳ್ಳುವ ಉದ್ದೇಶದಿಂದ 11:11:11 ಸಚಿವ ಸ್ಥಾನಗಳ ಫಾರ್ಮುಲಾ ಅಂತಿಮಗೊಳಿಸುವತ್ತ ಹೈಕಮಾಂಡ್ ಮುಂದಾಗಿದೆ ಎನ್ನಲಾಗಿದೆ. ಮೂಲಗಳ ಪ್ರಕಾರ, ಒಟ್ಟು 34 ಸದಸ್ಯರ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ಸೇರಿದಂತೆ ಸುಮಾರು 11 ಸ್ಥಾನಗಳನ್ನು ಹೈಕಮಾಂಡ್ ಆಯ್ಕೆಯ ನಾಯಕರಿಗೆ, 11 ಸ್ಥಾನಗಳನ್ನು ಮಾಜಿ ಮುಖ್ಯಮಂತ್ರಿ ■ 6ನೇ ಪುಟಕ್ಕೆ

ಪವರ್ ಸೆಂಟರ್ ಆದ ಡಿಕೆಶಿ ನಿವಾಸ

ಇಂದು ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ ದೆಹಲಿಗೆ ದೌಡು

ಬೆಂಗಳೂರು: ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಪುಟ ರಚನೆ ಕಸರತ್ತು ಆರಂಭಿಸಿದ್ದು, ಅವರ ನಿವಾಸಕ್ಕೆ ಮಾಜಿ ಸಚಿವರು ಮತ್ತು ಶಾಸಕರ ದಂಡೇ ಹರಿದು ಬರುತ್ತಿದೆ.

ಡಿ.ಕೆ.ಶಿವಕುಮಾರ್ ನಿಯೋಜಿತ ಮುಖ್ಯಮಂತ್ರಿ ಆಗುತ್ತಿದ್ದಂತೆ ಪ್ರೋಟೋಕಾಲ್ ಪ್ರಕಾರ ಅವರ ನಿವಾಸಕ್ಕೆ ಭದ್ರತೆ ಹೆಚ್ಚಿಸಲಾಗಿದ್ದು, ಕಾರ್ಯಕರ್ತರು, ಸಾರ್ವಜನಿಕರ ಭೇಟಿಗೆ ನಿರ್ಬಂಧ ಹಾಕಲಾಗಿದೆ. ಈ ನಡುವೆ ಬೆಂಗಳೂರಿನ ಸದಾಶಿವನಗರದಲ್ಲಿನ ಡಿಕೆಶಿ ನಿವಾಸ ಪವರ್ ಸೆಂಟರ್ ಆಗಿ ಬದಲಾಗಿದೆ. ಮಾಜಿ ಸಚಿವರಾದ ಎಂ.ಬಿ.ಪಾಟೀಲ್, ಸಂತೋಷ್ ಲಾಡ್, ಪ್ರಿಯಾಂಕ್ ಖರ್ಗೆ, ಮಧು ಬಂಗಾರಪ್ಪ, ಕೆ.ಹೆಚ್.ಮುನಿಯಪ್ಪ, ಟಿ.ಬಿ.ಜಯಚಂದ್ರ, ಶಾಸಕರಾದ ಪುಟ್ಟರಂಗಶೆಟ್ಟಿ, ಅಶೋಕ್ ಪಟ್ಟಣ್, ಕೆ.ವೈ.ನಂಜೇಗೌಡ, ಗಣೇಶ್ ಹುಕ್ಕೇರಿ ಸೇರಿದಂತೆ ಹಲವರು ಭೇಟಿ ನೀಡಿ, ಅಭಿನಂದನೆ ಸಲ್ಲಿಸುವುದರ ಜೊತೆಗೆ ಸಚಿವ ಸ್ಥಾನಕ್ಕೂ ಒತ್ತಡ ಹೇರಿದ್ದಾರೆ ಎನ್ನಲಾಗಿದೆ.

ಡಿಕೆಶಿ ದೆಹಲಿ ಪ್ರಯಾಣ: ಸಾಲು ಸಾಲು ನಾಯಕರು ಸಚಿವ ಸ್ಥಾನಕ್ಕಾಗಿ ಒತ್ತಡ ಹಾಕುತ್ತಿದ್ದಂತೆ, ಡಿ.ಕೆ.ಶಿವಕುಮಾರ್ ಸೋಮವಾರವೇ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ. ಪ್ರಮಾಣ ವಚನ ಕಾರ್ಯಕ್ರಮ ಹಾಗೂ ಸಚಿವರ ಪಟ್ಟಿ ಅಂತಿಮಗೊಳಿಸುವ ಸಂಬಂಧ ಹೈಕಮಾಂಡ್ ನಾಯಕರೊಂದಿಗೆ ಚರ್ಚಿಸಲಿದ್ದಾರೆ. ಇದೇ ವೇಳೆ ತಮ್ಮ ಜೊತೆ ಎಷ್ಟು ಸಚಿವರು ಪ್ರಮಾಣ ವಚನ ಸ್ವೀಕರಿಸಬೇಕು ಎಂಬುದನ್ನೂ ನಿರ್ಧರಿಸಲಿದ್ದಾರೆ ಎನ್ನಲಾಗಿದೆ. ■ 6ನೇ ಪುಟಕ್ಕೆ

ಸ್ಕೂಟರ್ ಉರುಳಿ ಎಳನೀರು ವ್ಯಾಪಾರಿಗಳಿಬ್ಬರ ಸಾವು



ರಾಜನಾಯಕ



ಸುದೀಪ್

ಹುಣಸೂರು, ಮೇ 31– ಸ್ಕೂಟರ್‌ವೊಂದು ನಿಯಂತ್ರಣ ತಪ್ಪಿ ಉರುಳಿ ಬಿದ್ದ ಪರಿಣಾಮ ಎಳನೀರು ವ್ಯಾಪಾರಿಗಳಿಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಮಲಗನ ಕೆರೆಯ ಸಮೀಪ ಹುಣಸೂರು–ಮಾಕೋಡು ರಸ್ತೆಯಲ್ಲಿ ಭಾನುವಾರ ಸಂಜೆ ಸಂಭವಿಸಿದೆ.

ತಾಲೂಕಿನ ಗಾವಡಗೆರೆ ಹೋಬಳಿಯ ಮರೂರು ಗ್ರಾಮದ ತಮ್ಮ ನಾಯಕ ಅವರ ಪುತ್ರ ರಾಜನಾಯಕ (38), ಸಣ್ಣ ನಾಯಕ ಅವರ ಪುತ್ರ ಸುದೀಪ್(25) ಸ್ಥಳದಲ್ಲೇ ಸಾವನ್ನಪ್ಪಿದ ಯುವಕರು. ರಾಜನಾಯಕ ಮದುವೆಯಾಗಿದ್ದು ಇಬ್ಬರು ಮಕ್ಕಳಿದ್ದರೆ ಸುದೀಪ್ 8 ತಿಂಗಳ ಹಿಂದೆ ಪ್ರೀತಿಸಿ ವಿವಾಹವಾಗಿದ್ದ.

ರಾಜನಾಯಕ ಮತ್ತು ಸುದೀಪ್ ಒಂದೇ ಗ್ರಾಮದವರಾಗಿದ್ದು ಇಬ್ಬರು ಸ್ನೇಹಿತರು. ಇವರಿಬ್ಬರು ಎಳನೀರು ವ್ಯಾಪಾರಿಗಳಾಗಿದ್ದು, ಎಳನೀರು ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಸೋಮವಾರ ವ್ಯಾಪಾರಕ್ಕೆ ಎಳನೀರು ಬೇಕಾಗಿದ್ದರಿಂದ ತೋಟಗಳನ್ನು ನೋಡಿಕೊಂಡು ಬರಲು ಹೋಗಿದ್ದರು. ವಾಪಸ್ ಬರುವಾಗ ಮಲಗನಕೆರೆ ತಿರುವಿನಲ್ಲಿ ನಿಯಂತ್ರಣ ತಪ್ಪಿ ಸ್ಕೂಟರ್ ಉರುಳಿ ಬಿದ್ದ ಪರಿಣಾಮ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿದ್ದಾರೆ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಮಹಜರು ನಡೆಸಿ ದೂರು ದಾಖಲಿಸಿಕೊಂಡಿದ್ದಾರೆ.

ಮುಖ್ಯಮಂತ್ರಿ ಪ್ರಮಾಣ ವಚನದ ನಂತರವೇ ನೂತನ ಸಂಪುಟ ರಚನೆಯ ಸ್ಪಷ್ಟತೆ

ಈ ಸಂಬಂಧ ಇನ್ನೂ ಪ್ರಸ್ತಾವನೆ ಬಂದಿಲ್ಲ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾಹಿತಿ

ಕಲಬುರುಗಿ, ಮೇ 31– ಮುಖ್ಯಮಂತ್ರಿ ಪ್ರಮಾಣ ವಚನದ ನಂತರವೇ ಸಂಪುಟ ರಚನೆ ಕುರಿತು ಹೆಚ್ಚಿನ ಸ್ಪಷ್ಟತೆ ಹೊರಬರಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕಲಬುರಗಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೂನ್ 3ರಂದು ಪ್ರಮಾಣ ವಚನ ಸ್ವೀಕಾರ ಸಮಾರಂಭದ ನಂತರ ಸಚಿವರು ಹಾಗೂ ಪ್ರಮುಖ ನೇಮಕಾತಿಗಳ ಕುರಿತು ಸಮಾಲೋಚಿಸಿದ ನಂತರ ನಿರ್ಧಾರ ತೆಗೆದುಕೊಳ್ಳಲಾಗುವುದು. ಅಲ್ಲಿಯವರೆಗೆ ನಾವು ಕಾಯಬೇಕಾಗಿದೆ ಎಂದರು.

ಪ್ರಸ್ತಾವನೆ ಬಂದಿಲ್ಲ: ಮುಖ್ಯಮಂತ್ರಿಯಾಗಿ ನೇಮಕಗೊಂಡಿರುವ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರ ರಚನೆ ಕುರಿತು ಚರ್ಚೆಗಳು ನಡೆಯುತ್ತಿವೆ. ಆದರೆ, ನೂತನ ಸಚಿವ ಸಂಪುಟ ರಚನೆಗೆ ಸಂಬಂಧಿಸಿದಂತೆ ಪಕ್ಷದ ನಾಯಕತ್ವಕ್ಕೆ ಇನ್ನೂ ಯಾವುದೇ ಪ್ರಸ್ತಾವನೆ ಬಂದಿಲ್ಲ. ಪ್ರಸ್ತಾವನೆ ಬಂದ ನಂತರ ಎಷ್ಟು ಸಚಿವರು ಮತ್ತು ಉಪಮುಖ್ಯಮಂತ್ರಿಗಳನ್ನು ನೇಮಿಸಬೇಕು, ಅದರೊಂದಿಗೆ ಪ್ರಮುಖ ಅಧ್ಯಕ್ಷ ಸ್ಥಾನಗಳನ್ನು ಸಹ ತುಂಬಬೇಕೇ ಎಂಬುದರ ಕುರಿತು ಚರ್ಚೆ ನಡೆಯಲಿದೆ ಎಂದು ತಿಳಿಸಿದರು.



ಎರಡು ಹಂತದಲ್ಲಿ ಅವಕಾಶ: ಹಂತ ಹಂತವಾಗಿ ಸಚಿವ ಸಂಪುಟ ವಿಸ್ತರಣೆಯ ಸಾಧ್ಯತೆಯ ಕುರಿತು ಮಾತನಾಡಿದ ಖರ್ಗೆ, ನಿಯೋಜಿತ ಮುಖ್ಯಮಂತ್ರಿಯಿಂದ ಪಕ್ಷಕ್ಕೆ ಇನ್ನೂ ಯಾವುದೇ ವಿವರಗಳು ಬಂದಿಲ್ಲ. ಅವರು ಎಂಟು ಅಥವಾ ಹತ್ತು ಸಚಿವರನ್ನು ನೇಮಿಸುತ್ತಾರೋ ಇಲ್ಲವೋ ಎಂಬ ಪ್ರಸ್ತಾವನೆ ನಮಗೆ ತಲುಪಿಲ್ಲ. ಅದು ಬಂದ ನಂತರ, ಮೊದಲು ಒಂದು ಹಂತವನ್ನು ಪೂರ್ಣಗೊಳಿಸಬಹುದು. ನಂತರ 15 ದಿನ ಅಥವಾ ಒಂದು ತಿಂಗಳ ನಂತರ, ಉಳಿದ ಸ್ಥಾನಗಳಿಗೆ ಮತ್ತೊಂದು ಹಂತದಲ್ಲಿ ಸಂಪುಟ ವಿಸ್ತರಣೆ ಮೂಲಕ ಉಳಿದ ಸದಸ್ಯರಿಗೂ ಅವಕಾಶ ಕಲ್ಪಿಸಬೇಕು ಎಂಬ ಕಲ್ಪನೆ ಇದೆ. ಆ ನಿಟ್ಟಿನಲ್ಲಿ ಚರ್ಚೆಯೂ ಅಸ್ತಿತ್ವದಲ್ಲಿದೆ. ಆದರೆ ನಿಯೋಜಿತ ಮುಖ್ಯಮಂತ್ರಿ ನಿಖರವಾಗಿ ಏನು ■ 6ನೇ ಪುಟಕ್ಕೆ

ಡಿಕೆಶಿ ಪ್ರಮಾಣ ವಚನ ದಿನವೇ ಹೊಸ ಕಾಂಗ್ರೆಸ್ ಭವನಕ್ಕೆ ರಾಹುಲ್ ಗಾಂಧಿ ಶಂಕುಸ್ಥಾಪನೆ ಸಾಧ್ಯತೆ

ಬೆಂಗಳೂರು: ಡಿ.ಕೆ.ಶಿವಕುಮಾರ್ ಅವರು ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ದಿನವೇ ಕಾಂಗ್ರೆಸ್ ಭವನಕ್ಕೆ ಶಂಕುಸ್ಥಾಪನೆ ನೆರವೇರುವ ಸಾಧ್ಯತೆ ಇದೆ.



ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಮುನ್ನವೇ ಸಕ್ರಿಯವಾಗಿರುವ ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭಾನುವಾರ ಬೆಂಗಳೂರಿನ ರೇಸ್‌ಕೋರ್ಸ್ ಸಮೀಪದಲ್ಲಿನ ಹೊಸ ಕಾಂಗ್ರೆಸ್ ಭವನ ನಿರ್ಮಾಣ ಸ್ಥಳವನ್ನು ಪರಿಶೀಲಿಸಿ, ಮಾಧ್ಯಮಗಳೊಂದಿಗೆ ಈ ವಿಚಾರ ಹಂಚಿಕೊಂಡರು. ಪ್ರಮಾಣವಚನ ಸಮಾರಂಭದ ನಂತರ ■ 6ನೇ ಪುಟಕ್ಕೆ

ಡಿಸಿಎಂ ಪಟ್ಟ, ಸಚಿವ ಸ್ಥಾನಕ್ಕೆ ಹೆಚ್ಚಿದ ಲಾಬಿ

ಬೆಂಗಳೂರು: ನೂತನ ಮುಖ್ಯಮಂತ್ರಿ ಆಯ್ಕೆ ಬೆನ್ನಲ್ಲೇ ಉಪಮುಖ್ಯಮಂತ್ರಿ ಹಾಗೂ ಸಚಿವ ಸ್ಥಾನಕ್ಕಾಗಿ ಕಾಂಗ್ರೆಸ್ ಪಾಳಯದಲ್ಲಿ ಲಾಬಿ ಮತ್ತಷ್ಟು ಜೋರಾಗಿದೆ.

ಉಪಮುಖ್ಯಮಂತ್ರಿ ಸ್ಥಾನಗಳು, ಸಚಿವ ಸಂಪುಟ ರಚನೆ ಸಂಬಂಧ ಇನ್ನೂ ಪ್ರಸ್ತಾವ ಬಂದಿಲ್ಲ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ನಡುವೆಯೂ ಶಾಸಕರಲ್ಲಿ ತೆರೆಮರೆ ಪೈಪೋಟಿ ನಡೆದಿದೆ. ಬೆಂಬಲಿಗರು, ಸಮುದಾಯದ ಮುಖಂಡರು, ಮಠಾಧೀಶರು ತಮ್ಮ ತಮ್ಮ ಶಾಸಕರ ಪರವಾಗಿ ಒತ್ತಡ ಹೇರುತ್ತಿದ್ದಾರೆ. ಜಾತಿ ಲೆಕ್ಕಾಚಾರದಲ್ಲೂ ಹಕ್ಕೊತ್ತಾಯ ಮಂಡಿಸುತ್ತಿದ್ದಾರೆ.

ಡಿಸಿಎಂ ಪಟ್ಟಕ್ಕೆ ಪಟ್ಟು: ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ ಖಚಿತವಾಗುವವರೆಗೂ ದಲಿತ ■ 6ನೇ ಪುಟಕ್ಕೆ

ರಕ್ಷಣಾ ಪಡೆಗಳ ನೂತನ ಮುಖ್ಯಸ್ಥರಾಗಿ ರಾಜಾ ಸುಬ್ರಮಣಿ ಅಧಿಕಾರ ಸ್ವೀಕಾರ

ನವದೆಹಲಿ, ಮೇ 31– ಭಾರತದ ರಕ್ಷಣಾ ಪಡೆಗಳ ನೂತನ ಮುಖ್ಯಸ್ಥರಾಗಿ ಜನರಲ್ ಎನ್.ಎಸ್.ರಾಜಾ ಸುಬ್ರಮಣಿ ಭಾನುವಾರ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ನಿವೃತ್ತರಾಗಿರುವ ಜನರಲ್ ಅನಿಲ್ ಚೌಹಾಣ್ ಅವರ ಸ್ಥಾನವನ್ನು ಎನ್.ಎಸ್.ರಾಜಾ ಸುಬ್ರಮಣಿ ಅವರು ಭರ್ತಿ ಮಾಡಿದ್ದು, ದೇಶದ ಉನ್ನತ ಸೇನಾ ಹುದ್ದೆಯನ್ನು ವಹಿಸಿಕೊಂಡಿದ್ದಾರೆ.

ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ಸೇನಾ ಸಂಘಟನೆಗಳಲ್ಲಿ ಸುಧಾರಣೆ, ಸಶಸ್ತ್ರ ಪಡೆಗಳ ಪರಿವರ್ತನೆ ಹಾಗೂ ಮೂರು ಸೇನೆಗಳ ನಡುವೆ ಹೆಚ್ಚಿನ ಸಮನ್ವಯತೆ ಸಾಧಿಸುವುದು ತಮ್ಮ ತಕ್ಷಣದ ಆದ್ಯತೆಯಾಗಿದೆ ಎಂದು ಹೇಳಿದರು.

ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಶಸ್ತ್ರಾಸ್ತ್ರಗಳ ಅಭಿವೃದ್ಧಿ, ಸೇನೆಗೆ ಸೇರ್ಪಡೆ ಹಾಗೂ ಅವುಗಳ ಸಮಗ್ರ ಬಳಕೆಗೆ ವೇಗ ನೀಡುತ್ತೇವೆ. ಇದೇ ವೇಳೆ ಆತ್ಮನಿರ್ಭರ ಭಾರತ ಪರಿಕಲ್ಪನೆಗೆ ಅನುಗುಣವಾಗಿ ರಕ್ಷಣಾ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸುವುದಾಗಿ ಭರವಸೆ ನೀಡಿದ್ದಾರೆ.

ಸಿಡಿಎಸ್ ಆಗಿ ರಾಜಾ ಸುಬ್ರಮಣಿ ಅವರ ಪ್ರಮುಖ ಹೊಣೆಗಾರಿಕೆ, ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಮಿಲಿಟರಿ ಥಿಯೇಟರೈಸೇಶನ್ ಯೋಜನೆ ಜಾರಿಗೊಳಿಸುವುದಾಗಿದೆ. ಇದರಡಿ ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಯ ಕಾರ್ಯಾಚರಣೆಗಳನ್ನು ಏಕೀಕೃತ ಕಮಾಂಡ್ ವ್ಯವಸ್ಥೆಯಡಿ ತರಲು ಪ್ರಯತ್ನಿಸಲಾಗುತ್ತಿದೆ ಎಂದು ತಿಳಿದುಬಂದಿದೆ.



ಎನ್.ಎಸ್.ರಾಜಾ ಸುಬ್ರಮಣಿ

ನಾಲ್ಕು ದಶಕಗಳ ಸೇವೆ: ಸುಮಾರು 40 ವರ್ಷಗಳ ಸೇನಾ ಸೇವೆಯಲ್ಲಿ ರಾಜಾ ಸುಬ್ರಮಣಿ ವಿವಿಧ ಕಮಾಂಡ್, ಆಡಳಿತ ಹಾಗೂ ತರಬೇತಿ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಕೇಂದ್ರ ಕಮಾಂಡ್‌ನ ಮುಖ್ಯಸ್ಥರಾಗಿ ನಂತರ 2024ರಿಂದ 2025ರವರೆಗೆ ಉಪ ಸೇನಾ ■ 6ನೇ ಪುಟಕ್ಕೆ

ಮೈಸೂರು ನಗರದಲ್ಲಿ 209.17 ಕೋಟಿ ನೀರಿನ ಬಿಲ್ ಬಾಕಿ

ಪಾಲಿಕೆ ಕ್ರಮ ಜರುಗಿಸದಿದ್ದರೆ ಮುಂದಿನ ದಿನಗಳ ಬಿಲ್ಲಿನ ಮೊತ್ತ ದುಪ್ಪಟ್ಟಾಗಲಿದೆ

ಮೈಸೂರು, ಮೇ31(ಜಿಎ)– ಮೈಸೂರು ನಗರದಲ್ಲಿರುವ ವಿವಿಧ ಸರ್ಕಾರಿ ಇಲಾಖೆಗಳು, ವಾಣಿಜ್ಯ ಕಟ್ಟಡಗಳು, ಗೃಹಬಳಕೆ ಹಾಗೂ ಕೈಗಾರಿಕೆಗಳು ಬರೋಬ್ಬರಿ 209.17 ಕೋಟಿ ರೂ. ನೀರಿನ ಬಿಲ್ ಬಾಕಿ ಉಳಿಸಿಕೊಂಡಿದ್ದು, ಇಲಾಖೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಂಡು ಬಾಕಿ ವಸೂಲಿ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಬಾಕಿ ಮತ್ತಷ್ಟು ಕೋಟಿಗಳಾಗುವ ಸಾಧ್ಯತೆ ಇದೆ.

ಮೈಸೂರು ಮಹಾನಗರ ಪಾಲಿಕೆಯ ವಾಣಿವಿಲಾಸ ನೀರು ಸರಬರಾಜು ಹಾಗೂ ಒಳಚರಂಡಿ ವಿಭಾಗದಿಂದ ಸರ್ಕಾರಿ ಇಲಾಖೆಗಳು, ಕೈಗಾರಿಕೆಗಳು ವಾಣಿಜ್ಯ ಮಳಿಗೆಗಳು ಹಾಗೂ ಗೃಹ ಬಳಕೆಗೆ ನೀರಿನ ಸಂಪರ್ಕ ಪಡೆದು ಕೊಂಡಿದ್ದು ಇದಕ್ಕೆ ವಾಣಿ ವಿಲಾಸ ನೀರು ಸರಬರಾಜು ಹಾಗೂ ಒಳಚರಂಡಿ ವಿಭಾಗದಿಂದ ಪ್ರತಿ ತಿಂಗಳು ಬಿಲ್ ನೀಡಲಾಗುತ್ತಿದೆ. ಆದರೆ ಹಲವಾರು ವರ್ಷಗಳಿಂದ ನೀರಿನ ಬಿಲ್ ಪಾವತಿಸದೆ ಸರ್ಕಾರಿ ಸ್ವಾಮ್ಯದ ಇಲಾಖೆಗಳು 41,04,48,436 ರೂ. ಬಾಕಿ ಉಳಿಸಿಕೊಂಡಿದ್ದರೆ, ಮತ್ತೊಂದೆಡೆ ವಾಣಿಜ್ಯ, ಗೃಹಬಳಕೆ, ಕೈಗಾರಿಕೆಗಳು 168,13, 13,525 ರೂ.ಗಳನ್ನು ಬಾಕಿ ಉಳಿಸಿಕೊಂಡಿದ್ದು, ಒಟ್ಟಾರೆ ಮೊತ್ತ 209,17,61,961 ರೂ.ಗಳನ್ನು ಬಾಕಿ ಉಳಿಸಿಕೊಂಡಿದೆ. ಪಾಲಿಕೆಯೂ ನೀರಿನ ದರವನ್ನು ಪರಿಷ್ಕರಿಸಿ ಶೇ.36ರಷ್ಟು ಏರಿಕೆ ಮಾಡಿದೆ. ಪರಿಷ್ಕೃತ ದರವನ್ನು ಏ.1ರಿಂದ ಜಾರಿಗೊಳಿಸಲಾಗಿದೆ ಅದರಂತೆ ಕನಿಷ್ಠ ಮಾಸಿಕ ಶುಲ್ಕವನ್ನು 125ರಿಂದ 163 ರೂ.ಗೆ ಏರಿಸಲಾಗಿದೆ ನಂತರ ಪ್ರತಿ 25 ಸಾವಿರ ಲೀ.ಗೆ 6.50 ರೂ. ನಂತರ 25ರಿಂದ 50 ಲೀ.ಗೆ 10 ರೂ., 50ರಿಂದ 75 ಲೀ.ಗೆ 15 ರೂ, 75ರಿಂದ 1 ಲಕ್ಷ ಲೀ.ಗೆ 20 ರೂ. 1 ಲಕ್ಷಕ್ಕೂ ಹೆಚ್ಚು ಬಳಸಿದರೆ 25 ರೂ.ಗಳನ್ನು ಹೆಚ್ಚಿಸಿದೆ. ಇದಲ್ಲದೆ ಯುಜಿಡಿ ಸೆಸ್ ಕೂಡ ಹೆಚ್ಚಳವಾಗಿದ್ದು ನೀರಿನ ಬಿಲ್‌ನ ಶೇ.30ರಷ್ಟಿದ್ದ ಒಳಚರಂಡಿ ಸೆಸ್‌ನನ್ನು ಶೇ.40ಕ್ಕೆ ಹೆಚ್ಚಿಸಲಾಗಿದೆ.

ಈಗಾಗಲೇ ಪಾಲಿಕೆ ನೀರಿನ ದರ ಏರಿಕೆ ಮಾಡಿ ವಾಣಿವಿಲಾಸ ವಿಭಾಗ ಅದನ್ನು ಅನುಷ್ಠಾನಗೊಳಿಸಿ ಎಲ್ಲರ ಮನೆ, ವಾಣಿಜ್ಯ ಕಟ್ಟಡ, ಕೈಗಾರಿಕೆಗಳು, ಸರ್ಕಾರಿ ಇಲಾಖೆಗಳಿಗೆ ಹೊಸ ನೀರಿನ ಬಿಲ್ ಕಳುಹಿಸಿದ್ದು, ಈಗಾಗಲೇ ಇವರೆಲ್ಲರೂ ನೀರಿನ ಬಿಲ್ ಅನ್ನು 209.17 ಕೋಟಿ ಬಾಕಿ ಉಳಿಸಿಕೊಂಡಿದ್ದು, ಇದನ್ನು ಪಾವತಿಸದಿದ್ದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ನೂರಾರು ಕೋಟಿ ಬಿಲ್ ಬಾಕಿ ಉಳಿಯಲಿದೆ. ಈ ಬಗ್ಗೆ ಮೈಸೂರು ಪಾಲಿಕೆ ಎಚ್ಚೆತ್ತು ಕೊಂಡು ವಿಶೇಷ ಕಾರ್ಯಾಚರಣೆ ಮಾಡಿ ಬಾಕಿ ಉಳಿದಿರುವ ಬಿಲ್‌ಗಳನ್ನು ವಸೂಲಿ ಮಾಡದಿದ್ದರೆ ಪಾಲಿಕೆ ಬೊಕ್ಕಸಕ್ಕೆ ಭಾರೀ ಹೊಡೆತ ಬೀಳಲಿದೆ.



ಮೈಸೂರು ಪಾಲಿಕೆಯಿಂದಲೂ ನೀರಿನ ಬಿಲ್ ಬಾಕಿ!

ವಿಪರ್ಯಾಸವೆಂದರೆ, ಮೈಸೂರು ಪಾಲಿಕೆ ನೀರಿನ ಬಿಲ್ ಬಾಕಿದಾರರ ಪಟ್ಟಿಯಲ್ಲಿ ಸೇರಿದ್ದು, ತನ್ನದೇ ಆದ ನೀರು ಸರಬರಾಜು ವಿಭಾಗವಾದ ವಾಣಿ ವಿಲಾಸ ವಾಟರ್ ವರ್ಕ್ಸ್‌ಗೆ 5,25,384 ರೂ. ಬಾಕಿ ಉಳಿಸಿಕೊಂಡಿದೆ. ತನ್ನದೇ ಆದ ಇಲಾಖೆಗೆ ಬಾಕಿ ಪಾವತಿಸಲು ವಿಫಲವಾಗಿದ್ದು, ಇತರ ಬಾಕಿದಾರರಿಂದ ಬಾಕಿ ಪಾವತಿದಾರರನ್ನು ವಸೂಲಿ ಮಾಡಲು ನಾಗರಿಕ ಸಂಸ್ಥೆ ಎಷ್ಟು ಪರಿಣಾಮಕಾರಿಯಾಗಿ ಒತ್ತಾಯಿಸುತ್ತದೆ ಎಂಬ ಪ್ರಶ್ನೆ ಎದುರಾಗಿದೆ.

ಅತೀ ಹೆಚ್ಚು ಬಾಕಿ ಉಳಿಸಿಕೊಂಡಿರುವ ಸರ್ಕಾರಿ ಇಲಾಖೆಗಳು

ರೈಲ್ವೇ ಇಲಾಖೆ:	20,83,66,587
ಪೊಲೀಸ್ ಇಲಾಖೆ:	8,52,82,417
ಶಿಕ್ಷಣ ಇಲಾಖೆ:	3,33,12,804
ಜಿಲ್ಲಾ ಪೊಲೀಸ್:	1,38,29,036
ಆರೋಗ್ಯ ಇಲಾಖೆ:	1,13,44,542
ಸಮಾಜ ಕಲ್ಯಾಣ ಇಲಾಖೆ:	87,10,778
ಲೋಕೋಪಯೋಗಿ ಇಲಾಖೆ:	64,94, 614
ಕಾರಾಗೃಹ:	47,26,824
ಎಂಡಿಎ:	14,46,985
ಜೆಸಿಓ(ಜೂನಿಯರ್ ಕಮಿಷನ್ಡ್ ಆಫಿಸರ್):	13,84,339
ಮೈಸೂರು ವಿವಿ:	22,47,337
ಆರ್‌ಟಿಓ:	12,11,343
ಕೆಎಂಎಫ್:	12,85,710
ತೋಟಗಾರಿಕೆ ಇಲಾಖೆ:	8,20,081
ಎಟಿಐ:	8,68,872
ಮೈಸೂರು ಮಹಾನಗರಪಾಲಿಕೆ:	5,25,384

ಸರ್ಕಾರಿ ಇಲಾಖೆ ಹೊರತುಪಡಿಸಿ

ವಾಣಿಜ್ಯ:	13,24,98,203
ಗೃಹಬಳಕೆ:	1,29,66,65,109
ಕೈಗಾರಿಕೆ:	5,44,50,614
ಗೃಹೇತರ (ನಿರ್ಮಾಣ ಹಂತದಲ್ಲಿರುವ ಕಟ್ಟಡ):	17,22,60,272

ನಕ್ಕರೆ ಅದೇ ಸ್ವರ್ಗ

ಟೀಚರ್ : ಮಕ್ಕಳೇ ನಾವೆಲ್ಲಾ ಯುದ್ಧದಲ್ಲಿ ಇದ್ದೇವೆ ಎಂದು ಊಹಿಸಿಕೊಂಡು ಒಂದು ಪ್ರಬಂಧ ಬರೆಯಿರಿ.

ಅರ್ಧ ಗಂಟೆಯ ನಂತರ.

ಟೀಚರ್ : ನೀನೇಕೆ ಏನೂ ಬರೆಯುತ್ತಿಲ್ಲ ಗುಂಡ?

ಗುಂಡ : ಯುದ್ಧದ ಆರಂಭದಲ್ಲಿ ಶತ್ರುಗಳು ನನ್ನನ್ನು ಕೊಂದು ಹಾಕಿದರು.

ಮೈಸೂರು ಮಿತ್ರ

ಸೋಮವಾರ, ಜೂನ್ 1, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಾವು ಮುಚ್ಚಿದ ಬಾಗಿಲಿನತ್ತಲೇ ಹೆಚ್ಚು ಹೊತ್ತು ನೋಡುತ್ತಿದ್ದರೆ, ತೆರೆದಿರುವ ದ್ವಾರ ನಮಗೆ ಕಾಣುವುದೇ ಇಲ್ಲ. –ಹೆಲನ್ ಕೆಲ್ಲರ್

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು } 'ದೀಪದ ಕೆಳಗೆ ಯಾವತ್ತೂ ಕತ್ತಲೆ'

ನಿಮ್ಮ ಪತ್ರಗಳು

ತಮಿಳುನಾಡಿನಂತೆ ಕರ್ನಾಟಕದಲ್ಲೂ ಖಾಸಗಿ ಶಾಲೆಗಳ ಶುಲ್ಕದ ಬಗ್ಗೆ ನಿರ್ಧಾರ ಕೈಗೊಳ್ಳಲಿ

ಮಾನ್ಯರೆ,

ತಮಿಳುನಾಡಿನ ಮುಖ್ಯಮಂತ್ರಿ ಜೋಸೆಫ್ ವಿಜಯ್ ರಾಜ್ಯದ ಎಲ್ಲ ಖಾಸಗಿ ಶಾಲೆಗಳ ಪ್ರವೇಶಕ್ಕಾಗಿ ಸರ್ಕಾರ ನಿಗದಿಪಡಿಸಿರುವ ಶುಲ್ಕವನ್ನು ಶಾಲೆಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕು. ಹೆಚ್ಚಿನ ಶುಲ್ಕವನ್ನು ಪಡೆಯಬಾರದು ಎಂದು ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ. ಒಂದು ವೇಳೆ ಹೆಚ್ಚಿನ ಶುಲ್ಕವನ್ನು ಪಡೆದರೆ, ಆ ಶಾಲೆಯ ಮಾನ್ಯತೆ ರದ್ದುಪಡಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಅಲ್ಲದೆ ಪೋಷಕರಿಂದ ಗುಪ್ತ ಪ್ರವೇಶ ಶುಲ್ಕವನ್ನು (ರಸೀದಿ ನೀಡದೆ ವಸೂಲಿ ಮಾಡುವ ಹಣ), ಬಲವಂತವಾಗಿ ವಸೂಲಿ ಮಾಡದಂತೆ ಸರ್ಕಾರ ಆದೇಶ ಹೊರಡಿಸಿದೆ. ಈ ಬಗ್ಗೆ ಪೋಷಕರಿಂದ ದೂರು ಬಂದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳೇ ಹೇಳಿದ್ದಾರೆ.

ನಮ್ಮ ರಾಜ್ಯದ ಮುಂದಿನ ಮುಖ್ಯಮಂತ್ರಿಯಾಗುವ ಡಿ.ಕೆ.ಶಿವಕುಮಾರ್ ಅವರು ನಮ್ಮ ರಾಜ್ಯದಲ್ಲೂ ಇಂತಹ ಕಟ್ಟುನಿಟ್ಟಿನ ಆದೇಶ ಜಾರಿಗೊಳಿಸಲಿ. ನಮ್ಮ ರಾಜ್ಯದಲ್ಲಿ ಬಹುತೇಕ ಖಾಸಗಿ ಶಾಲೆಗಳು ತಮ್ಮ ಮನೊಸೋ ಇಚ್ಚೆ ಪ್ರವೇಶ ಶುಲ್ಕವನ್ನು ವಸೂಲಿ ಮಾಡುತ್ತಿವೆ. ಇದಕ್ಕೆ ಹೊಸ ಸರ್ಕಾರ ಕಡಿವಾಣ ಹಾಕಬೇಕು. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**

ಡಿಕೆಶಿಯವರ ಶ್ರಮ ಸಾರ್ಥಕ!

ಮಾನ್ಯರೇ,



ಜೂ.3ಕ್ಕೆ ಡಿಕೆಶಿಯವರು ಮುಖ್ಯಮಂತ್ರಿಯಾಗಿ ಪದಗ್ರಹಣ.
ಕೊನೆಗೂ ಶಬರಿ ತರಹ ಕಾದಿದ್ದಕ್ಕೂ ಸಾರ್ಥಕವಾಯಿತು.
ಭೀಷ್ಮನ ತರಹ ಹಟ ಮಾಡಿದ್ದಕ್ಕೂ ಧೃಡವಾಯಿತು.
ಧರ್ಮರಾಯನ ತರಹ ತಾಳ್ಮೆಯಿಂದ
ಇದ್ದುದ್ದಕ್ಕೂ ಜಯ ದೊರಕಿತು.
ದೇವರ ಮೇಲಿನ ನಂಬಿಕೆ ವಿಶ್ವಾಸ
ಇಟ್ಟಿದ್ದಕ್ಕೂ ಪ್ರತಿಫಲ ಪ್ರಾಪ್ತಿಯಾಯಿತು.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಕೆ.ಆರ್.ಆಸ್ಪತ್ರೆಯಲ್ಲಿ ನರಕಯಾತನೆ

ಮಾನ್ಯರೆ,

ಮೈಸೂರಿನ ಹೃದಯ ಭಾಗದಲ್ಲಿರುವ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕಳೆದ



ಹಲವಾರು ವರ್ಷಗಳಿಂದ ಆಸ್ಪತ್ರೆಗೆ ಬರುವ ರೋಗಿಗಳು ನರಕಯಾತನೆ ಅನುಭವಿಸುತ್ತಿರುವುದು ಸರ್ವೇ ಸಾಮಾನ್ಯವಾಗಿದೆ ೦೨`೨೦ ವ` ಸರ್ಕಾರಗಳೇ ಬರಲಿ ಕೆ.ಆರ್.ಆಸ್ಪತ್ರೆಯಲ್ಲಿ ರೋಗಿಗಳಿಗೆ ಉತ್ತಮ ಸೇವೆ ನೀಡಲು ಸಾಧ್ಯವಾಗದೆ ಇರುವುದು ದುರಂತವೇ ಸರಿ.

ಹಗಲೊತ್ತಿನಲ್ಲಿ ಐದು ಬಿಲ್ಲಿಂಗ್ ಕೌಂಟರ್, ಒಳರೋಗಿಗಳಿಗೆ ಮೂರು ಕೌಂಟರ್, ಹೊರರೋಗಿಗಳಿಗೆ ಚೀಟಿ ನೀಡಲು ಐದು ಕೌಂಟರ್ ಇದ್ದು, ರಾತ್ರಿ ವೇಳೆ ಇದೆಲ್ಲದಕ್ಕೂ ಒಂದೇ ಕೌಂಟರ್ ಇರುವುದರಿಂದ ಅಪಘಾತ, ಹಲ್ಲೆ, ವಿಷಸೇವನೆ, ಆತ್ಮಹತ್ಯೆ ಕೇಸುಗಳು ರಾತ್ರಿ ವೇಳೆ ಹೆಚ್ಚಾಗಿ ಬರುತ್ತಿರುವುದರಿಂದ ಹಗಲಿನಲ್ಲಿ ಸಿಗುವ ಸೇವೆಯಲ್ಲಿ ಅರ್ಧದಷ್ಟು ಸೇವೆ ಸಿಗುತ್ತಿಲ್ಲ.


ರಕ್ತ ಮತ್ತು ಮೂತ್ರ ಪರೀಕ್ಷೆಗೆ ಸ್ಯಾಂಪಲ್ ಪಡೆಯುವ ವಿಭಾಗದಲ್ಲಿ ಹಗಲೊತ್ತಿನಲ್ಲೇ ನಿಧಾನವೆಂದು ಪರದಾಡುವ ರೋಗಿಗಳ ಸಂಬಂಧಿಕರು ರಾತ್ರಿ ವೇಳೆ ಸಾಕಪ್ಪಾ ಈ ಆಸ್ಪತ್ರೆಯ ಸಹವಾಸ ಎನ್ನುವ ದುಸ್ಥಿತಿ ಉಂಟಾಗಿರುವುದು ವಿಪರ್ಯಾಸ. ರಕ್ತದ ಸ್ಯಾಂಪಲ್ ಪಡೆದ ನಂತರ ಬಿಲ್ ಕಟ್ಟಲು ತಡವಾಗುವುದರಿಂದ ರಕ್ತದ ಸ್ಯಾಂಪಲ್ ಹೆಪ್ಪುಗಟ್ಟಿ ಮತ್ತೊಮ್ಮೆ ರಕ್ತದ ಸ್ಯಾಂಪಲ್ ತರಲು ಹೇಳುವುದರಿಂದ ರೋಗಿಗಳು ಪರಿತಪಿಸುವಂತಾಗಿದೆ.

ಸರತಿ ಸಾಲಿನಲ್ಲಿ ನಿಲ್ಲುವ ರೋಗಿಗಳಿಗೆ ಕುಳಿತುಕೊಳ್ಳಲು ಆಸನ ವ್ಯವಸ್ಥೆ, ಕುಡಿಯಲು ನೀರು ಸಹ ಇಲ್ಲವಾಗಿದೆ. ಇನ್ನು ಮುಂದಾದರೂ ಸಂಬಂಧಪಟವರು ರಕ್ತ, ಮೂತ್ರ, ತುರ್ತು ಪರೀಕ್ಷೆಯ ಸ್ಯಾಂಪಲ್‌ಗಳನ್ನು ನೇರವಾಗಿ ಲ್ಯಾಬ್‌ಗೆ ಕಳುಹಿಸಲು ದಿನದ 24 ಗಂಟೆ ಕೌಂಟರ್ ತೆರೆದು ರೋಗಿಗಳಿಗೆ ಉತ್ತಮ ಸೇವೆ ನೀಡುವುದು ಒಳ್ಳೆಯದು. **–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**

ಸಿಎನ್‌ಜಿ ಬೆಲೆ ಏರಿಕೆ ನ್ಯಾಯಸಮ್ಮತವೇ?

ಮಾನ್ಯರೆ,

ಸರಕಾರಗಳು ಸಿಎನ್‌ಜಿ ದರ ಮತ್ತೆ 3 ರೂ. ಹೆಚ್ಚಿಸಿ, 88 ರೂ.ಗೆ ಏರಿಸಿರುವುದು ಕೇವಲ ಅಂಕಿ ಅಂಶಗಳ ಆಟವಲ್ಲ; ಇದು ಮಧ್ಯಮ ವರ್ಗದ ಬದುಕಿನ ಮೇಲಿನ ಆರ್ಥಿಕ ಸರ್ಜಿಕಲ್ ಸ್ಟ್ರೈಕ್! ಪರಿಸರ ಸ್ನೇಹಿ ಇಂಧನ ಬಳಸಿ ಎಂದು ಬೂಟಾಟಿಕೆಯ ಭಾಷಣ ಬಿಗಿಯುವ ಸರ್ಕಾರಗಳು ತಿಂಗಳಲ್ಲಿ ಎರಡು ಬಾರಿ ದರ ಏರಿಸಿ ಜನಸಾಮಾನ್ಯರನ್ನು ನಡು ರಸ್ತೆಗೆ ತಳ್ಳುತ್ತಿವೆ. ಆಟೋ ಟ್ಯಾಕ್ಸಿ ಹಾಗೂ ಶಾಲಾ ವ್ಯಾನ್ ಚಾಲಕರು ಈಗಾಗಲೇ ದುಬಾರಿ ಜೀವನ ವೆಚ್ಚದಿಂದ ಕಂಗಾಲಾಗಿದ್ದಾರೆ. ಈ ಇಂಧನ ಲೂಟಿಯಿಂದಾಗಿ ಸಾರಿಗೆ ಮತ್ತು ದಿನಸಿ ವಸ್ತುಗಳ ಬೆಲೆ ಗಗನಕ್ಕೇರಲಿದ್ದು, ಹಣದುಬ್ಬರದ ದಳ್ಳುರಿಗೆ ಬಡವರು ಆಹುತಿಯಾಗುತ್ತಿದ್ದಾರೆ. ಇಂಧನದ ಬೆಲೆ ಏರಿಕೆ ಪ್ರಕ್ರಿಯೆಯು ಕೇವಲ ವ್ಯಾಪಾರವಲ್ಲ ಅದು ನೈತಿಕ ಹೊಣೆಗೇಡಿತನ. ಆಡಳಿತಗಾರರೇ ಪರಿಸರ ಕಾಳಜಿಯ ಹೆಸರಲ್ಲಿ ಸಾರ್ವಜನಿಕರ ರಕ್ತ ಹೀರುವ ದುರಾಸೆ ನಿಲ್ಲಿಸಿ ತಕ್ಷಣವೇ ಬೆಲೆ ನಿಯಂತ್ರಿಸಿ ದೇಶದ ನಾಗರಿಕರಿಗೆ ಮೇಲೆ ಆಗುವ ಅನ್ಯಾಯ ಸರಿಪಡಿಸಬೇಕು. **–ಡಾ.ವಿಜಯಕುಮಾರ್ ಎಚ್.ಕೆ., ಮೈಸೂರು.**



ಈ ಜೀವನ



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಆಕಾರಕ್ಕಿಂತ ಆರೋಗ್ಯ, ಆತ್ಮವಿಶ್ವಾಸ ಮುಖ್ಯ

ಓಹ್, ನಿಮ್ಮ ಗುರುತೇ ಸಿಗಲಿಲ್ಲ, ತುಂಬಾ ದಪ್ಪ ಆಗಿರುವಿರಿ. ಯಾಕೆ ದಿನದಿಂದ ದಿನಕ್ಕೆ ಸಣ್ಣ ಆಗುತ್ತಿದ್ದೀರಲ್ಲ, ಏನಾಯಿತು ಆರೋಗ್ಯ ಎಲ್ಲಾ ಸರಿ ಇದೆ ತಾನೇ?

ಈ ತರಹದ ಮಾತುಗಳನ್ನು ಕೇಳಿದಾಗಲೆಲ್ಲಾ ನಗಬೇಕೊ ಅಳಬೇಕೋ ತಿಳಿಯದಾದೆ. ದೇಹದ ಆಕಾರವನ್ನು ಕುರಿತು ಮಾಡುವ ಟೀಕೆಗಳನ್ನೆಲ್ಲ ಕೇಳಿದಾಗ ಯಾಕೀಗೆ ಎಂಬ ಉತ್ತರಿಸಲಾಗದ ಪ್ರಶ್ನೆ ಕಣ್ಮುಂದೆ ನುಸುಳಿ ಬರುತ್ತದೆ. ಒಬ್ಬರ ದೇಹದ ಕುರಿತು ಅವಹೇಳನಕಾರಿಯಾಗಿ ಮಾಡುವ ಟೀಕೆ–ಟಿಪ್ಪಣಿಗಳಿಗೆ ಆಂಗ್ಲ ಭಾಷೆಯಲ್ಲಿ 'ಬಾಡಿ ಶೇಮಿಂಗ್' ಎಂದು ಕರೆಯಲಾಗುತ್ತದೆ.

ದಪ್ಪ, ಸಣ್ಣ, ಲಂಬು, ಕುಳ್ಳ ಹೀಗೆ ತರಾವರಿಯಾಗಿ ತಮಗಿಷ್ಟ ಬಂದಂತೆ ಮತ್ತೊಬ್ಬರ ದೇಹದ ಸ್ಥಿತಿಯನ್ನು ಕುರಿತು ಯಾವುದೇ ಮುಜುಗರ ಪಡದೆ ನಕಾರಾತ್ಮಕವಾಗಿ ಮಾತನಾಡುವ ಗುಣವುಳ್ಳವರಿಗೆ ತಮ್ಮ ಮಾತಿನಿಂದ ಅವರಿಗಾಗುವ ನೋವು, ಮುಜುಗರ ಅರ್ಥವಾಗುವುದಾದರೂ ಹೇಗೆ? 'ದೇಹದ ಗಾತ್ರವು ಮನುಷ್ಯನ ಮೌಲ್ಯ ಹಾಗೂ ಸಾಮರ್ಥ್ಯವನ್ನು ನಿರ್ಧರಿಸುವುದಿಲ್ಲ; ಅವನ ಗುಣ, ಜ್ಞಾನ ಮತ್ತು ಮಾನವೀಯತೆಯೇ ನಿಜವಾದ ಅಳತೆಗೋಲು'

ಸುಂದರವಾಗಿ ಕಾಣಬೇಕು, ಸೌಂದರ್ಯದ ದೇಹವಿರಬೇಕೆಂಬುದು ಪ್ರತಿಯೊಬ್ಬರ ಆಸೆಯಾಗಿರುತ್ತದೆ ನಿಜ, ಆದರೆ ಅದು ಮತ್ತೊಬ್ಬರ ಕಾರಣದಿಂದಾಗಿ ದಿನೇ ದಿನೆ ಮತ್ಯಾರನ್ನೋ ಮೆಚ್ಚಿಸಲು, ಇಲ್ಲಸಲ್ಲದ ಮಾತುಗಳನ್ನು ಕೇಳಲಾಗದೇ ಅಥವಾ ನಮ್ಮನ್ನು ಹೊಗಳಬೇಕೆಂಬ ಅತಿಯಾದ ತಮ್ಮ ತ್ವಚೆಯ ಅಂದವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಒತ್ತಡದಿಂದ ನೈಸರ್ಗಿಕವಲ್ಲದ ಚಿಕಿತ್ಸೆಗಳಿಗೆ ಒಳಗಾಗಿ ಸಹಜವಾಗಿರುವ ತಮ್ಮ ಅಂತರಂಗದ ಸೌಂದರ್ಯವನ್ನು ಹಾಳುಮಾಡಿಕೊಂಡು ಬಾಹ್ಯ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವತ್ತ ತಮ್ಮ ಗಮನ, ಸಮಯವನ್ನು ವ್ಯರ್ಥವಾಗಿಸುತ್ತಾರೆ.


ನಿಜ ಅಂತರಂಗದ ಸೌಂದರ್ಯ ಕಣ್ಣಿಗೆ ಕಾಣದಿರುವುದರಿಂದ ಬಾಹ್ಯ ಸೌಂದರ್ಯಕ್ಕೆ ಮೌಲ್ಯ ಹೆಚ್ಚಾಗಿದೆ. ಪ್ರತಿಯೊಬ್ಬರೂ ತಮ್ಮನ್ನು ಗುರುತಿಸಬೇಕು, ತಮ್ಮ ಸೌಂದರ್ಯದ ಕುರಿತಾಗಿ ಮಾತನಾಡಬೇಕೆಂಬ ಗೀಳು ಮೂಡುವುದು ಸಹಜ. ಆದರೆ ಅದನ್ನೇ ಮಾನದಂಡವಾಗಿಟ್ಟುಕೊಂಡು ವ್ಯಕ್ತಿಯ ವ್ಯಕ್ತಿತ್ವವನ್ನು ಗುರುತಿಸ ಹೊರಡುವುದು ತೀರಾ ಅಪಾಯಕಾರಿಯಾದುದು. (ಉದಾಹರಣೆಗೆ: ಕೆಲವರು ಬಿಳಿಯ ಬಣ್ಣ ಹೊಂದಿರುವವರೆಲ್ಲ ಒಳ್ಳೆಯವರೆಂದು, ಕಪ್ಪು ಬಣ್ಣ ಹೊಂದಿರುವವರೆಲ್ಲ ಕೆಟ್ಟವರೆಂದು ತುಂಬಾ ಸುಲಭವಾಗಿ ಪರಿಗಣಿಸುತ್ತಾರೆ).

ಭಿನ್ನ ದೇಹ ಪ್ರಕೃತಿ

ಪ್ರತಿಯೊಬ್ಬರ ದೇಹದ ಆಕಾರವು, ಅವರ ದೇಹಪ್ರಕೃತಿ, ಆರೋಗ್ಯ ಕ್ರಮ ವಿಭಿನ್ನವಾಗಿರುವುದರಿಂದ ಒಬ್ಬರಂತೆ ಮತ್ತೊಬ್ಬರು ಕಾಣಲು ಸಾಧ್ಯವಿಲ್ಲ. ಒಬ್ಬರು ಎಷ್ಟೇ ತಿಂದರೂ ದಪ್ಪಗಾಗುವುದಿಲ್ಲ. ಇನ್ನೂ ಕೆಲವರು ಇರುವ ಗಾತ್ರಕ್ಕೂ, ಅವರು ತಿನ್ನುವ ಆಹಾರಕ್ಕೂ ಸಂಬಂಧವೇ ಇರದಂತಿರುತ್ತಾರೆ. ದಪ್ಪ, ಸಣ್ಣ ಅನ್ನುವುದಕ್ಕಿಂತ ಸದೃಢವಾದ ಆರೋಗ್ಯ ಮುಖ್ಯವಾದುದು. ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವತ್ತ ನಮ್ಮ ಗಮನವಿರಬೇಕೆ ವಿನಃ ಬೇರೊಬ್ಬರು ಮಾಡುವ ಮಾತುಗಳಿಗೆ ಕಿವಿಗೊಡಬಾರದು. ಒಬ್ಬರ ದೇಹದಂತೆ ಮತ್ತೊಬ್ಬರ ದೇಹ ಇರುವುದಕ್ಕೆ ಸಾಧ್ಯವಿಲ್ಲ. ಕೆಲವರಿಗೆ ಅವರ ದೈನಂದಿನ ಚಟುವಟಿಕೆಗಳಲ್ಲಿ ಸ್ವಲ್ಪ ಮಟ್ಟದ ಏರುಪೇರಾದರೆ ಅವರ ದೇಹದಲ್ಲಿ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಕೆಲವರಿಗೆ ಅಧಿಕ ನಿದ್ರೆ ಮಾಡುವುದರಿಂದ, ಒತ್ತಡದಿಂದ, ಅತಿಯಾದ ಚಿಂತೆಯಿಂದ, ಹೀಗೆ ವಿವಿಧ ಕಾರಣಗಳಿಂದ ದೇಹದ ಗಾತ್ರ ಹೆಚ್ಚು ಕಡಿಮೆಯಾಗುತ್ತಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಕೆಲವರು ಏನೇ ತಿಂದರೂ, ಎಷ್ಟೇ ಕೆಲಸ ಮಾಡಿದರೂ, ಜಿಮ್, ವ್ಯಾಯಾಮದ ಮೊರೆ ಹೋದರೂ ಅವರ ದೇಹದಲ್ಲಿ ಯಾವುದೇ ಬದಲಾವಣೆಗಳಾಗುವುದಿಲ್ಲ. ಇದನ್ನು ಸರಿಯಾಗಿ ಅರ್ಥಮಾಡಿಕೊಂಡರೆ ದಪ್ಪ, ಸಣ್ಣ, ಎತ್ತರ, ಕುಳ್ಳ ಎಂಬಿತ್ಯಾದಿಯಾಗಿ ಯಾರನ್ನು ಟೀಕಿಸುವಂತಹ ಪ್ರಮೇಯ ಬರುವುದಿಲ್ಲ.

ಡಯಟ್ ಎಂಬ ಪಥ್ಯ

ದಪ್ಪವಿರುವವರು ಇತರರ ಮಾತುಗಳಿಂದ ಬೇಸತ್ತು ಸರಿಯಾಗಿ ತಿನ್ನದೇ ಅಥವಾ ಕಡಿಮೆ ತಿಂದು ಡಯಟ್ ಎಂಬ ಪಥ್ಯವನ್ನು ಅನುಸರಿಸಿ ಮತ್ತಷ್ಟು ಒತ್ತಡಕ್ಕೆ ಒಳಗಾಗುತ್ತಾರೆ. ದಪ್ಪ ಇರುವವರೆಲ್ಲ ಹೆಚ್ಚಾಗಿ ತಿನ್ನುತ್ತಾರೆಂಬ ಭ್ರಮೆಗೆ ಒಳಗಾಗಿ ಅವರನ್ನು ನಿಂದಿಸುವ ಮೂಲಕ ಅವರಿಗೆ ಬೇಸರವನ್ನು ಉಂಟುಮಾಡುತ್ತೇವೆ. ಇನ್ನೂ ಕೆಲವೊಮ್ಮೆ ಇದಕ್ಕೆ ವ್ಯತಿರಿಕ್ತವಾಗಿ ಡಯಟ್ ಮಾಡಿಯೋ, ವ್ಯಾಯಾಮ, ಜಿಮ್, ಕಟ್ಟುನಿಟ್ಟಿನ ಆಹಾರ ಕ್ರಮದ ಮೂಲಕವೋ ಕಷ್ಟಪಟ್ಟು ದೇಹವನ್ನು ದಂಡಿಸಿ ಆರೋಗ್ಯವನ್ನು ಕಾಪಾಡಿ ಕೊಂಡಿದ್ದರೂ ಅದಕ್ಕೂ ಕೂಡ ಅವರಿಗೆ ಕಾಯಿಲೆ ಇದೆ ಅನಿಸುತ್ತದೆ, ಏನೋ ಆಗಿರಬೇಕೆಂದು ಮತ್ತೆ ಅವರನ್ನು ನಿಂದಿಸುವ ಕೆಲಸವನ್ನು ಮಾಡುತ್ತಾರೆಯೇ ವಿನಃ ಅವರ ಶ್ರಮ, ಪರಿಶ್ರಮದ ಬಗ್ಗೆ ತಿಳಿದರೂ ಅದನ್ನು ನಿರ್ಲಕ್ಷ್ಯಿಸಿ ಮಾತನಾಡುತ್ತಾರೆ. ಹೇಗಿದ್ದರೂ ಮಾತನಾಡುತ್ತಾರೆ. ಹಾಗಾಗಿ ಅವರಿವರ ಮಾತಿಗೆ ತಲೆಕಡಿಸಿಕೊಳ್ಳದೇ ನಮ್ಮ ಆರೋಗ್ಯವನ್ನು ನಾವು ಚೆನ್ನಾಗಿ ಕಾಪಾಡಿಕೊಳ್ಳುವುದು ಒಳಿತು. ಆಡಿಕೊಳ್ಳುವವರು ಯಾರು ಕೂಡ ನಮ್ಮ ಜೀವನ ನಡೆಸಲು ಸಹಾಯ ಮಾಡುವುದಿಲ್ಲ. ಹಾಗಾಗಿ ಅವರ ಮಾತಿಗೆ ಹೆಚ್ಚು ತಲೆಕೆಡಿಸಿಕೊಳ್ಳುವ ಅಗತ್ಯವೇ ಇಲ್ಲ.





> "ಉತ್ತಮ ಆರೋಗ್ಯಕ್ಕಾಗಿ, ನಮ್ಮಿಂದ ಸಾಧ್ಯವಾಗುವ ವ್ಯಾಯಾಮ, ಚಟುವಟಿಕೆಗಳೊಂದಿಗೆ ಬದುಕ ಸಾಗಿಸಬೇಕು. ಆಡಿದ ಮಾತುಗಳಿಗೆಲ್ಲ ಮನ್ನಣೆ ನೀಡುತ್ತಾ ಹೋಗುವುದರಿಂದ ಆತ್ಮವಿಶ್ವಾಸ ಕುಗ್ಗಬಹುದು. ಅದಕ್ಕೆ ಆಸ್ಪದ ನೀಡದಂತೆ ನಮ್ಮ ದೈನಂದಿನ ಶೈಲಿಯಲ್ಲಿ ಅಗತ್ಯವಿರು ವಷ್ಟು ಸಮಯ ಮಾಡಿಕೊಂಡು ಸದೃಢ ಆರೋಗ್ಯ ಕಾಪಾಡಿಕೊಳ್ಳಬೇಕು. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮನ್ನು ನಾವು ಪ್ರೀತಿಸಬೇಕು. ನಾವು ಇರುವ ಹಾಗೆ ನಮ್ಮನ್ನು ಒಪ್ಪಿಕೊಳ್ಳುವ ಮನಸ್ಥಿತಿ ನಮ್ಮದಾಗಬೇಕು.

ಕುಗ್ಗದಿರಲಿ ಆತ್ಮವಿಶ್ವಾಸ

ನಮ್ಮ ಜೀವನ ನಮ್ಮಷ್ಟು ಬೇರೆಯವರಿಗೆ ತಿಳಿದಿರಲಾರದು. ನಾವು ಹುಟ್ಟಿ ಬಂದ ಬಗೆ, ಕಷ್ಟಗಳ ಎದುರಿಸಿ ಬದುಕನ್ನು ಕಟ್ಟಿಕೊಂಡ ರೀತಿ ಉಳಿದವರಿಗೆ ತಿಳಿಯದು. ಹಾಗಾಗಿ ಅವರಿವರ ಮಾತುಗಳಿಗೆ ಕಿವಿಯಾಗುವ ಬದಲು ಅವುಗಳನ್ನೆಲ್ಲ ಅಲ್ಲೇ ಬಿಟ್ಟು ಮುಂದೆ ಸಾಗಬೇಕು. ನಮ್ಮ ದೇಹ ಹೇಗಿದ್ದರೂ ಅದು ಸಂತೋಷವೇ, ಯಾರೋ ಆಡಿದ ಮಾತಿಗೆ ಅಥವಾ ಕೆಲವೊಮ್ಮೆ ಆಪ್ತರಾಡಿದ ಮಾತಿಗೂ ತಲೆಕೆಡಿಸಿಕೊಂಡು ಆತ್ಮವಿಶ್ವಾಸವನ್ನು ಕಳೆದುಕೊಳ್ಳುವ ಅಗತ್ಯವಿಲ್ಲ. ಉತ್ತಮ ಆರೋಗ್ಯಕ್ಕಾಗಿ, ನಮ್ಮಿಂದ ಸಾಧ್ಯವಾಗುವ ವ್ಯಾಯಾಮ, ಚಟುವಟಿಕೆಗಳೊಂದಿಗೆ ನಿರ್ವಹಿಸುತ್ತ ಬದುಕ ಸಾಗಿಸಬೇಕು. ಆಡಿದ ಮಾತುಗಳಿಗೆಲ್ಲ ಮನ್ನಣೆ ನೀಡುತ್ತಾ ಹೋಗುವುದರಿಂದ ಆತ್ಮವಿಶ್ವಾಸ ಕುಗ್ಗಬಹುದು, ಅದಕ್ಕೆ ಆಸ್ಪದ ನೀಡದಂತೆ ನಮ್ಮ ದೈನಂದಿನ ಶೈಲಿಯಲ್ಲಿ ಅಗತ್ಯವಿರುವಷ್ಟು ಸಮಯ ಮಾಡಿಕೊಂಡು ಸದೃಢ ಆರೋಗ್ಯ ಕಾಪಾಡಿಕೊಳ್ಳಬೇಕು. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮನ್ನು ನಾವು ಪ್ರೀತಿಸಬೇಕು. ನಾವು ಇರುವ ಹಾಗೆ ನಮ್ಮನ್ನು ಒಪ್ಪಿಕೊಳ್ಳುವ ಮನಸ್ಥಿತಿ ನಮ್ಮದಾಗಬೇಕು.

ಸಾಮಾಜಿಕ ಜಾಲತಾಣಗಳ ಪ್ರಭಾವ

ಮಾಡುವ ಕೆಲಸಕ್ಕಿಂತ ತೋರ್ಪಡಿಕೆಯ ಬದುಕೇ ಮುಖ್ಯವೆಂದು ಭಾಸವಾಗುತ್ತಿರುವ ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ಜಾಲತಾಣವನ್ನು ಗುತ್ತಿಗೆ ಪಡೆದರವಂತೆ ವರ್ತಿಸುವ ಕೆಲವರು ಪರಿಪೂರ್ಣ ದೇಹ ಎಂಬ ಮಾಯದ ಕಲ್ಪನೆಯನ್ನು, ಕೃತಕವಾಗಿ ಸೃಷ್ಟಿಸಿ ತಮ್ಮನ್ನು ಧರೆಗಿಳಿದ ದೇವಾನುದೇವತೆಗಳೆಂಬ ಕಾಲ್ಪನಿಕತೆಯನ್ನು ಬಿಂಬಿಸಿ ಅನಗತ್ಯವಾಗಿ ಹೋಲಿಕೆಯ ಮನೋಭಾವವನ್ನು ಜನರಲ್ಲಿ ಹುರಿದುಂಬಿಸುತ್ತಿದ್ದಾರೆ. ಯುವಜನತೆ ಪುಸ್ತಕದ ಹುಳುವಾಗುವುದಕ್ಕಿಂತ ಸಾಮಾಜಿಕ ಜಾಲತಾಣದ ಶಿಶುಗಳಾಗಿ ಮಾರ್ಪಾಡಾಗಿರುವುದರಿಂದ ಅವರಿಗೆ ಸೌಂದರ್ಯದ ಕುರಿತು ಹೇಗಾದರೂ ಅತಿ ಕಡಿಮೆ ಸಮಯದಲ್ಲಿಯೇ ತಮ್ಮ ದೇಹವನ್ನು ಉತ್ತಮವಾಗಿ ಮಾಡಿಕೊಳ್ಳಬೇಕೆಂಬ ಉನ್ಮಾದದಲ್ಲಿ ಮುಳುಗಿ, ಅದಕ್ಕಾಗಿ ಅಡ್ಡಾದಿಡ್ಡಿಯಾಗಿ ದಂಡಿಸುವ ನಿಟ್ಟಿನಲ್ಲಿ ಪ್ರಯತ್ನಿಸಿ ವಿಫಲವಾಗುವುದನ್ನು ಕಾಣಬಹುದು. ಜೊತೆಗೆ ಅವಸರವೇ ಅಪಘಾತಕ್ಕೆ ಮೂಲ ಕಾರಣ ಎಂಬುದನ್ನು ಅರಿಯದೇ ದೇಹ ಸೌಂದರ್ಯಕ್ಕಾಗಿ ಮೋಸದ ಜಾಲಗಳಿಗೆ ಸಿಲುಕಿ ಹಣವನ್ನು ವ್ಯರ್ಥಗೊಳಿಸುವುದನ್ನೂ ಪತ್ರಿಕೆಗಳಲ್ಲಿ ಗಮನಿಸುತ್ತಿದ್ದೇವೆ. ಒಂದೇ ಅವಧಿಯಲ್ಲಿ ದಪ್ಪವಾಗಲೂ ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಅಲ್ಪಕಾಲದಲ್ಲಿಯೇ ಸಣ್ಣವಾಗಲೂ ಸಾಧ್ಯವಿಲ್ಲ. ಈ ಸತ್ಯವನ್ನು ತಿಳಿಯದೇ ಆತ್ಮ ವಿಶ್ವಾಸವನ್ನು ಕುಗ್ಗಿಸಿಕೊಂಡು ನರಳುವವರನ್ನು ಹೆಚ್ಚಾಗಿ ಕಾಣಬಹುದು.

ಮಾನಸಿಕ ಆರೋಗ್ಯದ ಪರಿಣಾಮ

ದೇಹದ ಆಕಾರ ಕುರಿತು (ಬಾಡಿ ಶೇಮಿಂಗ್) ಮಾಡುವ ಟೀಕೆಗಳು ಕೇವಲ ಹೊರಗಿನ ಟೀಕೆಯಾಗಿ ಉಳಿಯುವುದಿಲ್ಲ. ಅದು ಆ ವ್ಯಕ್ತಿಯ ಮನಸ್ಸಿನ ಮೇಲೆ ಮಾಸದ ಗಂಭೀರ ಗಾಯವನ್ನು ಮಾಡಬಹುದು. ಕೆಲ ಸೂಕ್ಷ್ಮ ಮನಸ್ಸುಳ್ಳವರು ಆತಂಕ, ಖಿನ್ನತೆ, ಏಕಾಂಗಿತನದ ಭಾವನೆಗಳಿಗೆ ಒಳಗಾಗಬಹುದು. ಆಹಾರ ಪದ್ಧತಿಗಳಲ್ಲೂ ಅಸ್ವಸ್ಥ ಬದಲಾವಣೆಗಳು ಮಾಡಿಕೊಂಡು ನರಳಬಹುದು. ಹಾಗಾಗಿ ಇತರರ ದೇಹದ ಕುರಿತು ಮಾತನಾಡುವ ಮೊದಲು ಅದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ಆಲೋಚಿಸಿದರೆ ಒಳಿತು.

ಮಾತಿನ ಜವಾಬ್ದಾರಿ

ತಮಾಷೆ ಮಾಡಿದೆ ಎಂಬ ಕಾರಣ ನೀಡಿ ಮಾಡುವ ಟೀಕೆ ಕೂಡ ತುಂಬಾ ನೋವುಂಟುಮಾಡಬಹುದು. ಪ್ರತಿಯೊಬ್ಬರ ಮಾತುಗಳಿಗೂ ತೂಕ ಇರುತ್ತದೆ. ಯಾರೊಬ್ಬರ ದೇಹದ ಬಗ್ಗೆ ಮಾತನಾಡುವ ಮೊದಲು ಅವರ ಮನಸ್ಥಿತಿ ಯೋಚಿಸಬೇಕು ಸುಖಾಸುಮ್ಮನೆ ಟೀಕೆ ಮಾಡುವ ಬದಲು, ಉತ್ತಮ ಮಾತುಗಳ ಮುಖೇನ ಸಕಾರಾತ್ಮಕ ಆಲೋಚನೆಯನ್ನು ಮೂಡಿಸಬಹುದು. ಮತ್ತೊಬ್ಬರ ಆರೋಗ್ಯದ ಬಗ್ಗೆ ನಿಜವಾದ ಕಾಳಜಿ ಇರುವುದೇ ನಿಜವಾದರೆ ಆರೋಗ್ಯವನ್ನು ಕಾಪಾಡಿಕೊಳ್ಳುವ ವಿಧಾನವನ್ನು ತಿಳಿಸಬೇಕೆ ವಿನಃ ನಿಂದನೆಯ, ಟೀಕೆಯ ಮಾತುಗಳನ್ನಾಡಬಾರದು. ಕುಳ್ಳ/ಕುಳ್ಳಿ ಎಂದು ನಿಂದಿಸುವವರಿಗೆ ಆಕಾರದಲ್ಲಿ ಕುಳ್ಳಗಿದ್ದರೂ ಸಾಧನೆಯಲ್ಲಿ ಶಿಖರವೇರಿ ನಿಂತವರ ಸಾಧನೆಯನ್ನು ತಿಳಿಸಿಕೊಡಿ.

ವಾಮನ ಬೃಹದಾಕಾರವಾಗಿ ಬೆಳೆದು ಬಲಿ ಚಕ್ರವರ್ತಿಯ ಅಹಂಕಾರ ವಧೆ ಮಾಡಿದ್ದು, ಕುಳ್ಳನಾಗಿದ್ದರೂ ಕ್ರಿಕೆಟ್‌ನಲ್ಲಿ ಸಾಧನೆ ಮಾಡಿ ಕ್ರಿಕೆಟ್ ದೇವರಾದ ಸಚಿನ್ ತೆಂಡೂಲ್ಕರ್ ಬಗ್ಗೆ, ಸಿನಿಮಾ ಕ್ಷೇತ್ರದಲ್ಲಿ ಕರ್ನಾಟಕದ ಕುಳ್ಳನೆಂದೇ ಗುರುತಿಸಿಕೊಂಡು ಅಪ್ರತಿಮ ಪ್ರಯೋಗಗಳನ್ನು ಮಾಡಿದ ದ್ವಾರಕೀಶ್ ಬಗ್ಗೆ. ಹೀಗೆ ದೈಹಿಕ ನ್ಯೂನತೆ ಮೆಟ್ಟಿನಿಂತು ಸಾಧನೆ ಮಾಡಿದವರ ಪರಿಚಯ ಮಾಡಿಕೊಡಿ. ಸದೃಢವಾದ ದೇಹವನ್ನು ಹೊಂದಿ ಇಡೀ ಪ್ರಪಂಚವೇ ಭಾರತ ದೇಶದತ್ತ ಹಿಂತಿರುಗಿ ನೋಡುವಂತೆ ಮಾಡಿದ ಮಹಾನ್ ಸಂತ, ಸಿಡಿಲಮರಿ ಸ್ವಾಮಿ ವಿವೇಕಾನಂದರ ಜೀವನಗಾಥೆಯನ್ನು ತಿಳಿಸಿಕೊಡಿ. ದೇಹದ ಗಾತ್ರಕ್ಕಿಂತ ಜ್ಞಾನದ ಮಹತ್ವ ಮುಖ್ಯವಾದುದು. ಅದರಿಂದ ಮುಂದೆ ಬದುಕಿನಲ್ಲಿ ನಮ್ಮಿಂದಲೂ ಸಾಧನೆ ಮಾಡಬಹುದೆಂಬ ಅಚಲವಾದ ಮಾತುಗಳನ್ನಾಡಿ, ಮುಂದೆಂದೂ ತಮಾಷೆಗೂ ಅವರು ನಿಮ್ಮನ್ನು, ನಿಮ್ಮ ದೇಹದ ಗಾತ್ರವನ್ನು ಆಡಿಕೊಳ್ಳಲಾರರು.


ಕುಟುಂಬದ ಪಾತ್ರ

ಹೊರಗಿನವರ ಮಾತುಗಳಿಗಿಂತ ಕುಟುಂಬದವರ ಮಾತುಗಳು ಮನಸ್ಸಿಗೆ ಹೆಚ್ಚು ಘಾಸಿ ಮಾಡುತ್ತವೆ. ದೈಹಿಕ ಆರೋಗ್ಯ ಕುರಿತಾಗಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಬೇಕೆ ವಿನಃ ಕುಟುಂಬದವರೇ ಟೀಕೆಯ ಮಾತುಗಳನ್ನಾಡಿದರೆ ಸಹಿಸುವುದು ಕಷ್ಟ. 'ಸ್ವಲ್ಪ ಸಣ್ಣ ಆಗು, ದಪ್ಪ ಆಗಿದ್ದೀಯ' ಎಂದು ಹೇಳುವ ಮೂಲಕ ಅನೈಚ್ಛಿಕವಾಗಿ ಒತ್ತಡ ಉಂಟುಮಾಡುವ ಕೆಲಸವನ್ನು ಮಾಡಬಾರದು. ಬದಲಾಗಿ ಕುಟುಂಬವು ಪ್ರೋತ್ಸಾಹ, ಆತ್ಮವಿಶ್ವಾಸದ ನುಡಿಗಳನ್ನಾಡುವ ಮುಖೇನ ಆತ್ಮವಿಶ್ವಾಸ ಹೆಚ್ಚಿಸಬೇಕು.

ದೇಹದ ಆಕಾರವು ಮನುಷ್ಯನ ಮೌಲ್ಯವನ್ನು ನಿರ್ಧರಿಸುವ ಮಾನದಂಡವಲ್ಲ. ವ್ಯಕ್ತಿಯ ನಿಜವಾದ ಸೌಂದರ್ಯವು ಅವನ ಮನಸ್ಸಿನಲ್ಲಿ, ಮಾನವೀಯತೆಯಲ್ಲಿ ಮತ್ತು ಆತ್ಮವಿಶ್ವಾಸದಲ್ಲಿ ಅಡಗಿದೆ. ಇತರರ ದೇಹವನ್ನು ಟೀಕಿಸುವ ಬದಲು ಅವರ ವ್ಯಕ್ತಿತ್ವವನ್ನು ಗೌರವಿಸುವ ಸಂಸ್ಕೃತಿ ಬೆಳೆಸಿಕೊಂಡಾಗ ಮಾತ್ರ ನಿಜವಾದ ಮಾನವೀಯತೆಯ ದರ್ಶನವಾಗುತ್ತದೆ. ನಮ್ಮನ್ನು ನಾವು ಇರುವ ಹಾಗೆಯೇ ಒಪ್ಪಿಕೊಂಡು ಆರೋಗ್ಯಕರ ಜೀವನಶೈಲಿಯತ್ತ ಹೆಜ್ಜೆ ಇಟ್ಟ ಕ್ಷಣದಿಂದಲೇ ನಿಜವಾದ ಸುಂದರ ಬದುಕು ಆರಂಭವಾಗುತ್ತದೆ.

ನಮ್ಮನ್ನು ನಾವು ಒಪ್ಪಿಕೊಳ್ಳುವ ಕ್ಷಣದಿಂದಲೇ ನಿಜವಾದ ಸೌಂದರ್ಯ ಅರಿವಾಗುತ್ತದೆ.
ಆರೋಗ್ಯವು ದೇಹದ ಗಾತ್ರದಲ್ಲಿ ಅಲ್ಲ, ಮಾನಸಿಕ ನೆಮ್ಮದಿ ಮತ್ತು ಆತ್ಮವಿಶ್ವಾಸದಲ್ಲಿ ಅಡಗಿದೆ.

ಹಿರಿಯ ತಬಲವಾದಕ ಪಂಡಿತ್ ರಾಜೇಂದ್ರ ನಾಕೋಡರಿಗೆ ಪಂಡಿತ್ ಕೆ.ಎಸ್.ಹಡಪದ ಪ್ರಶಸ್ತಿ ಪ್ರದಾನ



ಮೈಸೂರಿನ ಗಾನಭಾರತಿ ವೀಣೆಶೇಷಣ್ಣ ಭವನದಲ್ಲಿ ಶ್ರೀ ಗುರುರಾಜ ಪುಟ್ಟರಾಜ ಸಂಗೀತ ಸಭಾ ವತಿಯಿಂದ ಕೊಡಮಾಡುವ ಪಂಡಿತ್ ಕೆ.ಎಸ್.ಹಡಪದ ಪ್ರಶಸ್ತಿಯನ್ನು ಬೆಂಗಳೂರಿನ ಹಿರಿಯ ತಬಲವಾದಕ ಪಂಡಿತ್ ರಾಜೇಂದ್ರ ನಾಕೋಡ ಅವರಿಗೆ ಪ್ರದಾನ ಮಾಡಲಾಯಿತು.

ಮೈಸೂರು, ಮೇ 31(ಎಸ್‌ಪಿಎನ್)– ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ವತಿಯಿಂದ ಪ್ರತಿ ವರ್ಷ ಕೊಡಮಾಡುವ ಪಂಡಿತ್ ಕೆ.ಎಸ್.ಹಡಪದ ಪ್ರಶಸ್ತಿಯನ್ನು ಬೆಂಗಳೂರಿನ ಹಿರಿಯ ತಬಲವಾದಕ ಪಂಡಿತ್ ರಾಜೇಂದ್ರ ನಾಕೋಡ ಅವರಿಗೆ ಪ್ರದಾನ ಮಾಡಲಾಯಿತು.

ಮೈಸೂರು ಕುವೆಂಪುನಗರದ ಗಾನ ಭಾರತಿ ವೀಣೆಶೇಷಣ್ಣ ಭವನದಲ್ಲಿ ಶ್ರೀ ಗುರುಪುಟ್ಟರಾಜ ಸಂಗೀತ ಸಭಾ ವತಿಯಿಂದ ದಿವಂಗತ ಪಂಡಿತ್ ಕೆ.ಎಸ್. ಹಡಪದ ಅವರ 20ನೇ ಪುಣ್ಯ ಸ್ಮರಣಾರ್ಥ ಅವರ ಹೆಸರಿನ ಪ್ರಶಸ್ತಿಯನ್ನು ಎಸ್‌ಜಿಪಿ ಸಂಗೀತ ಸಭಾದ ಗೌರವಾಧ್ಯಕ್ಷ ಮ.ವಿ. ರಾಮಪ್ರಸಾದ್ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಅವರು, ದೇಶ–ವಿದೇಶಗಳಲ್ಲಿ ಮೈಸೂರು ಸಾಂಸ್ಕೃತಿಕ ರಾಜಧಾನಿ, ಕಲೆಗಳ ತವರೂರು ಎಂದೇ ಜನಜನಿತ. ಈ ಹೆಸರನ್ನು ಉಳಿಸಿಕೊಳ್ಳುವ ಹೊಣೆ ಯುವಜನತೆ ಮೇಲಿದೆ. ಮೈಸೂರು ಎಲ್ಲಾ ಕಲೆಗಳಿಗೆ ಪ್ರೋತ್ಸಾಹಿಸುವ ಸ್ಥಳವಾಗಿದ್ದು, ಇಲ್ಲಿ ಎಲ್ಲಾ ಕಲೆಗಳನ್ನು ಪ್ರೋತ್ಸಾಹಿಸುವ ಜನರಿದ್ದಾರೆ ಎಂದರು.

ಕಲೆ, ಸಾಹಿತ್ಯ ಹಾಗೂ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವ ವಿದ್ಯಾರ್ಥಿಗಳಿಗೆ ಏಕಾಗ್ರತೆ, ಸ್ಮರಣ ಶಕ್ತಿ ಹೆಚ್ಚುತ್ತದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಹಾಗಾಗಿ ವಿದ್ಯಾರ್ಥಿಗಳು ಓದಿನ ಜೊತೆಗೆ ಕಲೆಗಳ ಅಭ್ಯಾಸಕ್ಕೆ ಕಾಲಾವಕಾಶ ನೀಡಬೇಕು. ಇದಕ್ಕೆ ಪೋಷಕರ ಪ್ರೋತ್ಸಾಹ ಅತ್ಯಗತ್ಯ ಎಂದರು.

ಈ ಹಿಂದೆ ಗುರುವಿನ ಬಳಿಯಿದ್ದು ತಬಲದಲ್ಲಿ ಗುರು–ಶಿಷ್ಯ ಇಬ್ಬರೂ ಕಲಿಯಬೇಕಿತ್ತು. ಈಗ ಕಾಲ ಬದಲಾಗಿದ್ದು, ಕಲಿಕಾ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ಪೋಷಕರಿಗೆ ವಾದ್ಯ ಪರಿಕರಗಳನ್ನು ಕೊಡಿಸುತ್ತಾರೆ. ಹಾಗಾಗಿ ಕಲಿಕೆಗೆ ಆಸಕ್ತಿ ಇರುವ ವಿದ್ಯಾರ್ಥಿಗಳು ವಾದ್ಯ ಪರಿಕರ ಕಲಿಕೆಗೂ ಆದ್ಯತೆ ನೀಡುವಂತೆ ಕಿವಿಮಾತು ಹೇಳಿದರು.

ಈ ವೇಳೆ ಶ್ರೀ ಪರಮಹಂಸ ವಿದ್ಯಾ ನಿಕೇತನ ಟ್ರಸ್ಟ್‌ನ ಸಲಹೆಗಾರ ನವೀನ್ ಕುಮಾರ್, ಟ್ರಸ್ಟ್ ಅಧ್ಯಕ್ಷ ಪಂಡಿತ್ ಭೀಮಾಶಂಕರ ಬಿದನೂರ, ಉಪಾಧ್ಯಕ್ಷ ಮೃತ್ಯುಂಜಯ ಹಿರೇಮಠ ಉಪಸ್ಥಿತರಿದ್ದರು. ಎಸ್‌ಜಿಪಿ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳು ಪ್ರಾರ್ಥಿಸಿದರೆ, ರೋಹಿಣಿ ಎಸ್.ಓಂಕಾರ್ ನಿರೂಪಿಸಿದರು. ಬೆಂಗಳೂರಿನ ವಿದುಷಿ ಅಂತರ ಭಟ್, ವಿದ್ವಾನ್ ಅರುಣ್ ಭಟ್ ಅವರಿಂದ ಬಾನ್ಸುರಿ ವಾದನ ನಡೆಸಿಕೊಟ್ಟರು.

ವಿಜಯನಗರದ ಮನೆಯಲ್ಲಿ ಕಳವು



ಮೈಸೂರು, ಮೇ 31(ಜಿಎ)–ಒಂಟಿ ಮಹಿಳೆಯ ಮನೆಯ ಬಾಗಿಲು ಮೀಟಿ ಚಿನ್ನಾಭರಣ, ನಗದನ್ನು ಖದೀಮರು ದೋಚಿರುವ ಘಟನೆ ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದೆ. ಮೈಸೂರಿನ ವಿಜಯನಗರ ಮೊದಲನೇ ಹಂತದಲ್ಲಿರುವ 60 ವರ್ಷದ ಒಂಟಿ ಮಹಿಳೆ ವಾಸವಿದ್ದು, ಮಹಿಳೆಯೂ ಮೇ.27ರಂದು ಮನೆಗೆ ಬೀಗ ಹಾಕಿಕೊಂಡು ಬೆಂಗಳೂರಿಗೆ ತೆರಳಿದ್ದಾರೆ. ಮೇ 29ರಂದು ಬೆಳಗ್ಗೆ 10.30ಕ್ಕೆ ಮರಳಿ ಮನೆಗೆ ಬಂದಾಗ ಮನೆಯ ಮುಂದಿನ ಬಾಗಿಲನ್ನು ಮೀಟಿ ಮನೆಯಲ್ಲಿ 5 ಗ್ರಾಂನ ಚಿನ್ನದ ಉಂಗುರ, 80 ಗ್ರಾಂನ ಬೆಳ್ಳಿ ದೀಪಗಳು ಹಾಗೂ 30 ಸಾವಿರ ರೂ. ನಗದನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ. ಮಹಿಳೆಯೂ ವಿಜಯನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜೂ.21, ಮೈಸೂರಲ್ಲಿ 1.20 ಲಕ್ಷ ಮಂದಿ ಸಾಮೂಹಿಕ ಯೋಗಾಭ್ಯಾಸ

● 'ಮಹಾ ಸಂಕಲ್ಪ ದಿವಸ್'ನಲ್ಲಿ ಅಂತರರಾಷ್ಟ್ರೀಯ ಯೋಗ ದಿನದ ಪೋಸ್ಟರ್ ಬಿಡುಗಡೆ ● ಶಿಷ್ಟಾಚಾರದಂತೆ ನೂರಾರು ಯೋಗಪಟುಗಳಿಂದ ವಿವಿಧ ಯೋಗಾಸನಗಳ ಪ್ರದರ್ಶನ





ಮೈಸೂರು ಅರಮನೆ ಆವರಣದಲ್ಲಿ ಭಾನುವಾರ ನಡೆದ 'ಮಹಾ ಸಂಕಲ್ಪ ದಿವಸ್' ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಯೋಗ ದಿನದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಸಂಸದ ಯದುವೀರ್, ಜಿಎಸ್‌ಎಸ್ ಯೋಗ ಸಂಸ್ಥೆಯ ಸಂಸ್ಥಾಪಕ ಶ್ರೀಹರಿ ದ್ವಾರಕನಾಥ್ ಮತ್ತಿತರರು ಉಪಸ್ಥಿತರಿದ್ದರು. ಬಲಚಿತ್ರದಲ್ಲಿ ನೂರಾರು ಯೋಗಪಟುಗಳು ವಿವಿಧ ಯೋಗಾಸನಗಳ ಅಭ್ಯಾಸದಲ್ಲಿ ನಿರತರಾಗಿರುವುದನ್ನು ಕಾಣಬಹುದು.

ಮೈಸೂರು, ಮೇ 31(ಎಂಕೆ)–ಅಂತರರಾಷ್ಟ್ರೀಯ ಯೋಗ ದಿನ(ಜೂ.21)ದಂದು ಮೈಸೂರಿನ ವಿವಿಧೆಡೆ ಏಕಕಾಲದಲ್ಲಿ 1.20 ಲಕ್ಷ ಮಂದಿ ಸಾಮೂಹಿಕ ಯೋಗಾಭ್ಯಾಸದಲ್ಲಿ ಭಾಗವಹಿಸುವ 'ಮಹಾಸಂಕಲ್ಪ'ವನ್ನು ಭಾನುವಾರ ಕೈಗೊಳ್ಳಲಾಯಿತು.

ಮೈಸೂರು ಅರಮನೆ ಆವರಣದಲ್ಲಿ ಯೋಗ ಫೆಡರೇಷನ್ ಆಫ್ ಮೈಸೂರು ವತಿಯಿಂದ ಹಮ್ಮಿಕೊಂಡಿದ್ದ 'ಮಹಾ ಸಂಕಲ್ಪ ದಿವಸ್' ಕಾರ್ಯಕ್ರಮದಲ್ಲಿ ಪತಂಜಲಿ ಮಹರ್ಷಿಗಳ ಸ್ಮರಣೆಯೊಂದಿಗೆ ಸಂಕಲ್ಪ ಸೂತ್ರ ಕಟ್ಟಿಸಿಕೊಂಡು, ಅಂತರರಾಷ್ಟ್ರೀಯ ಯೋಗ ದಿನದ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಾಮೂಹಿಕ ಯೋಗಾಭ್ಯಾಸಕ್ಕೆ ಚಾಲನೆ ನೀಡಿದರು.

ನಂತರ ಆಯುಷ್ ಸಚಿವಾಲಯದ ಶಿಷ್ಟಾಚಾರದಂತೆ ನೂರಾರು ಮಂದಿ ಯೋಗಪಟುಗಳು, 45 ನಿಮಿಷಗಳ ಕಾಲ ಪ್ರಾರ್ಥನೆ, ಭದ್ರಾಸನ, ವಜ್ರಾಸನ, ಅರ್ಧ ಉಷ್ಟ್ರಾ ಸನ, ಉಷ್ಟ್ರಾಸನ, ಶಶಕಾಸನ, ಉತ್ತಾನ ಮಂಡೂಕಾಸನ ಮತ್ತು ವಕ್ರಾಸನ, ಮಕರಾಸನ, ಭುಜಂಗಾಸನ, ಶಲಭಾಸನ, ಸೇತುಬಂಧಾಸನ, ಉತ್ತಾನಪಾದಾಸನ, ಅರ್ಧ ಹಲಾಸನ, ಪವನಮುಕ್ತಾಸನ ಮತ್ತು ಶವಾಸನದ ಬಳಿಕ ಕಪಾಲಭಾತಿ, ಪ್ರಾಣಾಯಾಮ, ನಾಡಿಶೋಧನೆ ಹಾಗೂ ಧ್ಯಾನ ಅಭ್ಯಾಸದ ಬಳಿಕ ಯೋಗ ದಿನ ಯಶಸ್ಸಿಗೆ ಪ್ರಮಾಣ ವಚನ ಸ್ವೀಕರಿಸಲಾಯಿತು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಸಂಸದ ಯದುವೀರ್, ಪ್ರತಿ ವರ್ಷ ಜೂ.21ರಂದು ಅಂತರರಾಷ್ಟ್ರೀಯ ಯೋಗ ದಿನ ಆಚರಣೆ ಮಾಡುತ್ತಿದ್ದೇವೆ. ಇದು ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರಿಯಬೇಕು. ಈ ವರ್ಷ 120 ಸ್ಥಳಗಳಲ್ಲಿ 1.20 ಲಕ್ಷ ಜನರನ್ನು ಸೇರಿಸಿ ದಾಖಲೆ ಮಾಡಲು ಹೊರಟಿರುವುದು ಸಂತೋಷದ ವಿಚಾರವಾಗಿದೆ. ಯೋಗಕ್ಕೆ ಮಹತ್ವ ಇರುವ ಮೈಸೂರಿನಲ್ಲಿ ಮಹಾ ಸಂಕಲ್ಪ ಕೈಗೊಂಡಿರುವುದು ಖುಷಿ ನೀಡಿದೆ. ಮೈಸೂರಿನ ಯೋಗ ಪರಂಪರೆಗೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲಕ್ಕಿಂತಲೂ ಪ್ರಾಚೀನವಾದ ಇತಿಹಾಸವಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಯೋಗ ಗುರು ಕೃಷ್ಣಮಾಚಾರಿ ಅವರ ಸಂಬಂಧದೊಂದಿಗೆ ಮೈಸೂರು ಯೋಗಕ್ಕೆ ಹೆಸರಾಗಿದೆ. ನಮ್ಮ ಪೂರ್ವಿಕರು ಸಂಗೀತ, ಸಂಸ್ಕೃತಿಯ ಜೊತೆಗೆ ಯೋಗದ ಪರಂಪರೆಗೂ ಪ್ರೋತ್ಸಾಹ ನೀಡಿದ್ದಾರೆ ಎಂದು ಸ್ಮರಿಸಿದರು.

ಫಿಟ್ ಮೈಸೂರು: ಜಿಎಸ್‌ಎಸ್ ಯೋಗ ಸಂಸ್ಥೆಯ ಸಂಸ್ಥಾಪಕ ಶ್ರೀಹರಿ ದ್ವಾರಕನಾಥ್ ಮಾತನಾಡಿ, ಮೈಸೂರಿಗರು ಶಿಸ್ತು ಬದ್ಧ ಯೋಗಾಭ್ಯಾಸ ಮತ್ತು ಸಂಘಟನೆಯ ಮೂಲಕ ವಿಶ್ವ ಯೋಗ ದಿನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮೈಸೂರಿಗೆ ಕರೆಸಿಕೊಂಡಿದ್ದೆವು. ಈಗ ಫಿಟ್ ಮೈಸೂರು ಅಭಿಯಾನಕ್ಕೆ ಮತ್ತೊಮ್ಮೆ ಪ್ರಧಾನಿಗಳನ್ನು ಕರೆಸಿಕೊಳ್ಳೋಣ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರು ಯೋಗ ದಿನ ಪ್ರಕಟಿಸಿದ ಮೊದಲ ವರ್ಷ ಮಳೆ ನಡುವೆಯೂ 10 ಸಾವಿರ ಜನ ಭಾಗವಹಿಸಿದ್ದೇವೆ. ನಂತರದ ವರ್ಷಗಳಲ್ಲಿ 55,506 ಸಾವಿರ ಜನ ಸೇರಿ ಯೋಗ ಮಾಡಿದ್ದು ದಾಖಲೆ ಆಗಿದೆ. ಕೋವಿಡ್ ಕಾಲದಲ್ಲೂ ಲಕ್ಷಾಂತರ ಜನ ಯೋಗ ಮಾಡಿದ್ದೆವು. ಈ ವರ್ಷ ಉದ್ಯಾನ, ಅಪಾರ್ಟ್‌ಮೆಂಟ್, ಶಾಲೆ ಸೇರಿದಂತೆ 120 ಜಾಗಗಳಲ್ಲಿ ಪ್ರತ್ಯೇಕವಾಗಿ ಯೋಗಾಭ್ಯಾಸ ನಡೆಸಲಾಗುವುದು. 1200 ಯೋಗ ಶಿಕ್ಷಕರ ಮಾರ್ಗದರ್ಶನದಲ್ಲಿ 1.20 ಲಕ್ಷ ಜನ ಯೋಗ ಮಾಡಲಿದ್ದಾರೆ. ಇದಕ್ಕೆ ವಿವಿಧ ಸಂಘ–ಸಂಸ್ಥೆಗಳು, ಸುತ್ತೂರು ಮಠ, ಹಲವು ಶಾಲಾ–ಕಾಲೇಜುಗಳು ಕೈಜೋಡಿಸಿವೆ ಎಂದರು. ಭಾರತ್ ಸ್ವಾಭಿಮಾನ್ ಟ್ರಸ್ಟ್ ಸಂಸ್ಥಾಪಕ ಶಶಿಕುಮಾರ್, ಎಸ್‌ಪಿವೈಎಸ್‌ಎಸ್ ಸಂಸ್ಥೆಯ ನಂಜುಂಡಸ್ವಾಮಿ, ಯೋಗ ಸ್ಪೋರ್ಟ್ ಫೌಂಡೇಶನ್ ಗಣೇಶ್‌ಕುಮಾರ್, ಯೋಗ ಒಕ್ಕೂಟದ ಕೆ.ಜಿ.ದೇವರಾಜು, ಮೈಸೂರು ಯೋಗ ಅಸೋಸಿಯೇಷನ್ ಸಂಸ್ಥೆಯ ಅನಂತು, ಸುಮಿತ್, ವೆಂಕಟೇಶ್, ರವಿಕುಮಾರ್ ಇದ್ದರು.

ಇಂದಿನಿಂದ 'ಶುಕವನ' ತಾತ್ಕಾಲಿಕ ಬಂದ್: ಬೋನ್ಸಾಯ್ ಗಾರ್ಡನ್, ಮ್ಯೂಸಿಯಂ ಮುಕ್ತ

ಮೈಸೂರು, ಮೇ31(ಎಂಟಿವೈ)–ಮೈಸೂರಿನ ಅವಧೂತ ದತ್ತ ಪೀಠದ ಗಿಳಿಗಳ ಪುನರ್ವಸತಿ ಕೇಂದ್ರ 'ಶುಕವನ' ಜೂ.1ರಿಂದ ಕೆಲದಿನಗಳವರೆಗೆ ತಾತ್ಕಾಲಿಕವಾಗಿ ಬಂದ್ ಮಾಡಲಾಗುತ್ತದೆ ಎಂದು ದತ್ತಪೀಠದ ಆಡಳಿತ ಮಂಡಳಿ ತಿಳಿಸಿದೆ. ಅಭಿವೃದ್ಧಿ ಹಾಗೂ ನವೀಕರಣ ಕಾಮಗಾರಿಗಳ ಹಿನ್ನೆಲೆಯಲ್ಲಿ ಶುಕವನಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದ್ದು, ಕಾಮಗಾರಿ ಪೂರ್ಣಗೊಂಡ ಬಳಿಕ ಸಾರ್ವಜನಿಕರಿಗೆ ಪ್ರವೇಶಾವಕಾಶ ಕಲ್ಪಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.



ಬೋನ್ಸಾಯ್ ಉದ್ಯಾನ ಮುಕ್ತ ಶುಕವನ ಬಂದ್ ಆಗಿದ್ದರೂ ಅದಕ್ಕೆ ಹೊಂದಿಕೊಂಡಂತಿರುವ ಬೋನ್ಸಾಯ್ ಉದ್ಯಾನವನ ಮತ್ತು ವಿಶ್ವಂ ವಸ್ತು ಸಂಗ್ರಹಾಲಯ ಪ್ರವಾಸಿಗರ ವೀಕ್ಷಣೆಗೆ ಲಭ್ಯವಿರುತ್ತವೆ.

ಕಾವೇರಿ ನದಿ ನೀರು ಹಂಚಿಕೆ ಪ್ರಶ್ನಿಸಿ ಕಾವೇರಿ ನದಿ ರಕ್ಷಣಾ ಸಮಿತಿಯಿಂದ ಸುಪ್ರೀಂಗೆ ಮರು ಪರಿಶೀಲನಾ ಅರ್ಜಿ

ಮೈಸೂರು: ಕಾವೇರಿ ನದಿ ನೀರು ಹಂಚಿಕೆ ಪ್ರಶ್ನಿಸಿ ಕಾವೇರಿ ನದಿ ರಕ್ಷಣಾ ಸಮಿತಿಯಿಂದ ಸುಪ್ರೀಂಕೋರ್ಟಿನಲ್ಲಿ ಮರು ಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆ. ಕಾವೇರಿ ನದಿ ನೀರು ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದ್ದು, ಸುಪ್ರೀಂಕೋರ್ಟ್ ಈಗಾಗಲೇ ನೀಡಿರುವ ತೀರ್ಪನ್ನು ಮರು ಪರಿಶೀಲಿಸಬೇಕು ಎಂದು ನಿವೃತ್ತ ಸುಪ್ರೀಂಕೋರ್ಟ್ ನ್ಯಾಯಾಧೀಶ ಎನ್.ಗೋಪಾಲಗೌಡರ ನೇತೃತ್ವದಲ್ಲಿ ಮರುಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆ. ಈ ವೇಳೆ ಸಮಿತಿ ಮಹಾ ಪೋಷಕರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬ್ರಿಜೇಶ್ ಕಾಳಪ್ಪ, ವೆಂಕಟರಾಮು, ಅಂದಾನಪ್ಪ ಲಗ್ಗೆರೆ, ಗುರುದತ್ತ ಅಂಕೋಲ್ಕರ್ ಮೂಲಕ ರಿಟ್ ಅರ್ಜಿ ಸಲ್ಲಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಹೆಚ್.ಕೆ.ರಾಮು ತಿಳಿಸಿದ್ದಾರೆ.




ಮೈಸೂರು ಮಿತ್ರ ಸೋಮವಾರ 1 ಜೂನ್ 2026

ಮೃತ್ಯು ಕೂಪವಾದ ಪ್ರವಾಸಿತಾಣ

ಬಲಮುರಿ, ಎಡಮುರಿ

• ನಿಷೇಧಾಜ್ಞೆ ಇದ್ದರೂ ಎಚ್ಚೆತ್ತುಕೊಳ್ಳದ ಪ್ರವಾಸಿಗರು • 11 ವರ್ಷದಲ್ಲಿ 70 ಮಂದಿ ಸಾವು



● ಎಂ.ಕೆ.ಮೋಹನ್‌ರಾಜ್

ಮಂಡ್ಯ, ಮೇ 31– ಬಿರು ಬಿಸಿಲಿನಲ್ಲಿ ದೇಹ ತಂಪಾಗಿಸಲು ಹಾಗೂ ರಜಾ ದಿನ ಕಳೆಯಲು ಪ್ರವಾಸಿ ತಾಣಗಳಿಗೆ ಹೋಗುವುದು ಸಹಜ. ಆದರೆ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಪ್ರಸಿದ್ಧ ಪ್ರವಾಸಿ ತಾಣಗಳಾದ ಕಾವೇರಿ ನದಿಯ ಬಲಮುರಿ, ಎಡಮುರಿ ಮೃತ್ಯು ಕೂಪಗಳಾಗಿ ಪರಿಣಮಿಸಿವೆ.

ಬಲಮುರಿ, ಎಡಮುರಿ ಪ್ರವಾಸಿ ತಾಣದ ಕಾವೇರಿ ನದಿ ನೀರಿನಾಟವು ಆ ಕ್ಷಣಕ್ಕೆ ಮನಸ್ಸಿಗೆ ಮುದ ನೀಡಿದರೂ, ಪ್ರವಾಸಿಗರು ಸಾವಿಗೆ ಹತ್ತಿರವಾಗುತ್ತಿದ್ದಾರೆ. ನೀರಿನಾಟವಾಡುತ್ತಿದ್ದಂತೆ ಮುಳುಗಿ ಸಾವನ್ನಪ್ಪುವವರ ಸಂಖ್ಯೆ ಹೆಚ್ಚಾಗ್ತಿದೆ.

ಎಚ್ಚೆತ್ತುಕೊಳ್ಳದ ಪ್ರವಾಸಿಗರು: ನದಿಗಿಳಿದು ಆಟವಾಡುತ್ತಿದ್ದಂತೆ ಸದ್ದಿಲ್ಲದೆ ಬರುವ ಜವರಾಯ ಪ್ರವಾಸಿಗರ ಪ್ರಾಣಕ್ಕೆ ಸಂಚಕಾರ ತರುತ್ತಿದ್ದಾನೆ. ಈ ಬಗ್ಗೆ ಸಾಕಷ್ಟು ಜಾಗೃತಿ, ಅರಿವು ಮೂಡಿಸಿದರೂ ಪ್ರವಾಸಿಗರು ಮಾತ್ರ ಎಚ್ಚೆತ್ತುಕೊಳ್ಳುತ್ತಿಲ್ಲ ಎಂಬುದೇ ವಿಷಾದಕರ.

ನಿಷೇಧಾಜ್ಞೆ ಜಾರಿ: ಬಲಮುರಿಗೆ ಆಗಮಿಸಿದ ಮೈಸೂರಿನ ಇಬ್ಬರು ಯುವಕರು ಕಾವೇರಿ ನದಿಯಲ್ಲಿ ಮುಳುಗಿ ಸಾವನ್ನಪ್ಪಿದ್ದರು. ಅದಕ್ಕೂ ಮುನ್ನ ಪ್ರವಾಸಿಗರೊಬ್ಬರು ಸಾವನ್ನಪ್ಪಿದ್ದರು. ಏ.16ರಂದು ಶ್ರೀರಂಗಪಟ್ಟಣ ತಹಸೀಲ್ದಾರ್ ಚೇತನಾ ಯಾದವ್ ಬಲಮುರಿ, ಎಡಮುರಿ ಪ್ರವಾಸಿ ಸ್ಥಳಕ್ಕೆ ಪ್ರವಾಸಿಗರಿಗೆ ನಿಷೇಧಾಜ್ಞೆ ಹೇರಿದ್ದರು. ಅದರಂತೆ ಪೊಲೀಸ್ ಇಲಾಖೆಯಿಂದಲೂ ಸಿಬ್ಬಂದಿ ನಿಯೋಜಿಸಲಾಗಿತ್ತು. ಆದರೂ ಪ್ರವಾಸಿಗರು ಪೊಲೀಸ್ ಸಿಬ್ಬಂದಿಗಳ ಕಣ್ತಪ್ಪಿಸಿ ನದಿಗಿಳಿಯುತ್ತಿದ್ದಾರೆ.

11 ವರ್ಷದಲ್ಲಿ 70 ಸಾವು: ಕಳೆದ 11 ವರ್ಷದಲ್ಲಿ ಬಲಮುರಿ ಹಾಗೂ ಎಡಮುರಿಯಲ್ಲಿ 70 ಮಂದಿ ಸಾವನ್ನಪ್ಪಿದ್ದಾರೆ. ಘಟನೆಗೆ ಸಂಬಂಧಿಸಿದಂತೆ 66 ಪ್ರಕರಣಗಳು ದಾಖಲಾಗಿವೆ. 2019ರಲ್ಲಿ 13 ಮಂದಿ, 2023ರಲ್ಲಿ 10 ಮಂದಿ, 2024, 2025 ರಲ್ಲಿ ತಲಾ 11 ಮಂದಿ ಅಸುನೀಗಿದ್ದಾರೆ. 2026ರ ಕಳೆದ 5 ತಿಂಗಳಲ್ಲಿ 5 ಮಂದಿ ನೀರಿನಾಟಕ್ಕೆ ಬಲಿಯಾಗಿದ್ದಾರೆ.

ಕಾವೇರಿ ನದಿ ವ್ಯಾಪ್ತಿಯಲ್ಲೂ ಪ್ರವಾಸಿಗರ ಆಗಮನ: ಬಲಮುರಿ, ಎಡಮುರಿ ಪ್ರವೇಶಕ್ಕೆ ಪ್ರವಾಸಿಗರಿಗೆ ನಿಷೇಧವಿರುವ ಪರಿಣಾಮ ಪ್ರವಾಸಿಗರು ಕಾವೇರಿ ನದಿ ತೀರದ ವ್ಯಾಪ್ತಿಗೆ ಆಗಮಿಸುತ್ತಿದ್ದಾರೆ. ಅಲ್ಲಿ ನದಿಯ ಆಳ, ಸೆಳೆತ ಗೊತ್ತಿಲ್ಲದ ಪ್ರವಾಸಿಗರು ನೀರಿಗಿಳಿಯುತ್ತಿದ್ದಾರೆ. ಕಳೆದ ವಾರ ಮೈಸೂರಿನ ಇಬ್ಬರು ಯುವಕರು ಮೃತಪಟ್ಟ ಹಾಗೆಯೇ ಇಂಥ ದುರಂತ ಸಂಭವಿಸಿದೆ. ಬಲಮುರಿಯಿಂದ 3 ಕಿಮೀ ದೂರದ ನದಿ ತೀರದಲ್ಲಿ ಇಬ್ಬರು ಈಜಾಡಲು ನದಿಗೆ ಇಳಿದಿದ್ದಾರೆ. ಈ ವೇಳೆ ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ. ನಂತರ ನೀರಿನಲ್ಲಿ ಬಲಮುರಿ ಕಡೆಗೆ ಶವಗಳು ತೇಲಿಕೊಂಡು ಬಂದಿರುವುದರಿಂದ ಬಲಮುರಿಯಲ್ಲಿಯೇ ಮೃತಪಟ್ಟಿದ್ದಾರೆ ಎಂಬ ಸುದ್ದಿ ಹರಿದಾಡಿತು. ಕಾವೇರಿ ನದಿ ತೀರದಲ್ಲಿರುವ ಗ್ರಾಮಗಳು, ತೋಟಗಳು, ಜಮೀನುಗಳ ಮೂಲಕವೂ ನದಿ ಪ್ರವೇಶಿಸುತ್ತಿರುವುದು ಆತಂಕ ತಂದೊಡ್ಡಿದೆ.

ಸಿಸಿ ಕ್ಯಾಮರಾ ಕಣ್ಗಾವಲು: ಬಲಮುರಿಗೆ ಪ್ರವಾಸಿಗರ ಪ್ರವೇಶಕ್ಕೆ ನಿಷೇಧವಿದೆ. ಪ್ರವಾಸಿಗರ ಮೇಲೆ ನಿಗಾ ಇಡಲು ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಜೊತೆಗೆ ಸಿಬ್ಬಂದಿಗಳ ನಿಯೋಜಿಸಿದ್ದರೂ ಪ್ರವಾಸಿಗರು ಬರುವುದನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಕೆಲವು ಕಿಡಿಗೇಡಿಗಳು ಹಾವಳಿ ಇಡುತ್ತಿದ್ದಾರೆ. ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ. ಇದರ ಮೇಲೂ ಕೂಡ ನಿಗಾ ಇಡಲಾಗುತ್ತಿದೆ.

ಸಾವಿನ ಪ್ರಕರಣಗಳ ವಿವರ

ವರ್ಷ	ದಾಖಲಾದ ಪ್ರಕರಣ	ಸಾವು
2016	04	04
2017	09	09
2018	01	01
2019	13	13
2020	02	02
2021	00	00
2022	04	04
2023	08	10
2024	11	11
2025	10	11
2026 (ಮೇ)	04	05
ಒಟ್ಟು	66	70

ಪ್ರವಾಸಿಗರ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡಬೇಕು. ಎಲ್ಲಾ ಕಡೆ ಮುಂಜಾಗ್ರತೆ ಕ್ರಮ ವಹಿಸುವಂತೆ ಪೊಲೀಸ್ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

-ಡಾ.ಕುಮಾರ, ಜಿಲ್ಲಾಧಿಕಾರಿ.

ಕಾವೇರಿ ನದಿ ತಟದ ಬಲಮುರಿ ಪ್ರವಾಸಿ ತಾಣದಲ್ಲಿ ಪ್ರವಾಸಿಗರಿಗೆ ಎಚ್ಚರಿಕೆಯ ನಾಮಫಲಕ ಅಳವಡಿಸಲಾಗಿದೆ. ಸಿಸಿ ಕ್ಯಾಮರಾ ಅಳವಡಿಸಿ ನಿಗಾ ವಹಿಸಲಾಗುತ್ತಿದೆ. ಜೊತೆಗೆ ಪೊಲೀಸರು ಹಾಗೂ ಗೃಹರಕ್ಷಕ ದಳ ಸಿಬ್ಬಂದಿಯನ್ನು ನಿಯೋಜಿಸಿ ಕ್ರಮವಹಿಸಲಾಗಿದೆ.

-ಡಾ.ವಿ.ಜೆ.ಶೋಭಾರಾಣಿ, ಎಸ್ಪಿ.

ಮನ್‌ಮುಲ್ ಒಕ್ಕೂಟದಿಂದ ಡಿಜಿಟಲ್ ವ್ಯವಹಾರ

ಫಲಾನುಭವಿಗಳಿಗೆ ಚೆಕ್ ವಿತರಿಸಿ ನಿರ್ದೇಶಕ ಸಿ.ಶಿವಕುಮಾರ್ ಮಾಹಿತಿ



ನಿವೃತ್ತ ಡೇರಿ ಕಾರ್ಯದರ್ಶಿಗಳನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಸನ್ಮಾನಿಸಿದರು.

ಪಾಂಡವಪುರ, ಮೇ 31– ಮನ್‌ಮುಲ್ ಒಕ್ಕೂಟದಿಂದ ವಿತರಿಸುವ ರೈತರ ಎಲ್ಲಾ ಸೌಲಭ್ಯದ ಹಣದ ವ್ಯವಹಾರವನ್ನು ಇನ್ನು ಮುಂದೆ ಡಿಜಿಟಲ್ ಪೇಮೆಂಟ್ ಮೂಲಕ ವ್ಯವಹರಿಸಲಾಗುವುದು ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ತಿಳಿಸಿದರು.

ಪಟ್ಟಣದ ಮನ್‌ಮುಲ್ ಉಪ ವ್ಯವಸ್ಥಾಪಕರ ಕಚೇರಿಯಲ್ಲಿ ರಾಸು ವಿಮೆ ಯೋಜನೆ ಹಣದ ಚೆಕ್ ಅನ್ನು ಫಲಾನುಭವಿಗೆ ವಿತರಿಸಿ, ಬಳಿಕ ನಿವೃತ್ತಿಗೊಂಡ ಕಾರ್ಯದರ್ಶಿಗಳನ್ನು ಅಭಿನಂದಿಸಿ ಮಾತನಾಡಿದ ಅವರು, ರೈತ ಫಲಾನುಭವಿಗಳಿಗೆ ನೀಡುವ ರಾಸು ವಿಮೆ, ರೈತ ಕಲ್ಯಾಣ ಟ್ರಸ್ಟ್, ಹಾಲು ಕರೆಯುವ ಯಂತ್ರದ ಸಬ್ಸಿಡಿ ಸೇರಿದಂತೆ ಅನೇಕ ಸೌಲಭ್ಯಗಳ ಹಣದ ವ್ಯವಹಾರವನ್ನು ಚೆಕ್ ಮೂಲಕ ವಿತರಿಸಲಾಗುತ್ತಿತ್ತು. ಇದರಲ್ಲಿ ದೋಷಗಳು ಕಂಡು ಬಂದ ಹಿನ್ನೆಲೆಯಲ್ಲಿ ಇನ್ನೂ ಮುಂದೆ ಹಣದ ಎಲ್ಲಾ ವ್ಯವಹಾರಗಳನ್ನು ಡಿಜಿಟಲ್ ವ್ಯವಹಾರದ ಮೂಲಕ ಮಾಡಲು ಆಡಳಿತ ಮಂಡಳಿಯಲ್ಲಿ ತೀರ್ಮಾನಿಸಲಾಗಿದೆ. ಇದರಿಂದ ರೈತರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ನಾನು ನಿರ್ದೇಶಕನಾದ ಬಳಿಕ ಇಲ್ಲಿವರೆಗೆ ಒಕ್ಕೂಟದ ಹಲವು ಯೋಜನೆಗಳಿಂದ 4 ಕೋಟಿಯಷ್ಟು ಹಣದ ಚೆಕ್‌ಗಳನ್ನು ರೈತ ಫಲಾನುಭವಿಗಳಿಗೆ ವಿತರಿಸಿದ್ದೇನೆ. ಒಕ್ಕೂಟಗಳಿಂದ ದೊರೆಯುವ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ಡೇರಿಗಳಿಗೆ ಕೊಡಿಸುವ ಕೆಲಸ ಮಾಡುತ್ತಿದ್ದೇನೆ. ನಾನೆಂದು ಸಹಕಾರ ಸಂಘದಲ್ಲಿ ರಾಜಕೀಯ ಮಾಡುವುದಿಲ್ಲ. ಇಲ್ಲಿ ಕೆಲಸ ಮಾಡುವ ಎಲ್ಲರೂ ನಮ್ಮ ಕುಟುಂಬದ ಸದಸ್ಯರಿದ್ದಂತೆ. ಹಲವಾರು ಯುವ ಕಾರ್ಯದರ್ಶಿಗಳು ಕೆಲಸ ಮಾಡುತ್ತಿದ್ದೀರಾ. ನೀವುಗಳು ಹಿರಿಯ ಕಾರ್ಯದರ್ಶಿಗಳಿಂದ ಸಲಹೆ, ಸಹಕಾರ, ಮಾಹಿತಿ ಪಡೆದು ಕೆಲಸ ನಿರ್ವಹಿಸಬೇಕು. ರೈತರ ರಾಸುಗಳಿಗೆ ಯಾವುದೇ ಸಮಸ್ಯೆಗಳು ಬಂದರೂ ತಕ್ಷಣ ಪಶು ವೈದ್ಯರನ್ನು ಕರೆಸಿ ಅವರಿಗೆ ನೆರವಾಗುವ ಕೆಲಸ ಮಾಡಬೇಕು. ಡೇರಿಗಳಲ್ಲಿ ಕಾರ್ಯದರ್ಶಿಗಳು ಉತ್ತಮವಾಗಿ ಕೆಲಸ ನಿರ್ವಹಿಸಿದರೆ ಡೇರಿಗಳು ಅಭಿವೃದ್ಧಿ ಹೊಂದಲಿವೆ ಎಂದು ಸಲಹೆ ನೀಡಿದರು.

ಇದೇ ವೇಳೆ ನಿವೃತ್ತ ಕೆರೆತೊಣ್ಣೂರು ಡೇರಿ ಕಾರ್ಯದರ್ಶಿ ಸಿದ್ದಲಿಂಗೇಗೌಡ, ಹಿರೇಮರಳಿ ಡೇರಿ ಕಾರ್ಯದರ್ಶಿ ಜಗದೀಶ್ ಹಾಗೂ ನುಗ್ಗಹಳ್ಳಿ ಡೇರಿ ಕಾರ್ಯದರ್ಶಿ ಸಿದ್ದರಾಮೇಗೌಡ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಸಹಕಾರಿ ಯೂನಿಯನ್‌ಗೆ ನಿರ್ದೇಶಕರಾಗಿ ಆಯ್ಕೆಯಾದ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರನ್ನು ಎಲ್ಲಾ ಕಾರ್ಯದರ್ಶಿಗಳು, ಮನ್‌ಮುಲ್ ಸಿಬ್ಬಂದಿಗಳು ಅಭಿನಂದಿಸಿದರು.

ಈ ವೇಳೆ ಮನ್‌ಮುಲ್ ಉಪ ವ್ಯವಸ್ಥಾಪಕ ಆರ್.ಪ್ರಸಾದ್, ಸಹಾಯಕ ವ್ಯವಸ್ಥಾಪಕರಾದ ಡಾ.ಸಂತೋಷ್ ಬುಡುಗೌಡ್ರು, ಡಾ.ಪ್ರಕಾಶ್ ಬೆಳಗಲಿ, ಡಾ.ಮಣಿಕಂಠ, ವಿಸ್ತರಣಾಧಿಕಾರಿಗಳಾದ ಮಧುಶಂಕರ್ ಸಿ.ಎನ್, ನಾಗೇಂದ್ರ ಕುಮಾರ್, ಪ್ರಜ್ವಲ್ ಗೌಡ, ಉಷಾ, ಟೆಕ್ನಿಷಿಯನ್ ಆನಂದ್ ಸೇರಿದಂತೆ ಹಲವರಿದ್ದರು.

ಹೆಜ್ಜೆ ಗುರುತು ಕವನ ಸಂಕಲನ ಬಿಡುಗಡೆ



ಗಣ್ಯರು ಹೆಜ್ಜೆ ಗುರುತು ಕವನ ಸಂಕಲನ ಬಿಡುಗಡೆಗೊಳಿಸಿದರು.

ಮಂಡ್ಯ, ಮೇ 31– ಸಾಹಿತ್ಯ ರಚನೆ ಎಂಬುದು ಪ್ರಸವ ಕ್ರಿಯೆ (ಹೆರಿಗೆ) ಇದ್ದಂತೆ ಎಂದು ಶಿಕ್ಷಣ ತಜ್ಞ, ಅಂತಾರಾಷ್ಟ್ರೀಯ ಖ್ಯಾತಿಯ ವಾಗ್ಮಿ ಡಾ.ಗುರುರಾಜ ಕರಜಗಿ ಅಭಿಪ್ರಾಯಿಸಿದರು.

ನಗರದ ಕೆವಿಎಸ್ ಶತಮಾನೋತ್ಸವ ಭವನದಲ್ಲಿ ವೈದ್ಯ, ಕವಿ ಡಾ.ಚಂದ್ರಶೇಖರ್ ಅವರ ಹೆಜ್ಜೆ ಗುರುತು ಕವನ ಸಂಕಲನ ಬಿಡುಗಡೆ ಮಾಡಿ ಮಾತನಾಡಿದ ಅವರು, ಕವಿ ಮತ್ತು ಕಾವ್ಯಕ್ಕೆ ಆಳವಾದ ಪವಿತ್ರ ಸಂಬಂಧವಿದೆ. ಆದ್ದರಿಂದಲೇ ಕಾವ್ಯವನ್ನು ಕವಿಯ ಆತ್ಮದ ಅಭಿವ್ಯಕ್ತಿ ಎಂದು ಬಣ್ಣಿಸುತ್ತೇನೆ. ಮಗು ತಾಯಿಯ ಸಾರ ಸರ್ವಸ್ವವನ್ನು ಹೀರಿಕೊಳ್ಳುತ್ತದೆ. ಹೀಗೆ ಅವಧಿ ಮುಗಿದ ಮೇಲೆ ಹುಟ್ಟುವ ಮಗು ಆರೋಗ್ಯಪೂರ್ಣವಾಗಿ ಇರುತ್ತದೆ ಹಾಗೆಯೇ ಸಾಹಿತ್ಯ ಕೃತಿಯೂ ಕವಿಯ ಸರ್ವಸ್ವವನ್ನು ಬಳಸುತ್ತದೆ ಎಂದು ಹೇಳಿದರು.

ಕವಿಯ ಭಾವ, ಭಾಷೆ ಪ್ರಬುದ್ಧತೆ, ಅದನ್ನು ಬಳಸುವ ಕೌಶಲ್ಯದ ಜೊತೆಗೆ ಜನರಿಗೆ ಹೇಗೆ ಮುಟ್ಟಿಸುವುದು ಎಂಬ ಅರಿವಿದ್ದಾಗ ಕಾವ್ಯ ಬಹಳ ದಿನ ಉಳಿಯುತ್ತದೆ. ತೋಚಿದ್ದೆಲ್ಲಾ ಬರೆದರೆ ಕಾವ್ಯವಾಗದು. ಕವಿ ತಾನು ಅನುಭವಿಸಿದ್ದನ್ನೇ ಕಾವ್ಯವಾಗಿ ಬರೆಯಬೇಕು. ಒಳಗೆ ಉಳಿಯದೇ ಅದು ಒದ್ದಾಡಿ ಹೊರಗೆ ಬಂದಾಗ ಅದು ಅದ್ಭುತವಾಗಿ ಸೃಷ್ಟಿಯಾಗುತ್ತದೆ ಎಂದು ತಿಳಿಸಿದರು. ಕಾವ್ಯವೇ ಕವಿಯ ಪ್ರತಿಬಿಂಬ ಅವನು ಕಂಡದ್ದನ್ನೇ ಬರೆದಿರುತ್ತಾನೆ. ವೈಯಕ್ತಿಕ ಅನುಭವ ಸಾರ್ವತ್ರಿಕ ಅನುಭವವಾಗುವ ಸಾಧ್ಯತೆ ಇದೆ.ಅದನ್ನು ದಾಖಲೆ ಮಾಡುವುದು ಅತಿ ಮುಖ್ಯ. ನಂಬಿಕೆಯನ್ನು ಉಳಿಸಿಕೊಳ್ಳುವಂತಹ ಘಟನೆಗಳು ಕಾವ್ಯವಾಗಿ ಬರುವುದು ಸಾರ್ವತ್ರಿಕವಾಗಿ ಸದಾ ಉಳಿಯುತ್ತದೆ. ಈ ನಿಟ್ಟಿನಲ್ಲಿ ಉತ್ತಮ ಕಾವ್ಯಗಳು ರಚನೆಯಾಗಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ, ಮಿಮ್ಸ್‌ನ ಮಾಜಿ ಅಧೀಕ್ಷಕ ಡಾ.ರಾಮಲಿಂಗೇಗೌಡ, ನಿರ್ದೇಶಕ ಡಾ.ನರಸಿಂಹಸ್ವಾಮಿ. ಕೃತಿಯ ಕರ್ತೃ ಡಾ.ಚಂದ್ರಶೇಖರ್ ಭಾಗವಹಿಸಿದ್ದರು.

ಮೂಡನಹಳ್ಳಿ ಡೇರಿಗೆ ನಿರ್ದೇಶಕರ ಆಯ್ಕೆ



ನೂತನ ನಿರ್ದೇಶಕರನ್ನು ಶಾಸಕ ಹೆಚ್.ಟಿ.ಮಂಜು ಸನ್ಮಾನಿಸಿದರು.

ಕೆ.ಆರ್.ಪೇಟೆ, ಮೇ 31– ತಾಲೂಕಿನ ಮೂಡನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ನೂತನ ನಿರ್ದೇಶಕರು ಆಯ್ಕೆಯಾಗಿದ್ದಾರೆ.

ಡೇರಿಗೆ ಎಂ.ಸಿ.ಕವಿತ, ಎಂ.ಎಂ.ಕಾಂತಾಮಣಿ, ಸಿ.ಎಂ.ಪ್ರಭಾವತಿ, ಪೂರ್ಣಿಮಾ, ರತ್ನಮ್ಮ, ಸುಕನ್ಯಾ, ಸುಮಿತ್ರ, ಕೆ.ರಜಿನಿ, ವೀಣಾ, ಗೌರಮ್ಮ ನೂತನ ನಿರ್ದೇಶಕರಾಗಿ ಆಯ್ಕೆಯಾಗಿದ್ದು, ಚುನಾವಣಾಧಿಕಾರಿಯಾಗಿ ಕೆ.ಹೇಮಲತಾ, ಸಹ ಚುನಾವಣಾಧಿಕಾರಿಯಾಗಿ ಸಂಘದ ಕಾರ್ಯದರ್ಶಿ ಶೋಭಾ ಕಾರ್ಯ ನಿರ್ವಹಿಸಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ನೂತನ ನಿರ್ದೇಶಕರನ್ನು ಸನ್ಮಾನಿಸಿ ಮಾತನಾಡಿದ ಶಾಸಕ ಹೆಚ್.ಟಿ.ಮಂಜು, ಸಂಘದ ಅಭಿವೃದ್ಧಿಗೆ ನೂತನ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರು ಪಕ್ಷಬೇಧ ಮರೆತು ಕೆಲಸ ಮಾಡಬೇಕು. ಗುಣಮಟ್ಟದ ಹಾಲು ಸಂಗ್ರಹಿಸಲು ಪ್ರಥಮ ಆದ್ಯತೆ ನೀಡಬೇಕು. ಗ್ರಾಮದ ಡೇರಿಯ ಅಭಿವೃದ್ಧಿಗೆ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ನೀಡಬಹುದಾದ ಅನುದಾನ ನೀಡುತ್ತೇನೆ. ಸಂಘದ ಮೂಲಕ ಹಾಲು ಉತ್ಪಾದಕರಿಗೆ ಒಕ್ಕೂಟ ಹಾಗೂ ಸರ್ಕಾರದಿಂದ ಬರುವ ಎಲ್ಲಾ ಸೌಲಭ್ಯಗಳನ್ನು ಅರ್ಹರಿಗೆ ನೀಡುವ ಮೂಲಕ ಸಂಘದ ಅಭಿವೃದ್ಧಿಗೆ ಎಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದರು.

ತಾಲೂಕು ಜೆಡಿಎಸ್ ರೈತ ಮೋರ್ಚಾ ಅಧ್ಯಕ್ಷ ಹುಲ್ಲೇಗೌಡ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ಶೀಳನೆರೆ ಹೋಬಳಿ ಜೆಡಿಎಸ್ ಅಧ್ಯಕ್ಷ ಸ್ವಾಮಿಗೌಡ, ಕುಮಾರ್, ಮುಖಂಡರಾದ ಆನಂದ್‌ಕುಮಾರ್, ಮಂಜೇಗೌಡ, ಮಂಜುನಾಥ್, ಈರಯ್ಯ, ರಾಜೇಗೌಡ ಸೇರಿದಂತೆ ಗ್ರಾಮದ ಮುಖಂಡರಿದ್ದರು.

ಮೂರನೇ ಪುಟದಿಂದ

ಸಚಿವ ಸಂಪುಟ ರಚನೆಗೆ ಕಸರತ್ತು

ಸಿದ್ದರಾಮಯ್ಯ ಬೆಂಬಲಿಗರಿಗೆ ಹಾಗೂ 11 ಸ್ಥಾನಗಳನ್ನು ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆಪ್ತರಿಗೆ ನೀಡುವ ಕುರಿತು ಚರ್ಚೆ ನಡೆದಿದ್ದು, ಅಂತಿಮ ಹಂತದ ಮಾತುಕತೆಗಳ ಆಧಾರದಲ್ಲಿ ಈ ಸಂಖ್ಯೆಯಲ್ಲಿ ಸಣ್ಣಪುಟ್ಟ ಬದಲಾವಣೆಗಳಾಗುವ ಸಾಧ್ಯತೆಯೂ ಇದೆ ಎನ್ನಲಾಗಿದೆ. ಹೊಸ ಸರ್ಕಾರವು ಚುರುಕಾಗಿ ಕಾರ್ಯನಿರ್ವಹಿಸುವಂತೆ ಯುವ, ಸಕ್ರಿಯ ಹಾಗೂ ಉತ್ತಮ ಸಾಧನೆ ತೋರಿದ ಶಾಸಕರಿಗೆ ಮೊದಲ ಆದ್ಯತೆ ನೀಡಬೇಕು ಎಂದು ಹೈಕಮಾಂಡ್ ಸ್ಪಷ್ಟ ಸೂಚನೆ ನೀಡಿದೆ ಎಂದು ತಿಳಿದುಬಂದಿದೆ.

ಡಿಕೆಶಿ ಜೊತೆ 10 ಮಂದಿ ಪ್ರಮಾಣ?: ಡಿ.ಕೆ.ಶಿವಕುಮಾರ್ ಅವರೊಂದಿಗೆ ಮೊದಲ ಹಂತದಲ್ಲಿ ಕನಿಷ್ಠ 10 ಪ್ರಮುಖ ನಾಯಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ. ಹೊಸ ಸಚಿವ ಸಂಪುಟದಲ್ಲಿ ಉಪ ಮುಖ್ಯಮಂತ್ರಿಗಳ ನೇಮಕ ಇರುವುದಿಲ್ಲ ಎಂದು ಹಿರಿಯ ಕಾಂಗ್ರೆಸ್‌ನ ನಾಯಕರು ಸ್ಪಷ್ಟಪಡಿಸಿದ್ದಾರೆ.

ರಾಜ್ಯ ಕಾಂಗ್ರೆಸ್‌ನ ನೂತನ ಅಧ್ಯಕ್ಷರ ಆಯ್ಕೆಯನ್ನೂ ಶೀಘ್ರದಲ್ಲೇ ಘೋಷಿಸುವ ಸಾಧ್ಯತೆಯಿದ್ದು, ಈ ಹುದ್ದೆಗೆ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಸತೀಶ್ ಜಾರಕಿಹೊಳಿ ಹೆಸರುಗಳು ಪ್ರಮುಖವಾಗಿ ಕೇಳಿಬರುತ್ತಿವೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಅವರಿಗೆ ಸಚಿವ ಸ್ಥಾನ ದೊರೆಯುವ ಸಾಧ್ಯತೆ ಹೆಚ್ಚಿದೆ ಎಂದು ಮೂಲಗಳು ತಿಳಿಸಿವೆ. ಅಲ್ಪಸಂಖ್ಯಾತ ಸಮುದಾಯದ ಕೋಟಾದಲ್ಲಿ ಹಿರಿಯ ನಾಯಕರಾದ ಜಮೀರ್ ಅಹ್ಮದ್ ಖಾನ್, ಎನ್.ಎ.ಹ್ಯಾರಿಸ್ ಹಾಗೂ ಯು.ಟಿ.ಖಾದರ್ ಅವರ ಹೆಸರುಗಳೂ ಪ್ರಮುಖವಾಗಿ ಕೇಳಿಬರುತ್ತಿವೆ.

ಮತ್ತೊಂದೆಡೆ ಡಿ.ಕೆ.ಶಿವಕುಮಾರ್ ಅವರ ಕೆಲ ಆಪ್ತ ನಾಯಕರಿಗೆ ಸಚಿವ ಸ್ಥಾನಕ್ಕಾಗಿ ಇನ್ನಷ್ಟು ಕಾಲ ಕಾಯಬೇಕಾಗಬಹುದು ಎಂದು ಹೇಳಲಾಗುತ್ತಿದ್ದು, ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿರುವ ಇಕ್ಬಾಲ್ ಹುಸೇನ್, ಬಸವರಾಜ ಶಿವಗಂಗೆ ಹಾಗೂ ನಯನಾ ಮೋಟಮ್ಮ ಅವರನ್ನು ವಿವಿಧ ಮಂಡಳಿ ಹಾಗೂ ನಿಗಮಗಳ ಪ್ರಮುಖ ಹುದ್ದೆಗಳಲ್ಲಿ ನೇಮಕ ಮಾಡುವ ಬಗ್ಗೆ ಚರ್ಚೆ ನಡೆದಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಡಿಸಿಎಂ ಪಟ್ಟ, ಸಚಿವ ಸ್ಥಾನಕ್ಕೆ ಹೆಚ್ಚಿದ ಲಾಬಿ

ಮುಖ್ಯಮಂತ್ರಿ ಕೂಗು ಜೋರಾಗಿತ್ತು. ಇದೀಗ ದಲಿತ ನಾಯಕರಿಗೆ ಡಿಸಿಎಂ ಸ್ಥಾನ ಕಲ್ಪಿಸಬೇಕೆಂಬ ಒತ್ತಾಯ ಹೆಚ್ಚಾಗಿದೆ. ಈ ನಡುವೆ ದಲಿತ ಕೋಟಾದಡಿ ಡಾ.ಜಿ.ಪರಮೇಶ್ವರ್ ಹಾಗೂ ಪ್ರಿಯಾಂಕ್ ಖರ್ಗೆ ನಡುವೆ ರೇಸ್ ಏರ್ಪಟ್ಟಿದೆ. ಉಪ ಮುಖ್ಯಮಂತ್ರಿ ಸ್ಥಾನ ನೀಡುವ ಸಂಬಂಧ ಮೊನ್ನೆ ದೆಹಲಿಗೆ ತೆರಳಿದ್ದಾಗ ಪರಮೇಶ್ವರ್, ಹೈಕಮಾಂಡ್ ನಾಯಕರನ್ನು ಒತ್ತಾಯಿಸಿದ್ದಾರೆ. ಡಿಸಿಎಂ ಹುದ್ದೆ ಜೊತೆಗೆ ಪ್ರಮುಖ ಖಾತೆಗೂ ಪಟ್ಟು ಹಿಡಿದಿದ್ದಾರೆ. ಇದೇ ವೇಳೆ ಕಳೆದ ಬರಿ ನಿರ್ವಹಿಸಿದ್ದ ಗೃಹ ಇಲಾಖೆಯೂ ಬೇಡ ಎಂದಿದ್ದಾರೆ ಎನ್ನಲಾಗಿದೆ. ಅಲ್ಲದೆ, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ಹೆಸರು ಪ್ರಬಲವಾಗಿ ಕೇಳಿಬರುತ್ತಿದೆ. ಇದೇ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಸಮುದಾಯದ ಈಶ್ವರ್ ಖಂಡ್ರೆ, ಎಂ.ಬಿ.ಪಾಟೀಲ್ ಅವರ ಪರವಾಗಿಯೂ ಲಾಬಿ ಹೆಚ್ಚಾಗಿದೆ. ಡಿಸಿಎಂ ಸ್ಥಾನಗಳೆಷ್ಟು, ಯಾರೆಲ್ಲಾ ಪಟ್ಟ ಅಲಂಕರಿಸಲಿದ್ದಾರೆ ಎಂಬುದನ್ನು ಕಾದುನೋಡಬೇಕಿದೆ.

ಸಿದ್ದರಾಮಯ್ಯರ ಶಿಫಾರಸ್ಸು: ಡಿಸಿಎಂ ಹುದ್ದೆ ಮಾತ್ರವಲ್ಲದೆ ಸಚಿವ ಸ್ಥಾನಕ್ಕಾಗಿಯೂ ಆಕಾಂಕ್ಷಿಗಳ ಪೈಪೋಟಿ ಜೋರಾಗಿಯೇ ನಡೆಯುತ್ತಿದೆ. ಸಿದ್ದರಾಮಯ್ಯ ಸರ್ಕಾರದಲ್ಲಿ ಸಚಿವರಾಗಿದ್ದವರು ಮತ್ತೆ ಸ್ಥಾನ ಗಿಟ್ಟಿಸುವ ಪ್ರಯತ್ನದಲ್ಲಿದ್ದರೆ, ಹಿರಿತನದ ಆಧಾರದಲ್ಲಿ ಹಲವರು ಲಾಬಿಗೆ ಇಳಿದಿದ್ದಾರೆ. ಕೆಲ ಹೊಸ ಶಾಸಕರಿಗೂ ಈ ಬಾರಿ ಅವಕಾಶ ಸಿಗುವ ಸಾಧ್ಯತೆ ಇರುವುದರಿಂದ ಮೊದಲ ಬಾರಿ ಶಾಸಕರಾದವರೂ ಒತ್ತಡ ತಂತ್ರ ಬಳಸುತ್ತಿದ್ದಾರೆ. ಈ ನಡುವೆ ಸಚಿವ ಸ್ಥಾನಕ್ಕೆ ಹೈಕಮಾಂಡ್‌ಗೆ ಕೆಲ ಹೆಸರುಗಳನ್ನು ಸಿದ್ದರಾಮಯ್ಯ ಶಿಫಾರಸ್ಸು ಮಾಡಿದ್ದಾರೆ ಎನ್ನಲಾಗಿದೆ. ಕೊಡಗಿನ ಎ.ಎಸ್.ಪೊನ್ನಣ್ಣ, ಶಿವರಾಜ್ ತಂಗಡಗಿ, ಪುಟ್ಟರಂಗ ಶೆಟ್ಟಿ, ಕೆ.ವೆಂಕಟೇಶ್, ಬಸವರಾಜ್ ರಾಯರೆಡ್ಡಿ, ಬಿ.ಕೆ.ಹರಿಪ್ರಸಾದ್, ಸಂತೋಷ್ ಲಾಡ್, ಹೆಚ್.ಸಿ.ಮಹದೇವಪ್ಪ, ಜಮೀರ್ ಅಹಮದ್ ಖಾನ್ ಹೆಸರುಗಳು ಸಿದ್ದರಾಮಯ್ಯ ಶಿಫಾರಸು ಮಾಡಿರುವ ಪಟ್ಟಿಯಲ್ಲಿ ಇವೆ ಎನ್ನಲಾಗಿದೆ.

ರಾಜಾ ಸುಬ್ರಮಣಿ ಅಧಿಕಾರ ಸ್ವೀಕಾರ

ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರೀಯ ರಕ್ಷಣಾ ಅಕಾಡೆಮಿ, ಭಾರತೀಯ ಸೇನಾ ಅಕಾಡೆಮಿ, ಯುಕೆಯ ಜಾಯಿಂಟ್ ಸರ್ವೀಸಸ್ ಕಮಾಂಡ್ ಅಂಡ್ ಸ್ಟಾಫ್ ಕಾಲೇಜು ಹಾಗೂ ನವದೆಹಲಿಯ ನ್ಯಾಷನಲ್ ಡಿಫೆನ್ಸ್ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿರುವ ಇವರು, 1985ರ ಡಿಸೆಂಬರ್‌ನಲ್ಲಿ ಗರ್ವಾಲ್ ರೈಫಲ್ಸ್‌ನ 8ನೇ ಬೆಟಾಲಿಯನ್‌ಗೆ ಸೇರ್ಪಡೆಯಾಗಿ ಕಜಕಿಸ್ತಾನದಲ್ಲಿ ರಕ್ಷಣಾ ಅಟ್ಯಾಶೆ, ವೆಲ್ಲಿಂಗ್ಟನ್‌ನ ಡಿಫೆನ್ಸ್ ಸರ್ವೀಸಸ್ ಸ್ಟಾಫ್ ಕಾಲೇಜಿನ ಮುಖ್ಯ ತರಬೇತುದಾರ ಹಾಗೂ ಉತ್ತರ ಕಮಾಂಡ್‌ನ ಮುಖ್ಯ ಸಿಬ್ಬಂದಿ ಅಧಿಕಾರಿ ಸೇರಿದಂತೆ ಹಲವು ಪ್ರಮುಖ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಅವರ ವಿಶಿಷ್ಟ ಸೇವೆಗೆ ಜನರಲ್ ಸುಬ್ರಮಣಿ ಅವರಿಗೆ ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ, ಸೇನಾ ಪದಕ ಮತ್ತು ವಿಶಿಷ್ಟ ಸೇವಾ ಪದಕ ಸೇರಿದಂತೆ ಹಲವು ಗೌರವಗಳು ಸಂದಿವೆ.

ಈ ಸಲನೂ ಕಪ್ ನಮ್ದೆ

ಪ್ರಸಕ್ತ ಸಾಲಿನ ಟೂರ್ನಿಗೆ ವರ್ಣರಂಜಿತ ತೆರೆ ಬಿದ್ದಿತ್ತು. ಭಾನುವಾರ ನಡೆದ ಹೈವೋಲ್ಟೇಜ್ ಫೈನಲ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟಾನ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಿತು. ನಂತರ ಗುರಿ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಚೇಸ್ ಮಾಸ್ಟರ್ ವಿರಾಟ್ ಕೊಹ್ಲಿ ಅವರ ಜವಾಬ್ದಾರಿಯುತ ಅರ್ಧಶತಕದ ನೆರವಿನಿಂದ 18 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 161 ರನ್ ಗಳಿಸುವ ಮೂಲಕ ಚಾಂಪಿಯನ್ ಆಗಿ ಹೊರಹೊಮ್ಮಿತು.

ಆರಂಭಿಕ ಆಘಾತ: ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟನ್ಸ್ ಆರಂಭಿಕ ಆಘಾತ ಎದುರಿಸಿತು. ತಂಡದ ಮೊತ್ತ 26 ರನ್ ಆಗುವಷ್ಟರಲ್ಲಿ ನಾಯಕ ಶುಭ್‌ಮನ್ ಗಿಲ್ 10 ರನ್ ಮತ್ತು ಸ್ಟಾರ್ ಬ್ಯಾಟರ್ ಸಾಯಿ ಸುದರ್ಶನ್ 12 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ನಂತರ ಬಂದ ಮಧ್ಯಮ ಕ್ರಮಾಂಕದಲ್ಲಿ ನಿಶಾಂತ್ ಸಿಂಧು 20 ರನ್ ಗಳಿಸಿ ಸ್ವಲ್ಪ ಸಮಯ ಕ್ರೀಸ್‌ನಲ್ಲಿ ನಿಂತರೂ ರನ್ ಗತಿ ಹೆಚ್ಚಿಸಲು ಸಾಧ್ಯವಾಗಲಿಲ್ಲ. ಇನ್ನು ಅನುಭವಿ ಆಟಗಾರ ಜೋಸ್ ಬಟ್ಲರ್ ಕೂಡ 23 ಎಸೆತಗಳಲ್ಲಿ ಕೇವಲ 19 ರನ್ ಗಳಿಸಿ ಕೃನಾಲ್ ಪಾಂಡ್ಯ ಬೌಲಿಂಗ್‌ನಲ್ಲಿ ಸ್ಟಂಪ್ ಔಟಾದರು.

ಒಂದೆಡೆ ವಿಕೆಟ್‌ಗಳು ಬೀಳುತ್ತಿದ್ದರೂ, ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿದ ವಾಷಿಂಗ್ಟನ್ ಸುಂದರ್ ಆಕರ್ಷಕ ಅರ್ಧಶತಕ ಬಾರಿಸಿ ತಂಡ ಗೌರವಯುತ ಮೊತ್ತ ದಾಖಲಿಸಲು ನೆರವಾದರು. ವಾಷಿಂಗ್ಟನ್ ಸುಂದರ್ 37 ಎಸೆತಗಳಲ್ಲಿ 5 ಬೌಂಡರಿ ಒಳಗೊಂಡ 50 ರನ್ ಗಳಿಸಿ ಅಜೇಯರಾಗಿ ಉಳಿದರು. ಕೊನೆಯಲ್ಲಿ ಅರ್ಷದ್ ಖಾನ್ 6 ಎಸೆತಗಳಲ್ಲಿ 2 ಸಿಕ್ಸರ್ ಒಳಗೊಂಡ 15 ರನ್ ಗಳಿಸಿದರೇ, ರಾಹುಲ್ ತೇವಾಟಿಯಾ, ಜೇಸನ್ ಹೋಲ್ಡರ್, ರಶೀದ್ ಖಾನ್ ತಲಾ 7 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಕಗಿಸೊ ರಬಾಡ ಅಜೇಯ 3 ರನ್ ಗಳಿಸಿದರು. ಆರ್‌ಸಿಬಿ ಪರ ಬೌಲಿಂಗ್‌ನಲ್ಲಿ ರಸಿಖ್ ಸಲಾಮ್ 3, ಭುವನೇಶ್ವರ್ ಕುಮಾರ್ ಮತ್ತು ಜೋಶ್ ಹೇಜಲ್‌ವುಡ್ ತಲಾ 2, ಕೃನಾಲ್ ಪಾಂಡ್ಯ 1 ವಿಕೆಟ್ ಪಡೆದರು.

156 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಇನ್ನಿಂಗ್ಸ್ ಆರಂಭಿಸಿದ ವಿರಾಟ್ ಕೊಹ್ಲಿ ಹಾಗೂ ವೆಂಕಟೇಶ್ ಅಯ್ಯರ್ ಮೊದಲ ವಿಕೆಟ್‌ಗೆ 62 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. 16 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಒಳಗೊಂಡ 32 ರನ್ ಗಳಿಸಿದ ವೆಂಕಟೇಶ್ ಅಯ್ಯರ್ ಮೊಹಮ್ಮದ್ ಸಿರಾಜ್ ಬೌಲಿಂಗ್‌ನಲ್ಲಿ ರಬಾಡಗೆ ಕ್ಯಾಚ್ ನೀಡಿ ವಿಕೆಟ್ ಒಪ್ಪಿಸಿದರು. ನಂತರ ಬಂದ ದೇವದತ್ ಪಡಿಕ್ಕಲ್ ಭಾರೀ ಹೊಡೆತಕ್ಕೆ ಕೈಹಾಕಿ 1 ರನ್ ಗಳಿಸಿ ಬಂದಷ್ಟೇ ವೇಗವಾಗಿ ನಿರ್ಗಮಿಸಿದರು. ನಾಯಕ ರಜತ್ ಪಾಟೀದಾರ್ ಸಹ 13 ಎಸೆತಗಳಲ್ಲಿ ತಲಾ 1 ಸಿಕ್ಸರ್, ಬೌಂಡರಿ ಒಳಗೊಂಡ 15 ರನ್ ಗಳಿಸಿ ಔಟಾದರು.

ಈ ವೇಳೆ ಕ್ರೀಸ್‌ಗೆ ಆಗಮಿಸಿದ ಕೃನಾಲ್ ಪಾಂಡ್ಯ 1, ಟೀಮ್ ಡೇವಿಡ್ 24, ಜಿತೇಶ್ ಶರ್ಮಾ 11 ರನ್ ಗಳಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ತನ್ನ ಖ್ಯಾತಿಗೆ ತಕ್ಕಂತೆ ಜವಾಬ್ದಾರಿಯುತವಾಗಿ ಆಟವಾಡಿದ ಕಿಂಗ್ ಕೊಹ್ಲಿ 42 ಎಸೆತಗಳಲ್ಲಿ 3 ಸಿಕ್ಸರ್, 9 ಬೌಂಡರಿ ಒಳಗೊಂಡ ಅಜೇಯ 75 ರನ್ ಗಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಗುಜರಾತ್ ಪರ ರಶೀದ್ ಖಾನ್ 2, ಮೊಹಮ್ಮದ್ ಸಿರಾಜ್, ರಬಾಡ ಹಾಗೂ ಅರ್ಷದ್ ಖಾನ್ ತಲಾ ಒಂದೊಂದು ವಿಕೆಟ್ ಪಡೆದರು. ಪಂದ್ಯದಲ್ಲಿ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿದ ವಿರಾಟ್ ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರೇ, ಸರಣಿಯುದ್ದಕ್ಕೂ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದ ವೈಭವ್ ಸೂರ್ಯವಂಶಿ ಆರೆಂಜ್ ಕ್ಯಾಪ್ ಜೊತೆಗೆ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಜನರಾದರು.

ಗಣ್ಯರಿಂದ ಶುಭಾಶಯ

ಬೆಂಗಳೂರು: ಸತತ 2ನೇ ಬಾರಿಗೆ ಆರ್‌ಸಿಬಿ ಐಪಿಎಲ್ ಚಾಂಪಿಯನ್ ಆಗುತ್ತಿದ್ದಂತೆಯೇ ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಗಣ್ಯರು ಶುಭ ಕೋರಿದ್ದಾರೆ.

'ನಮ್ಮ ಆರ್‌ಸಿಬಿ ಮತ್ತೊಮ್ಮೆ ಐಪಿಎಲ್ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಪಂದ್ಯಾವಳಿಯುದ್ದಕ್ಕೂ ಆರ್‌ಸಿಬಿ ಹುಡುಗರು ತೋರಿದ ಕೆಚ್ಚೆದೆಯ ಆಟಕ್ಕೆ ಎದುರಾಳಿ ತಂಡಗಳ ಬಳಿ ಉತ್ತರವೇ ಇಲ್ಲವೇನೋ ಎಂಬಂತಿತ್ತು. ಸತತ ಎರಡನೇ ಬಾರಿಗೆ ಕಪ್ ಮುಡಿಗೇರಿಸಿಕೊಂಡಿರುವ ನಮ್ಮ ಆರ್‌ಸಿಬಿಗೆ ಅಭಿನಂದನೆಗಳು.'

ಇಂದಿನ ಫೈನಲ್ ಪಂದ್ಯದಲ್ಲಿ ರಸಿಕ್ ಧಾರ್, ಭುವನೇಶ್ವರ್ ಕುಮಾರ್, ವಿರಾಟ್ ಕೊಹ್ಲಿಯ ಆಟ ಬಹುಕಾಲ ನೆನಪಲ್ಲಿ ಉಳಿಯುವಂತದ್ದು. ಸುಘಟಿತ ಹೋರಾಟಕ್ಕೆ ದೊರೆತ ಈ ಗೆಲುವು ಆರ್‌ಸಿಬಿ ಅಭಿಮಾನಿಗಳೆಲ್ಲರ ಮನೆಯಲ್ಲಿ ಹಬ್ಬದ ವಾತಾವರಣ ಸೃಷ್ಟಿಸಿದೆ.' ಈ ಸಲವೂ ಕಪ್ ನಮ್ಮದೇ' ಎಂದು ಸಂತಸ ವ್ಯಕ್ತಪಡಿಸಿ ಮಾಜಿ ಸಿಎಂ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

ನಿಜವಾದ ಚಾಂಪಿಯನ್ ತಂಡ: 'ಇಂದು ರಾತ್ರಿ, ಬೆಂಗಳೂರು ಮತ್ತೆ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಈ ಸಲವೂ ಕಪ್ ನಮ್ಮದೇ ಆರ್‌ಸಿಬಿ ಸತತ ಎರಡನೇ ಐಪಿಎಲ್ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದೆ. ಧೈರ್ಯ, ಸಂಯಮ ಮತ್ತು ನಿಜವಾದ ಚಾಂಪಿಯನ್‌ಗಳ ಹೃದಯದಿಂದ, ತಂಡವು ಮತ್ತೊಮ್ಮೆ ಬೆಂಗಳೂರಿಗೆ ಹೆಮ್ಮೆ ತಂದಿದೆ. ಆಟಗಾರರು, ತರಬೇತುದಾರರು, ಸಹಾಯಕ ಸಿಬ್ಬಂದಿ ಮತ್ತು ತಂಡದ ಪ್ರತಿ ಹೆಜ್ಜೆಯಲ್ಲೂ ಬೆಂಬಲವಾಗಿ ನಿಂತ ಲಕ್ಷಾಂತರ ಅಭಿಮಾನಿಗಳಿಗೆ ಅಭಿನಂದನೆಗಳು. ಇದು ನಮ್ಮ ಆರ್‌ಸಿಬಿ ಸುವರ್ಣ ಅಧ್ಯಾಯ ಎಂದು ಇನ್ನು ಡಿಕೆಶಿವಕುಮಾರ್ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.



ಮೈಸೂರಲ್ಲಿ ಆರ್‌ಸಿಬಿ ಅಭಿಮಾನಿಗಳ ಸಂಭ್ರಮಾಚರಣೆ ಮುಗಿಲು ಮುಟ್ಟಿತು. ಭದ್ರತೆ ಹಿನ್ನೆಲೆಯಲ್ಲಿ ಕೆ.ಆರ್. ವೃತ್ತ ಹೊರತುಪಡಿಸಿ ವಿವಿಧ ವೃತ್ತ ಹಾಗೂ ಜಂಕ್ಷನ್‌ಗಳಲ್ಲಿ ಅಭಿಮಾನಿಗಳು ಸಂಭ್ರಮಿಸಿದರು.

ನೂತನ ಸಂಪುಟ ರಚನೆಯ ಸ್ಪಷ್ಟತೆ

ಪರಿಗಣಿಸುತ್ತಿದ್ದಾರೆ ಎಂದು ನಮಗೆ ಇನ್ನೂ ತಿಳಿದಿಲ್ಲ ಎಂದು ಹೇಳಿದರು.

ಸಮರ್ಥ ನಾಯಕನ ನೇಮಕ: ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಕೆಪಿಸಿಸಿಗೆ ಹೊಸ ಅಧ್ಯಕ್ಷರ ನೇಮಕ ಕುರಿತು ಮಾತನಾಡಿದ ಖರ್ಗೆ, ನಾಯಕತ್ವ ಪರಿವರ್ತನೆ ಸಹಜ ಪ್ರಕ್ರಿಯೆಯಾಗಿದ್ದು, ಪಕ್ಷವು ಸೂಕ್ತ ಆಯ್ಕೆಗಳನ್ನು ಅನ್ವೇಷಿಸುತ್ತಿದೆ ಎಂದರು. ಬದಲಾವಣೆ ಸಹಜ. ಅಧಿಕಾರದಲ್ಲಿರುವವರು ಕೆಳಗಿಳಿದ ನಂತರ, ಬೇರೊಬ್ಬರು ಬರಬೇಕಾಗುತ್ತದೆ. ನಾವು ಹುಡುಕುತ್ತಿದ್ದೇವೆ. ನಾವು ಒಳ್ಳೆಯ ವ್ಯಕ್ತಿಯನ್ನು ಗುರುತಿಸಬೇಕು ಮತ್ತು ಸರಿಯಾದ ಸಂಯೋಜನೆಯನ್ನು ಪರಿಗಣಿಸಬೇಕು. ಭವಿಷ್ಯದ ಚುನಾವಣೆಗಳಿಗೆ ಮುಂಚಿತವಾಗಿ ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸಾಮೂಹಿಕವಾಗಿ ಮತ್ತು ತ್ವರಿತವಾಗಿ ಕೆಲಸ ಮಾಡುವಂತಹ ಸಾಮರ್ಥ್ಯವಿರುವ ನಾಯಕನನ್ನು ಪಕ್ಷ ಹುಡುಕುತ್ತಿದೆ. ನಮಗೆ ಈಗ ಕೇವಲ 24 ತಿಂಗಳುಗಳಿವೆ. ಹಾಗಾಗಿ ಸಮರ್ಥ ನಾಯಕ ಬೇಕು ಎಂದು ಹೇಳಿದರು.

ರಾಹುಲ್ ಗಾಂಧಿ ಶಂಕುಸ್ಥಾಪನೆ ಸಾಧ್ಯತೆ

ಕಾಂಗ್ರೆಸ್ ಭವನಕ್ಕೆ ಶಂಕುಸ್ಥಾಪನೆ ನೆರವೇರಿಸುವಂತೆ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರಿಗೆ ವಿನಂತಿಸುತ್ತಿದ್ದೇನೆ. ಇಬ್ಬರಿಗೂ ನಾನು ಆಹ್ವಾನವನ್ನು ಕಳುಹಿಸುತ್ತಿದ್ದೇನೆ. ಈವರೆಗೂ ಇಬ್ಬರು ನಾಯಕರೂ ಸಮಯ ಖಚಿತಪಡಿಸಿಲ್ಲ. ಬಹುಶಃ ರಾಹುಲ್ ಗಾಂಧಿಯವರು ಒಪ್ಪುತ್ತಾರೆ ಅಂದುಕೊಂಡಿದ್ದೇನೆ ಎಂದರು. ಇದೊಂದು ಐತಿಹಾಸಿಕ ಕಾರ್ಯಕ್ರಮ. ಲೋಕಸಭವನದಲ್ಲಿ ಪ್ರಮಾಣ ವಚನ ಮುಗಿಸಿಕೊಂಡು ನೇರವಾಗಿ ಇಲ್ಲಿಗೆ ಬಂದು ಭೂಮಿಪೂಜೆ ಮಾಡಬೇಕು ಎಂದುಕೊಂಡಿದ್ದೇವೆ. ಈ ಕಾರ್ಯಕ್ರಮಕ್ಕೆ ನಮ್ಮ ಪಕ್ಷದ ರಾಜ್ಯದ ಎಲ್ಲಾ ಬ್ಲಾಕ್ ಅಧ್ಯಕ್ಷರು, ಡಿಸಿಸಿ ಅಧ್ಯಕ್ಷರು, ಮುಂಚೂಣಿ ನಾಯಕರು, ಎಲ್ಲಾ ಮಾಜಿ ಶಾಸಕರು, ಸಂಸದರು, ನಿಗಮ ಮಂಡಳಿ ಗಳ ಅಧ್ಯಕ್ಷರುಗಳು, ವಿಧಾನ ಪರಿಷತ್ ಸದಸ್ಯರು ಭಾಗವಹಿಸಬೇಕು. ಆದರೆ, ಸಾರ್ವಜನಿಕರಿಗೆ ಅವಕಾಶ ಇರುವುದಿಲ್ಲ ಎಂದು ಮಾಹಿತಿ ನೀಡಿದರು.

ಪ್ರಮಾಣವಚನದ ನೇರ ಪ್ರಸಾರ: ನಮ್ಮ ಕಾರ್ಯಕರ್ತರು ಕ್ಷಮಿಸಬೇಕು. ಪ್ರಮಾಣ ವಚನ ಸಂದರ್ಭದಲ್ಲಿ ಜಾಗದ ಕೊರತೆಯಿಂದ ಕೇವಲ 600 ಅಥವಾ 700 ಜನರಿಗೆ ಮಾತ್ರ ಅಲ್ಲಿ ಅವಕಾಶ ಇದೆ. ಹೀಗಾಗಿ, ಪಕ್ಷದ ಮುಖಂಡರಿಗೆ ಶಂಕುಸ್ಥಾಪನೆ ನೆರವೇರುವ ಸ್ಥಳಕ್ಕೆ ಆಹ್ವಾನಿಸಲಾಗುತ್ತದೆ. ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನೂ ಇಲ್ಲಿಯೇ ನೇರ ಪ್ರಸಾರ ಮಾಡಲಾಗುವುದು ಎಂದು ತಿಳಿಸಿದರು.

ಸಿದ್ದರಾಮಯ್ಯ ದೆಹಲಿಗೆ ದೌಡು

ಮಾಜಿ ಸಿಎಂ ದೆಹಲಿಗೆ: ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಮತ್ತೆ ಸೋಮವಾರ ದೆಹಲಿಗೆ ತೆರಳಲು ಸಜ್ಜಾಗಿದ್ದಾರೆ. ಬೆಳಗ್ಗೆ 9.30ಕ್ಕೆ ದೆಹಲಿಗೆ ಪ್ರಯಾಣ ಬೆಳೆಸಲಿರುವ ಅವರು, ತಮ್ಮ ಆಪ್ತರಿಗೆ ಸಚಿವ ಸ್ಥಾನ ನೀಡುವ ಸಂಬಂಧ ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸುವ ಸಾಧ್ಯತೆ ಇದೆ. ಈ ಎಲ್ಲಾ ಬೆಳವಣಿಗೆ ಬಗ್ಗೆ ಪ್ರತಿಕ್ರಿಯಿಸಿರುವ ನಿಯೋಜಿತ ಸಿಎಂ ಡಿಕೆಶಿ, ಯಾರ್‍ಯಾರು ಸಚಿವರಾಗುತ್ತಾರೆ ಎಂಬುದನ್ನು ಹೈಕಮಾಂಡ್ ನಿರ್ಧರಿಸುತ್ತೆ, ಈ ಬಗ್ಗೆ ನನಗೆ ಇನ್ನೂ ಮಾಹಿತಿಯಿಲ್ಲ ಎಂದು ಹೇಳಿದ್ದಾರೆ.

ಕುಮಾರಕೃಪ ಅತಿಥಿ ಗೃಹವೇ ನೂತನ ಸಿಎಂ ತಾತ್ಕಾಲಿಕ ನಿವಾಸ

ಬೆಂಗಳೂರು: ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಕುಮಾರಕೃಪ ಅತಿಥಿ ಗೃಹವನ್ನು ತಮ್ಮ ತಾತ್ಕಾಲಿಕ ಸರ್ಕಾರಿ ನಿವಾಸವನ್ನಾಗಿ ಬಳಸಿಕೊಳ್ಳಲು ನಿರ್ಧರಿಸಿದ್ದಾರೆ.

ಕುಮಾರಕೃಪಾ ಗೆಸ್ಟ್‌ಹೌಸ್‌ನಲ್ಲಿರುವ ಬೃಹತ್ ಕಲ್ಲಿನ ಕಟ್ಟಡದಲ್ಲಿ ಅವರು ವಾಸಿಸಲಿದ್ದಾರೆ. ಹಾಲಿ ಕಾವೇರಿ ನಿವಾಸದಲ್ಲಿ ವಾಸಿಸುತ್ತಿರುವ ಸಿದ್ದರಾಮಯ್ಯ ಅವರಿಗೆ ಅದನ್ನು ತಕ್ಷಣ ಬಿಟ್ಟುಕೊಡುವಂತೆ ಕೇಳದಿರಲು ಡಿ.ಕೆ.ಶಿವಕುಮಾರ್ ತೀರ್ಮಾನಿಸಿದ್ದಾರೆ ಎಂದು ತಿಳಿದುಬಂದಿದೆ. ಕುಮಾರಕೃಪ ಗೆಸ್ಟ್‌ಹೌಸ್‌ಗೆ ಈಗಾಗಲೇ ಪೊಲೀಸರಿಂದ ಭದ್ರತೆ ಒದಗಿಸಲಾಗಿದ್ದು, ಹಿರಿಯ ಪೊಲೀಸ್ ಮತ್ತು ಪಿಡಬ್ಲ್ಯೂಡಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಸಭೆಗಳು ಮತ್ತು ಸಾರ್ವಜನಿಕರ ಕುಂದು ಕೊರತೆಗಳನ್ನು ಗೃಹ ಕಚೇರಿ ಕೃಷ್ಣಾದಲ್ಲಿ ನಡೆಸಲು ಚಿಂತನೆ ನಡೆಸಿದ್ದಾರೆ.

ಕರಡಿ ದಾಳಿ; ವ್ಯಕ್ತಿಗೆ ಗಾಯ

ಮೈಸೂರು, ಮೇ 31(ಪಿಎಂ)– ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಯಳಂದೂರು ವಲಯ ವ್ಯಾಪ್ತಿಯ ಪುರಾಣಿ ಶಾಖೆಯ ಪುರಾಣಿ ಪೋಡಿನಲ್ಲಿ ಬೋಡು ಹರೇ ಎಂಬ ಅರಣ್ಯ ಪ್ರದೇಶದಲ್ಲಿ ಭಾನುವಾರ ಕರಡಿಯ ದಾಳಿಯಿಂದ ಬಸವರಾಜು (30) ಎಂಬುವರು ಗಾಯಗೊಂಡಿದ್ದಾರೆ. ಘಟನೆ ಸಂಭವಿಸಿದ ತಕ್ಷಣ ಅರಣ್ಯ ಇಲಾಖೆಯ ಸಿಬ್ಬಂದಿ ಹಾಗೂ ಸ್ಥಳೀಯರು ಗಾಯಾಳುವನ್ನು ಸುರಕ್ಷಿತವಾಗಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಅಗತ್ಯ ಚಿಕಿತ್ಸೆಯನ್ನು ಕೊಡಿಸಿದ್ದಾರೆ. ಪ್ರಸ್ತುತ ಬಸವರಾಜು ಅವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದು, ಆರೋಗ್ಯ ಸ್ಥಿರವಾಗಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸ್ಥಳೀಯ ನಿವಾಸಿಗಳು ಅರಣ್ಯ ಪ್ರದೇಶದಲ್ಲಿ ಸಂಚರಿಸುವಾಗ ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಅರಣ್ಯ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆ

ಮೈಸೂರು, ಮೇ 31(ಪಿಎಂ)– ಮೂರು ತೈಲ ಕಂಪನಿಗಳಿಂದ ವಾಣಿಜ್ಯ ಸಿಲಿಂಡರ್ ಬೆಲೆ ಮತ್ತೆ ಏರಿಕೆಗೊಂಡಿದ್ದು, ಜೂ.1ರಿಂದ ಪರಿಷ್ಕೃತ ದರ ಜಾರಿಗೆ ಬರಲಿದೆ. 19 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆ 46 ರೂ. ಹೆಚ್ಚಳಗೊಂಡಿದೆ.

ಭಾರತೀಯ ಎಲ್‌ಪಿಜಿ ವಿತರಕರ ಸಂಘದ (ಎಲ್‌ಡಿಎಐ) ರಾಜ್ಯಾಧ್ಯಕ್ಷ ಮೆಹುಲ್ ಪಟೇಲ್ 'ಮೈಸೂರು ಮಿತ್ರ'ನಿಗೆ ಈ ವಿಷಯ ತಿಳಿಸಿದರು. ಇಂಡಿಯನ್ ಆಯಿಲ್ ಕಾರ್ಪೋರೇಷನ್, ಭಾರತ್ ಪೆಟ್ರೋಲಿಯಂ ಹಾಗೂ ಹಿಂದೂಸ್ತಾನ್ ಪೆಟ್ರೋಲಿಯಂ ಕಂಪನಿಗಳು ಮೂರು ತೈಲ ಕಂಪನಿಗಳು ಸೇರಿ ನಾಳೆಯಿಂದ ಪರಿಷ್ಕೃತ ದರ ಜಾರಿಗೆ ನಿರ್ಧಾರ ಕೈಗೊಂಡಿವೆ. 3,132 ರೂ. ಇದ್ದ 19 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆಯು ನಾಳೆಯಿಂದ (ಜೂ.1ರಿಂದ) 3,178 ರೂ. ಆಗಲಿದೆ ಎಂದು ಹೇಳಿದರು. 866 ರೂ. ಇದ್ದ ಐದು ಕೆಜಿ ಎಫ್‌ಟಿಎಲ್ (ಫ್ರೀ ಟ್ರೇಡ್ ಎಲ್‌ಪಿಜಿ) ಸಿಲಿಂಡರ್‌ಗೆ 11 ರೂ. ಹೆಚ್ಚಳ ಮಾಡಿದ್ದು, ಅದರಂತೆ ಇದರ ಬೆಲೆಯು 877 ರೂ. ಆಗಲಿದೆ. 35 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆಯು 5,770.50 ರೂ. ಇತ್ತು ಇದೀಗ 5,854 ರೂ. ಆಗಿದೆ. 7,826 ರೂ. ಇದ್ದ 47 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆಯು 7,940.50 ರೂ.ಗೆ ಏರಿಕೆಯಾಗಿದೆ. ಗೃಹಬಳಕೆ ಸಿಲಿಂಡರ್ (14.2 ಕೆಜಿ) ಬೆಲೆಯಲ್ಲಿ (917.50 ರೂ.) ಯಾವುದೇ ವ್ಯತ್ಯಯವಾಗಿಲ್ಲ ಎಂದು ಅವರು ತಿಳಿಸಿದರು.

ಉಗ್ರಪ್ಪರನ್ನು ರಾಜ್ಯಸಭಾ ಸದಸ್ಯರಾಗಿ, ಬಸವರಾಜುಗೆ ಎಂಎಲ್‌ಸಿ ನೀಡಲು ಆಗ್ರಹ

ಮೈಸೂರು, ಮೇ31(ಜಿಎ)–ಹಿರಿಯ ಕಾಂಗ್ರೆಸ್ ಮುಖಂಡ ವಿ.ಎಸ್.ಉಗ್ರಪ್ಪ ಅವರಿಗೆ ರಾಜ್ಯಸಭಾ ಸದಸ್ಯತ್ವ ಹಾಗೂ ಎಸ್.ಸಿ.ಬಸವರಾಜು ಅವರಿಗೆ ವಿಧಾನ ಪರಿಷತ್ ಸದಸ್ಯತ್ವ ನೀಡಬೇಕೆಂದು ಏಕಲವ್ಯ ವಿದ್ಯಾರ್ಥಿ ಯುವಜನ ಪರಿಷತ್ ಕರ್ನಾಟಕ ಸಂಘಟನೆ ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಅಧ್ಯಕ್ಷ ದೀಪಕ್ ಪಾಳೇಗಾರ್ ಮಾತನಾಡಿ, ದಶಕಗಳ ರಾಜಕೀಯ ಅನುಭವ ಹೊಂದಿರುವ ಉಗ್ರಪ್ಪ, ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆ ಸಮಿತಿ ಅಧ್ಯಕ್ಷರಾಗಿ ಸಮಗ್ರ ವರದಿ ನೀಡಿ, ಕ್ರಾಂತಿಕಾರಕ ಶಿಫಾರಸುಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅನುಭವ ಮತ್ತು ಪ್ರಾಮಾಣಿಕ ರಾಜಕಾರಣಿಯೂ ಆಗಿದ್ದಾರೆ. ಹೀಗಾಗಿ ರಾಜ್ಯಸಭೆಗೆ ಕಳುಹಿಸಬೇಕೆಂದು ಕೋರಿದರು.

ವಿಕಾಸ ವೃಕ್ಷ ಫೌಂಡೇಷನ್ ಅಧ್ಯಕ್ಷ ಜಿ.ಆರ್.ರಾಜೇಶ್ ನಾಯಕ್ ಮಾತನಾಡಿ, ನಾಯಕ ಸಮುದಾಯದ ಹಿರಿಯ ಧುರೀಣ ಎಸ್.ಸಿ.ಬಸವರಾಜು ಕಳೆದ 40 ವರ್ಷಗಳಿಂದ ರಾಜಕೀಯದಲ್ಲಿ ಸಕ್ರಿಯರಾಗಿದ್ದು, ಯಾವುದೇ ಸಂದರ್ಭದಲ್ಲಿಯೂ ಪಕ್ಷಾಂತರ ಮಾಡದೇ ನಿಷ್ಠೆ ಪ್ರದರ್ಶಿಸಿದ್ದಾರೆ. ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿಯೂ ಅಪಾರ ಸೇವೆ ಸಲ್ಲಿಸಿದ್ದಾರೆ. ಹೀಗಾಗಿ ಸಾಮಾಜಿಕ ಮತ್ತು ಪ್ರಾದೇಶಿಕ ನ್ಯಾಯದ ಅಡಿಯಲ್ಲಿ ಇವರಿಗೆ ಎಂಎಲ್‌ಸಿ ಸ್ಥಾನ ನೀಡಬೇಕೆಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ನಿರಂಜನ್ ಎಸ್.ಕಳಲೆ, ಸಿ.ಮಹದೇವು, ಶಿವರಾಜ್ ಬಿ.ನಂದಗೋಕುಲ ಮತ್ತಿತರರು ಉಪಸ್ಥಿತರಿದ್ದರು.

ಹುಟ್ಟುಹಬ್ಬ ಆಚರಣೆ...



ಶಿವಶಕ್ತಿ ಟೆಂಡರ್ಸ್ ಮಾಲೀಕರು ಹಾಗೂ ಸಮಾಜ ಸೇವಕ ಎ.ಕುಮಾರ್ ಅವರ ಹುಟ್ಟುಹಬ್ಬವನ್ನು ಮೈಸೂರು ಜಿಲ್ಲಾ ಕಸಾಪ ಕಟ್ಟಡ ನಿರ್ಮಾಣ ಸಮಿತಿ ನಿರ್ದೇಶಕ ಹೆಚ್.ಗಿರೀಶ್‌ಗೌಡ ಅವರ ನೇತೃತ್ವದಲ್ಲಿ ಬೃಹತ್ ಗಾತ್ರದ ಹಾರ ಹಾಕಿ ಅದ್ಧೂರಿಯಾಗಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಿಂಚು ಕುಮಾರ್, ಸಾಗರ್, ಶಿವ, ದರ್ಶನ್, ಪರೀಕ್ಷಿತ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

ಇಂದಿನ ಪಂಚಾಂಗ


01.06.2026 ಸೋಮವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ –2026, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದ್ವಾನ್ ಶ್ರೀ ರಜತ್ ಕುಲಕರ್ಣಿ ಅವರಿಂದ ದಾಸ ರಂಜನಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 5.30ಕ್ಕೆ



■ **ಭಾರತೀ ಪ್ರಕಾಶನ:** ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ ವಿರಚಿತ ಸಾಧನೆಯ ಶಿಖರಗಳು ಸ್ಫೂರ್ತಿದಾಯಕ ವ್ಯಕ್ತಿ ಚಿತ್ರಗಳು, ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ: ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್.ಹೊರಟ್ಟಿ, ಅಧ್ಯಕ್ಷತೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರು, ಮುಖ್ಯ ಅತಿಥಿಗಳು: ವಿಧಾನ ಪರಿಷತ್ ಸದಸ್ಯ, ಹಿರಿಯ ಪತ್ರಕರ್ತರಾದ ಕೆ.ಶಿವಕುಮಾರ್, ಪತ್ರಕರ್ತ ಮದನ್‌ಗೌಡ, ಸ್ಥಳ: ಕಲಾಮಂದಿರ ಆವರಣ, ವಿನೋಬಾ ರಸ್ತೆ, ಬೆಳಗ್ಗೆ 10.30ರಿಂದ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ–ಡಾ.ಗಿರಿಜಾಪತಿ ಎನ್.ಎಂ, 6.35 ಮತ್ತು ಸಂಜೆ 6.10: ಸಸ್ಯ ಸಿರಿ–ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ನಾ ಕಸ್ತೂರಿ ಅವರ ಪಾತಳದಲ್ಲಿ ಪಾಪಚ್ಚಿ–ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.45 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 9.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಅಕ್ಕರೈ ಸುಬ್ಬಲಕ್ಷ್ಮಿ–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ. ಪ್ರಸ್ತುತಿ–ದಿಗ್ವಿಜಯ್.ಬಿ, **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ನಮ್ಮ ಆರೋಗ್ಯ–ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಈ ಕುರಿತು ಮೈಸೂರಿನ ಬಾಲ ನ್ಯಾಯ ಮಂಡಳಿ ಸದಸ್ಯರಾದ ಡಾ.ವಿ.ಎಸ್.ಟಿ.ಕೃಷ್ಣ ಅವರೊಂದಿಗೆ ಸಂದರ್ಶನ. ಸಂದರ್ಶಕರು–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ ಕುರಿತು ಮಾಹಿತಿ. 1.20 ಭಾವಗೀತೆಗಳು–ರೂಪಾ ರಾವ್ ಮತ್ತು ದೀಪಾ ರಾವ್, 2.30–ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎನ್.ಗಿರೀಶ್ ಹಾಗೂ ಎಂ.ಎಸ್.ಪುಟ್ಟರಾಜು–ನಾಗಸ್ವರ ವಾದನ, 4.00–ಮಹಿಳಾರಂಗ–ನನ್ನ ಹಕ್ಕು ನನ್ನ ಜವಾಬ್ದಾರಿ–ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗ ವಹಿಸುತ್ತಾರೆ–ನಿವೃತ್ತ ಸರ್ಕಾರಿ ಅಭಿಯೋಜಕರು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ವಕೀಲರಾದ ಕಾಮಾಕ್ಷಿ ಬಿ.ಕೆ., ಪ್ರಸ್ತುತಿ–ಸಹನಾ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ಜಿಲ್ಲಾ ವಾರ್ತಾ ಪತ್ರ, 6.51 ಕೃಷಿರಂಗ: ಕೃಷಿ ದೀವಿಗೆ–ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಬೀಜೋತ್ಪಾದನೆ, ಬೀಜೋಪಚಾರ ಹಾಗೂ ಬಿತ್ತನೆ ಬೀಜದ ಆಯ್ಕೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಮಂಡ್ಯದ, ವಿ.ಸಿ.ಫಾರಂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಬೀಜ ಘಟಕದ ವಿಶೇಷಾಧಿಕಾರಿ ಡಾ.ಎಸ್.ಬಿ.ಯೋಗಾ ನಂದ ಮತ್ತು ಸಹಾಯಕ ಪ್ರಾಧ್ಯಾಪಕರಾದ ಡಾ.ಸಿದ್ಧಾರೂಢ ಸಿಂಗಾಡಿ. ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: 2026ನೇ ಸಾಲಿನ ಕೇಂದ್ರಲೋಕ ಸೇವಾ ಆಯೋಗ ನಡೆಸಿದ ಪರೀಕ್ಷೆಯಲ್ಲಿ ಉತ್ತೀರ್ಣರಾದ ಶ್ರೀರಂಗಪಟ್ಟಣ ತಾಲೂಕಿನ ಗಂಜಾಂನ ಜಿ.ಎಸ್.ಅಭಿಷೇಕ್ ನಾಯಕ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಅರಿಯಾಕುಡಿ ರಾಮಾನುಜ ಐಯ್ಯಂಗಾರ್–ಹಾಡುಗಾರಿಕೆ, 10.00 'ಶ್ರೀ ವಿದ್ಯಾವಿಶಾರದ' ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ–ವಿದ್ವಾನ್ ವಿ.ನಂಜುಂಡಸ್ವಾಮಿ, 10.30 ಸವಿನೆನಪು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಅಭ್ಯರ್ಥಿ: ಚಾಮುಂಡಿಬೆಟ್ಟದಲ್ಲಿ
101 ಈಡುಗಾಯಿ ಒಡೆದು ಹರಕೆ ತೀರಿಸಿದ ಅಭಿಮಾನಿಗಳು



ಚಾಮುಂಡಿಬೆಟ್ಟದಲ್ಲಿ ಡಿ.ಕೆ.ಶಿವಕುಮಾರ್ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸುತ್ತಿರುವುಕ್ಕೆ ತೇರು ಎಳೆಸಿ ಹರಕೆ ತೀರಿಸಿದರು.

ಮೈಸೂರು, ಮೇ 31(ಎಂಟಿವೈ)– ಡಿ.ಕೆ.ಶಿವಕುಮಾರ್ ನೂತನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದಲ್ಲಿ ಅಖಿಲ ಕರ್ನಾಟಕ ಡಿಕೆ ಶಿವಕುಮಾರ್ ಅಭಿಮಾನಿ ಬಳಗದ ವತಿಯಿಂದ 101 ಈಡುಗಾಯಿ ಹೊಡೆದು ಚಾಮುಂಡೇಶ್ವರಿಯ ತೇರು ಎಳೆಸುವ ಮೂಲಕ ಹರಕೆ ತೀರಿಸಿದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಡಿ.ಕೆ.ಶಿವಕುಮಾರ್ ಆಯ್ಕೆಯಾಗಿ, ಜೂ.3ರಂದು ಪ್ರಮಾಣವಚನ ಸ್ವೀಕರಿಸಲು ಮುಹೂರ್ತ ಫಿಕ್ಸ್ ಆಗಿರುವ ಬೆನ್ನಲ್ಲೇ ಭಾನುವಾರ ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಡಿಕೆಶಿ ಅಭಿಮಾನಿಗಳು ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಚಾಮುಂಡೇಶ್ವರಿ ದೇವಾಲಯದ ಹೊರಗೆ ಒಂದು ಸುತ್ತು ತೇರು ಎಳೆಸಿ, ಡಿ.ಕೆ.ಶಿವಕುಮಾರ್‌ರಿಗೆ ಒಳ್ಳೆಯದಾಗಲೆಂದು ಪ್ರಾರ್ಥಿಸಿದರು. ನಂತರ ದೇವಾಲಯದ ಹೊರಗೆ 101 ಈಡುಗಾಯಿ ಹೊಡೆದು ಹರಕೆ ತೀರಿಸಿದರು.

ಕಾಂಗ್ರೆಸ್ ಮುಖಂಡ ಜಿ.ಶ್ರೀನಾಥ್ ಬಾಬು ಮಾತನಾಡಿ, ಡಿ.ಕೆ.ಶಿವಕುಮಾರ್ ಅವರು ನೂತನ ಮುಖ್ಯಮಂತ್ರಿ ಅಧಿಕಾರ ಸ್ವೀಕರಿಸಲೆಂದು ಪ್ರಾರ್ಥಿಸಿ ಹರಕೆ ಮಾಡಿಕೊಂಡಿದ್ದೆವು. ಇದೀಗ ಅವರು ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಲು ಮುಹೂರ್ತ ನಿಗದಿಯಾಗಿದೆ. ಈ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದಲ್ಲಿ 101 ತೆಂಗಿನ ಕಾಯಿ ಹೊಡೆದು ನಂತರ ಚಾಮುಂಡಮ್ಮನ ತೇರು ಸೇವೆ ಹರಕೆ ತೀರಿಸಲಾಗಿದೆ ಎಂದರು.

ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ಕಾರ್ಯಕರ್ತರ ಶಕ್ತಿಯಾಗಿದ್ದು, ಅವರ ವಿದ್ಯಾರ್ಥಿ ಯುವ ಕಾಂಗ್ರೆಸ್‌ನಿಂದ ತಳ ಮಟ್ಟದಲ್ಲಿ ಪಕ್ಷ ಸಂಘಟಿಸಿ ಪಂಚಾಯತಿಯಿಂದ ವಿಧಾನಸೌಧದವರೆಗೂ ಕಟ್ಟಿ ಬೆಳೆಸಿದ್ದಾರೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನುಡಿದಂತೆ ನಡೆದ ಗ್ಯಾರಂಟಿ ಯೋಜನೆಗಳ ಮೂಲಕ ಮನೆಮನಗಳಲ್ಲಿ ಸ್ಥಾನ ಪಡೆದಿದ್ದಾರೆ. 2028ರಲ್ಲೂ ಮತ್ತೊಮ್ಮೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು ಡಿ.ಕೆ.ಶಿವಕುಮಾರ್ ನಾಯಕತ್ವದ ಆಡಳಿತ ಮುಂದುವರೆಯಲಿದೆ ಎಂದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮಲ್ಲಿಗೆ ವೀರೇಶ್, ಮುಖಂಡರಾದ ಆನಂದ, ರಾಘವೇಂದ್ರ, ಕಿರಣ್, ದಿನೇಶ್, ಯೋಗೇಶ್, ಹರೀಶ ನಾಯ್ಡು, ರಾಜೇಶ್, ನಂದ್‌ಕುಮಾರ್, ಅರ್ಜುನ್, ಲತಾ ಮೋಹನ್, ವಿಜಯಲಕ್ಷ್ಮಿ ಅಯ್ಯಂಗಾರ್, ಕೃಷ್ಣ, ರಾಜು, ಲೋಕೇಶ್, ಮಂಜೇಶ್ ಹಾಗೂ ಇನ್ನಿತರರಿದ್ದರು.

ವಾಟ್ಸಾಪ್ ಜಾಹೀರಾತು ಕ್ಲಿಕ್ ಮಾಡಿ 10.17 ಲಕ್ಷ ಕಳೆದುಕೊಂಡ ವಿದ್ಯಾರ್ಥಿ

ಮೈಸೂರು, ಮೇ31(ಜಿಎ)–ವಾಟ್ಸಾಪ್‌ನಲ್ಲಿ ಬಂದ ಜಾಹೀರಾತು ಕ್ಲಿಕ್ ಮಾಡಿ ವಿದ್ಯಾರ್ಥಿಯೋರ್ವ 10.17 ಲಕ್ಷ ರೂ. ಕಳೆದುಕೊಂಡಿದ್ದಾನೆ. ಮೈಸೂರಿನ ಹೊಸ ಬಂಡಿಕೇರಿಯ ವಿದ್ಯಾರ್ಥಿ ವಾಟ್ಸಾಪ್‌ನಲ್ಲಿ ಜಾಹೀರಾತು ಕ್ಲಿಕ್ ಮಾಡಿದಾಗ ಓಪನ್ ಆಗಿದೆ. ಮತ್ತೊಂದು ನಂಬರ್‌ನಲ್ಲಿ ವರ್ಕ್ ಫ್ರಮ್ ಹೋಂ ಎಂದು ಹೇಳಿ ಮಾಹಿತಿ ನೀಡಿದ್ದಾರೆ. ನಂತರ ಹೋಟೆಲ್, ರೆಸ್ಟೋರೆಂಟ್‌ಗಳಿಗೆ ರೇಟಿಂಗ್ ನೀಡಿದರೆ, 1 ರಿವ್ಯೂಗೆ 10 ರೂ. ನೀಡುತ್ತೇವೆ ಎಂದು ಹೇಳಿ ಟೆಲಿಗ್ರಾಂನಲ್ಲಿ ಲಿಂಕ್ ಕಳುಹಿಸಿದ್ದಾರೆ. ಅದನ್ನು ವಿದ್ಯಾರ್ಥಿ ಅನುಸರಿಸಿ ಮೊದಲ ದಿನದ ಸಂಬಳವಾಗಿ 180 ನೀಡಿ ಮತ್ತೊಮ್ಮೆ 200 ರೂ. ಬ್ಯಾಂಕ್ ಖಾತೆಗೆ ಹಾಕಿದ್ದಾರೆ. ಹೀಗೆ ನೀವು ಹೂಡಿಕೆ ಮಾಡಿದರೆ ಶೇ.30ರಷ್ಟು ಲಾಭ ನೀಡುತ್ತೇವೆ ಎಂದು ಆಸೆ ತೋರಿಸಿ ಅದರಂತೆ ಲಾಭಾಂಶದ ಹಣ ನೀಡಿದ್ದಾರೆ. ಇದನ್ನು ನಂಬಿದ ವಿದ್ಯಾರ್ಥಿ ತನ್ನ, ತಂಗಿ, ತಾಯಿ ಖಾತೆಯಿಂದ ಹಂತ ಹಂತವಾಗಿ 10,17, 580 ರೂ. ಹಣ ಹಾಕಿದ್ದಾನೆ. ನಂತರ ಅವರಿಂದ ಯಾವುದೇ ಪ್ರತಿಕ್ರಿಯೆ, ಲಾಭಾಂಶ ಬಾರದನ್ನು ಗಮನಿಸಿ, ತಾನು ವಂಚನೆಗೊಳಗಾಗಿರುವುದು ಅರಿತು ಸೆನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾನೆ.

ದಿನೇಶ್ ಗುಂಡೂರಾವ್‌ಗೆ ಡಿಸಿಎಂ ಸ್ಥಾನಕ್ಕೆ ಮನವಿ



ಮೈಸೂರು: ಮಾಜಿ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ಮುಖಂಡ ಹಾಗೂ ಬ್ರಾಹ್ಮಣ ಯುವ ವೇದಿಕೆಯ ವಿನಯ್ ಕಣಗಾಲ್ ಕಾಂಗ್ರೆಸ್ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.

ಆಹಾರ ಮತ್ತು ಆರೋಗ್ಯ ಇಲಾಖೆ ಖಾತೆಗಳ ಸಚಿವರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿರುವ ಅವರು ಯುವ ಕಾಂಗ್ರೆಸ್‌ನಿಂದ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೂಲಕ ಪಕ್ಷ ಸಂಘಟನೆಯಲ್ಲಿ ನಿರಂತರವಾಗಿ ಶ್ರಮಿಸಿದ್ದಾರೆ. ಬ್ರಾಹ್ಮಣ ಸಮುದಾಯದ ಬಲಿಷ್ಠ ನಾಯಕರಾಗಿರುವ ಅವರು ಸಾಮರಸ್ಯ ಮತ್ತು ಸಾಮಾಜಿಕ ನ್ಯಾಯದ ಮೂಲಕ ಕರ್ನಾಟಕದ ಜನಮಾನಸದಲ್ಲಿ ಉತ್ತಮ ನಾಯಕತ್ವದ ಗುಣಗಳನ್ನ ಸಂಪಾದಿಸಿದ್ದಾರೆ. ಹಾಗಾಗಿ ಸಚಿವ ಸಂಪುಟದಲ್ಲಿ ದಿನೇಶ್ ಗುಂಡೂರಾವ್‌ರಿಗೆ ಡಿಸಿಎಂ ಸ್ಥಾನ ಕಲ್ಪಿಸಬೇಕೆಂದು ಮನವಿ ಮಾಡಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು, ಮೇ 31– ಡಾ. ಹೆಚ್.ಬಿ.ರವಿಶಂಕರ್ ಅವರ ಮಾರ್ಗದರ್ಶನದಲ್ಲಿ ಎಂ.ರಾಘವೇಂದ್ರ ಅವರು ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಅರ್ಜಿ ಆಹ್ವಾನ

ಮೈಸೂರು: ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಗೆ 2 ವರ್ಷಗಳ ಅವಧಿಗೆ ಒಬ್ಬ ನಾಮ ನಿರ್ದೇಶಿತ ಸದಸ್ಯರನ್ನು ಆಯ್ಕೆ ಮಾಡಬೇಕಾಗಿದ್ದು, ವಿಶ್ವಕರ್ಮ ಜನಾಂಗದವರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಜೂ.15ರೊಳಗೆ ಜಾತಿ ಮತ್ತು ಪ್ರಮಾಣ ಪತ್ರ, ಆಧಾರ್ ಕಾರ್ಡ್ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಅನುಭವ ಪತ್ರ ದಾಖಲಾತಿಗಳನ್ನು ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 0821–2341194

'ಇಂಧನ–ಸುರಕ್ಷಿತ ಭವಿಷ್ಯಕ್ಕಾಗಿ ಹಸಿರು ರೈಲ್ವೆಗಳು' ಚಿತ್ರಕಲಾ ಸ್ಪರ್ಧೆ



ಮೈಸೂರಿನ ರೈಲ್ವೆ ಮ್ಯೂಸಿಯಂ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರೈಲ್ವೇ ಇಲಾಖೆ ವತಿಯಿಂದ ಮಕ್ಕಳಿಗೆ 'ಇಂಧನ–ಸುರಕ್ಷಿತ ಭವಿಷ್ಯಕ್ಕಾಗಿ ಹಸಿರು ರೈಲ್ವೆಗಳು' ವಿಷಯ ಕುರಿತು ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿತ್ತು.

ಮೈಸೂರು, ಮೇ 31(ಜಿಎ)–ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ರೈಲ್ವೇ ಇಲಾಖೆ ವತಿಯಿಂದ ಮಕ್ಕಳಿಗೆ 'ಇಂಧನ–ಸುರಕ್ಷಿತ ಭವಿಷ್ಯಕ್ಕಾಗಿ ಹಸಿರು ರೈಲ್ವೆಗಳು' ವಿಷಯ ಕುರಿತು ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿತ್ತು.

ನೈರುತ್ಯ ರೈಲ್ವೆ ಮೈಸೂರು ವಿಭಾಗದ ರೈಲ್ವೇ ಮ್ಯೂಸಿಯಂ ವತಿಯಿಂದ ಮಕ್ಕಳಲ್ಲಿ ಇಂಧನ ಸುರಕ್ಷತೆಯ ಪ್ರಸ್ತುತ ಅಗತ್ಯತೆ, ಇಂಧನಗಳ ಮೇಲಿನ ಅವಲಂಬನೆ ಕಡಿಮೆಯಾಗುವುದು ಮತ್ತು ವಿದ್ಯುದೀಕರಣ ಮತ್ತು ನವೀಕರಿಸಬಹುದಾದ ಇಂಧನದ ಮೂಲಕ ರೈಲ್ವೆಯ ಪ್ರಗತಿಯನ್ನು ಪ್ರತಿಬಿಂಬಿಸುವಾಗ ಸೃಜನಶೀಲತೆಯನ್ನು ಉತ್ತೇಜಿಸಲು ಚಿತ್ರಕಲಾ ಸ್ಪರ್ಧೆಯನ್ನು ರೈಲ್ವೇ ಮ್ಯೂಸಿಯಂನಲ್ಲಿ ನಡೆಸಿತು.

ಮೈಸೂರು ಜಿಲ್ಲೆ ಹಾಗೂ ಅಕ್ಕಪಕ್ಕದ ಜಿಲ್ಲೆಗಳು ಸೇರಿದಂತೆ 6ರಿಂದ 17 ವರ್ಷದ 150ಕ್ಕೂ ಹೆಚ್ಚು ಮಕ್ಕಳು ಪೋಷಕರೊಟ್ಟಿಗೆ ಬಂದು 'ಇಂಧನ–ಸುರಕ್ಷಿತ ಭವಿಷ್ಯಕ್ಕಾಗಿ ಹಸಿರು ರೈಲ್ವೆಗಳು' ಎಂಬುದನ್ನು ವರ್ಣರಂಜಿತ ಚಿತ್ರಗಳ ಮೂಲಕ ಬಿಡಿಸಿ, ರೈಲ್ವೇ ಮ್ಯೂಸಿಯಂ ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು.

ಮೂರು ವಿಭಾಗಗಳಲ್ಲಿ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಆಯೋಜಿಸಿ, 6ರಿಂದ 9 ವರ್ಷದ ಮಕ್ಕಳಿಗೆ ಡೀಸೆಲ್ ನಿಂದಲ್ಲ, ವಿದ್ಯುತ್‌ನಿಂದ ಓಡುವ ರೈಲು, ರೈಲ್ವೇ ನಿಲ್ದಾಣಗಳಲ್ಲಿ ಸೌರಶಕ್ತಿ, ಹಸಿರು ರೈಲ್ವೆಗಾಗಿ ಪವನ ಶಕ್ತಿ, ಸ್ವಚ್ಛ ಮತ್ತು ಮಾಲಿನ್ಯ ರಹಿತ ಪ್ರಯಾಣ, ತೈಲವನ್ನು ಉಳಿಸಿ, ಭೂಮಿಯನ್ನು ಉಳಿಸಿ ವಿಷಯ ನೀಡಲಾಗಿತ್ತು.

10ರಿಂದ 13 ವರ್ಷದ ಮಕ್ಕಳಿಗೆ ಭಾರತೀಯ ರೈಲ್ವೆಗಳು ಮತ್ತು ವಿದ್ಯುದೀಕರಣದತ್ತ ಪಯಣ, ಡೀಸೆಲ್‌ನಿಂದ ವಿದ್ಯುತ್‌ಗೆ, ಹಸಿರು ರೈಲ್ವೆ ನಿರ್ಮಾಣ, ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು, ನಾಳೆಯ ರೈಲ್ವೆಗಳಿಗೆ ಸೂರ್ಯ ಮತ್ತು ಪವನ ಶಕ್ತಿ, ಇಂಧನ ಬಿಕ್ಕಟ್ಟಿನಲ್ಲಿ ರೈಲ್ವೆಗಳು: ಶುದ್ಧ ಶಕ್ತಿಯನ್ನು ಆರಿಸಿಕೊಳ್ಳುವುದು ವಿಷಯ ನೀಡಲಾಗಿತ್ತು.

14ರಿಂದ 17 ವರ್ಷದ ಮಕ್ಕಳಿಗೆ ತೈಲ ಪೂರೈಕೆಯಲ್ಲಿ ಅಡಚಣೆಗಳು ಮತ್ತು ಇಂಧನ ಸ್ವಾವಲಂಬನೆಯ ಅಗತ್ಯ, ಸ್ವಚ್ಛ ಮತ್ತು ಬಲಿಷ್ಠ ಭಾರತಕ್ಕಾಗಿ ವಿದ್ಯುದ್ದೀಕೃತ ರೈಲುಗಳು, ಆಧುನಿಕ ರೈಲು ಸಾರಿಗೆಯ ಅಡಿಪಾಯವಾಗಿ ನವೀಕರಿಸಬಹುದಾದ ಶಕ್ತಿ, ನಾವೀನ್ಯತೆಯ ಮೂಲಕ ಪಳೆಯುಳಿಕೆ–ಇಂಧನ ಅವಲಂಬನೆಯನ್ನು ಕಡಿಮೆ ಮಾಡುತ್ತಿರುವ ಭಾರತೀಯ ರೈಲ್ವೆಗಳು, ಪರಿಸರ ಸಂರಕ್ಷಣೆ ಮತ್ತು ಇಂಧನ ಸುರಕ್ಷತೆಗಾಗಿ ಹಸಿರು ರೈಲ್ವೆಗಳು ಎಂಬ ವಿಷಯಗಳನ್ನು ನೀಡಲಾಗಿತ್ತು.

ಎಲ್ಲಾ ವಿಭಾಗದ ವಿದ್ಯಾರ್ಥಿಗಳು ತಮಗೆ ನೀಡಿರುವ ವಿಷಯಗಳನ್ನು ಆಧರಿಸಿ, ವರ್ಣರಂಜಿತ ಚಿತ್ರಗಳನ್ನು ಬಿಡಿಸಿ ಎಲ್ಲರ ಗಮನ ಸೆಳೆದರು. ಇಂದಿನ ಸ್ಪರ್ಧೆಯಲ್ಲಿ ಆಯ್ಕೆಯಾದ ಎಲ್ಲಾ ಚಿತ್ರಗಳನ್ನು ಆಯ್ಕೆ ಸಮಿತಿ ಮುಂದೆ ಇಡಲಾಗುತ್ತದೆ. ನಂತರ ತೀರ್ಪುಗಾರರು ಜೂ.5ರಂದು ಇಲಾಖೆ ವತಿಯಿಂದ ನಡೆಯುವ ಪರಿಸರ ದಿನಾಚರಣೆ ದಿನ ವಿಜೇತರನ್ನು ಘೋಷಿಸಲಿದ್ದಾರೆ.

ಮೈಸೂರು ಆಕಾಶವಾಣಿಯ ಅಧಿಕಾರಿಗಳಿಗೆ ಬೀಳ್ಕೊಡುಗೆ



ನಿವೃತ್ತ ಅಧಿಕಾರಿಗಳನ್ನು ಆತ್ಮೀಯವಾಗಿ ಅಭಿನಂದಿಸಿ, ಬೀಳ್ಕೊಡಲಾಯಿತು.

ಮೈಸೂರು, ಮೇ 31– ಮೈಸೂರು ಆಕಾಶವಾಣಿಯಲ್ಲಿ ಈ ತಿಂಗಳ ಕೊನೆಯಲ್ಲಿ ಮೂವರು ಅಧಿಕಾರಿಗಳು ನಿವೃತ್ತರಾಗುತ್ತಿದ್ದು, ಮೈಸೂರು ಆಕಾಶವಾಣಿ ಆವರಣದಲ್ಲಿ ಬೀಳ್ಕೊಡುಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು ಆಕಾಶವಾಣಿಯ ಕೇಳುಗರ ಬಳಗವಾದ ಸಮುದ್ಯತಾದ ಅಧ್ಯಕ್ಷ ಕಣ್ಣೂರು ವಿ.ಗೋವಿಂದಾಚಾರಿ ಸೇರಿದಂತೆ ಅನೇಕರು ಆತ್ಮೀಯವಾಗಿ ಮಾತನಾಡಿದರು.

ಇದೇ ವೇಳೆ ಬಳಗದ ಖಜಾಂಚಿ ಕಾಳಿಹುಂಡಿ ಶಿವಕುಮಾರ್, ಸದಸ್ಯರಾದ ನಂಜುಂಡಸ್ವಾಮಿ, ಬೂಕನಕೆರೆ ವಿಜಯೇಂದ್ರ, ಗುರು ಮಲ್ಲೇಗೌಡರು, ಶ್ರೀಕಂಠಮೂರ್ತಿ ಹಾಜರಾಗಿದ್ದರು.

ಮೈಸೂರು ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಕ ಅಧಿಕಾರಿ ಹಾಗೂ ಮುಂದಿನ ನಿಯೋಜಿತ ಕಾರ್ಯಕ್ರಮ ಮುಖ್ಯಸ್ಥರಾದ ಕೃಷಿ ರಂಗ ಖ್ಯಾತಿಯ ಕೇಶವಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಅಧಿಕಾರಿಗಳಾದ ಬೇದ್ರೆ ಮಂಜುನಾಥ್, ಕಾರ್ಯಕ್ರಮಗಳ ಮುಖ್ಯಸ್ಥ ಆನಂದನ್, ತಾಂತ್ರಿಕ ವಿಭಾಗದ ಮುಖ್ಯಸ್ಥ ಶಿವಲಿಂಗೇಗೌಡರನ್ನು ಅಭಿನಂದಿಸಿ, ಸನ್ಮಾನಿಸಲಾಯಿತು.

ಮೈಸೂರು ಆಕಾಶವಾಣಿಯ ಹಿರಿಯ ಉದ್ಘೋಷಕರಾದ ಮೈಸೂರು ಉಮೇಶ್, ಕಾರ್ಯಕ್ರಮ ನಿರ್ವಾಹಕ ಬಿ ದಿಗ್ವಿಜಯ್, ಅಲ್ಲದೆ ಎಚ್.ಎಲ್.ಶಿವಶಂಕರಸ್ವಾಮಿ, ಜಿ ಎನ್ ಮಂಜುನಾಥ್, ಚಿನ್ಮಯ್, ಕೀರ್ತಿ ಬೈಂದೂರು, ತೇಜಸ್ವಿನಿ ಗಿರೀಶ್, ಸರಸ್ವತಿ, ಸಹನ ಮುಂತಾದವರು ಹಾಜರಿದ್ದರು. ಅಲ್ಲದೆ ಆಕಾಶವಾಣಿ ನಿಲಯದ ನಿವೃತ್ತ ಉಪನಿರ್ದೇಶಕರಾಗಿದ್ದ ಎಸ್‌ಎಸ್‌ಉಮೇಶ್, ನಿವೃತ್ತ ಸಹಾಯಕ ನಿರ್ದೇಶಕರಾಗಿದ್ದ ಟಿ ವಿ ವಿದ್ಯಾಶಂಕರ್, ಆಕಾಶವಾಣಿಯ ಇನ್ನಿತರ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ನಿವೃತ್ತ ಅಧಿಕಾರಿಗಳ ಕುಟುಂಬ ವರ್ಗದವರು ಹಾಜರಿದ್ದರು.

ಶಿಕ್ಷಣದ ಮೂಲಕ ಮಕ್ಕಳಲ್ಲಿ ಸದ್ಗುಣ ಸಂಪನ್ನತೆ ಬೆಳೆಸಿ

ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜಿ ಅಭಿಮತ

ಮೈಸೂರು,ಮೇ 31(ಪಿಎಂ)– ಶಿಕ್ಷಣದ ಮೂಲಕ ಮಕ್ಕಳಲ್ಲಿ ಸದ್ಗುಣ ಸಂಪನ್ನತೆ ಬೆಳೆಸಬೇಕು. ಜೊತೆಗೆ ತ್ಯಾಗ ಮತ್ತು ಸಮಾಜ ಸೇವೆಯನ್ನು ಮಕ್ಕಳಿಗೆ ಶಿಕ್ಷಣದಲ್ಲಿ ಹೇಳಿಕೊಡಬೇಕು ಎಂದು ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜಿ ಹೇಳಿದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ವಿವೇಕ ಸ್ಮಾರಕದ ಸಭಾಂಗಣದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (ಎಸ್‌ವಿವೈಎಂ) ಹಾಗೂ ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೋಕ್ಯಾಸಿ ಮೂವ್‌ಮೆಂಟ್ (ಗ್ರಾಮ್) ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಷ್ಟ್ರ ನಿರ್ಮಾಣದಲ್ಲಿ ತಳ ಮಟ್ಟದ ನಾಯಕತ್ವ ಕಾರ್ಯಕ್ರಮ ಹಾಗೂ 'ಮೈಸೂರು–2020' ; ಸಾಂಸ್ಕೃತಿಕ ಮತ್ತು ಸುಸ್ಥಿರ ಅಭಿವೃದ್ಧಿ ಕುರಿತ ಪ್ಯಾನಲ್ ಚರ್ಚೆ ಹಾಗೂ ನೀತಿ ಆಯೋಗದ ಪೂರ್ಣಾವಧಿ ಸದಸ್ಯರಾಗಿ ನೇಮಕಗೊಂಡ ಡಾ.ಆರ್.ಬಾಲಸುಬ್ರಹ್ಮಣ್ಯ ಅವರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮೈಸೂರು ಶಿಕ್ಷಣ ಕ್ಷೇತ್ರದಲ್ಲಿ ಮಕ್ಕಳಿಗೆ ಉನ್ನತ ಶಿಕ್ಷಣ ಯಾವ ಮಾದರಿಯಲ್ಲಿ ಇರಬೇಕು ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಶಿಕ್ಷಣವೇ ಎಲ್ಲದಕ್ಕೂ ಮೂಲ. ಶಿಕ್ಷಣದ ಮೂಲಕ ಸಮಾಜ ಸೇವೆಯ ಮಹತ್ವದ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಬೇಕು. ಅದನ್ನೇ ಸ್ವಾಮಿ ವಿವೇಕಾನಂದರು ಒತ್ತಿ ಹೇಳಿದ್ದಾರೆ. ವ್ಯಕ್ತಿತ್ವ ನಿರ್ಮಾಣದ ಶಿಕ್ಷಣ ಎಂದಾಗ, ಸದ್ಗುಣ ಸಂಪನ್ನತೆ ಯನ್ನು ನಾವು ಪ್ರಧಾನವಾಗಿರುವ ಶಿಕ್ಷಣದಲ್ಲಿ ಕೊಡದಿದ್ದರೆ ಪ್ರಯೋಜನವಿಲ್ಲ ಎಂದರು.

ಮೈಸೂರಿನ ಎಲ್ಲಾ ಶಿಕ್ಷಣ ಸಂಸ್ಥೆಗಳು ತಮ್ಮಿಂದ ಸಾಧ್ಯವಾದಷ್ಟು ಒಳ್ಳೆಯ ಶಿಕ್ಷಣ ನೀಡುತ್ತಿವೆ. ಆದರೆ ಪ್ರತಿಯೊಂದು ಸಂಸ್ಥೆಗಳು ತ್ಯಾಗ ಮತ್ತು ಸಮಾಜ ಸೇವೆಯನ್ನು ಮಕ್ಕಳಿಗೆ ಹೇಳಿಕೊಡಲು ಒತ್ತು ನೀಡಬೇಕು. ಮಕ್ಕಳಲ್ಲಿ ಸಾಮಾಜಿಕ ಕಳಕಳಿ ಬೆಳೆಸಬೇಕು. ತಾವೇ ಸ್ವಯಂಪ್ರೇರಿತವಾಗಿ ಸಮಾಜಕ್ಕಾಗಿ ಒಂದು ಗಂಟೆಯಾದರೂ ಸೇವೆ ಮಾಡುವ ಮನೋಭಾವ ಮಕ್ಕಳಲ್ಲಿ ಬೆಳೆಸಬೇಕು. ಸಮಾಜಕ್ಕಾಗಿ ಜೀವನವನ್ನು ಸಂಸಾರದಲ್ಲಿ ಇದ್ದೂ ಕೂಡ ಸಮರ್ಪಿಸಬೇಕೆಂದು ವಿವೇಕಾನಂದರು ಹೇಳಿದ್ದು, ಆ ನಿಟ್ಟಿನಲ್ಲಿ ಡಾ.ಆರ್.ಬಾಲಸುಬ್ರಮಣ್ಯಂ ಮುಂದುವರೆಯುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಬೆಂಗಳೂರು ಉತ್ತರ ವಿವಿ ನಿಕಟ ಪೂರ್ವ ಕುಲಪತಿ ಡಾ.ನಿರಂಜನ ವಾನಳ್ಳಿ ಮಾತನಾಡಿ, ಕಳೆದ ಐದು ವರ್ಷಗಳಲ್ಲಿ ಮೈಸೂರು ನಗರ ಸಾಕಷ್ಟು ಬದಲಾಗಿದೆ. ನಗರದ ಹೊರವಲಯದಲ್ಲೂ ಒಂದು ರಸ್ತೆ ದಾಟಲು ಐದಾರು ನಿಮಿಷ ಕಾದು ನಿಲ್ಲುವಷ್ಟು ವಾಹನ ದಟ್ಟಣೆ ಹೆಚ್ಚಾಗಿದೆ. ಆಗ ಸ್ವಚ್ಛತೆಯಿಂದ ಕೂಡಿದ್ದ ನಗರದಲ್ಲಿ ಈಗ ಎಲ್ಲೆಲ್ಲೂ ತ್ಯಾಜ್ಯ ರಾಶಿ ಕಾಣುವಂತಾಗಿದೆ. ಈ ನಗರದ ಉದ್ಧಾರದ ಜವಾಬ್ದಾರಿಯನ್ನು ಕೇವಲ ಸರ್ಕಾರದ ಸುಪರ್ದಿಗೆ ಬಿಟ್ಟು ಕುಳಿತರೆ ಕಷ್ಟವಾಗಲಿದೆ. ಹಾಗಾಗಿ ಇಲ್ಲಿನ ಜನತೆಯೂ ಸಾಂಸ್ಕೃತಿಕ ನಗರಿಯನ್ನು ಅದೇ ಸುವ್ಯವಸ್ಥಿತ ನಗರವಾಗಿ ಉಳಿಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಎಸ್‌ವಿವೈಎಂ ಹಾಗೂ ಗ್ರಾಮ್ ಸಂಸ್ಥಾಪಕರು ಆದ ನೀತಿ ಆಯೋಗದ ಪೂರ್ಣಾವಧಿ ಸದಸ್ಯರಾಗಿ ನೇಮಕಗೊಂಡ ಡಾ.ಆರ್.ಬಾಲಸುಬ್ರಹ್ಮಣ್ಯರನ್ನು ಅವರ ಪತ್ನಿ ಡಾ.ಬಿಂಧು ಅವರೊಂದಿಗೆ ಸನ್ಮಾನಿಸಲಾಯಿತು. ಉದ್ಯಮಿ ಆರ್.ಗುರು, ಹೆಚ್‌ಡಿ ಕೋಟೆ ಗಿರಿಜನ ಸಮುದಾಯದ ಮುಖಂಡ ಮುದಲಿ ಮಾದಯ್ಯ, ಗ್ರಾಮ್ ಟ್ರಸ್ಟಿ ಜೆ.ಪುರುಷೋತ್ತಮ್ ಮತ್ತಿತರರು ವೇದಿಕೆಯಲ್ಲಿದ್ದರು. ಎಂಜಿಪಿ ಸಂಸ್ಥಾಪಕ ಭಾಮೀ ಶೆಣೈ, ಸಂಚಾಲಕ ದಯಾನಂದ ಸಾಗರ್ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ಸಭಿರಾಕ ಹಾಜರಿದ್ದರು.



ಮೈಸೂರಿನ ವಿವೇಕ ಸ್ಮಾರಕದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ವಿವೇಕ ಸ್ಮಾರಕದಲ್ಲಿ ಸದ್ಗುಣ ಶಿಕ್ಷಣ

"ಮಕ್ಕಳಲ್ಲಿ ಸದ್ಗುಣ ಸಂಪನ್ನತೆ ಬೆಳೆಸುವ ಶಿಕ್ಷಣ ನೀಡಲು ನಾವು ಮುಂದಾಗಬೇಕು. ಅದೇ ನಿಟ್ಟಿನಲ್ಲಿ ವಿವೇಕ ಸ್ಮಾರಕದಲ್ಲಿ ಪ್ರಯತ್ನ ನಡೆಯಲಿದೆ. ಇಲ್ಲಿ ಯಾವುದೇ ಶೈಕ್ಷಣಿಕ ವಿಷಯ ಹೇಳಿಕೊಡುವುದಿಲ್ಲ. ಇಲ್ಲಿ ನಾವು ಶ್ರೇಷ್ಠತೆಯ ನಡವಳಿಕೆ ಹಾಗೂ ಸಾಮರ್ಥ್ಯ ಅಭಿವೃದ್ಧಿ ಎಂಬ ಶೀರ್ಷಿಕೆಯಡಿ ಕೋರ್ಸ್‌ಗಳನ್ನು ಪರಿಚಯಿಸುವ ಉದ್ದೇಶ ಹೊಂದಲಾಗಿದೆ. ಜೊತೆಗೆ ಭಾರತೀಯ ಜ್ಞಾನದ ಬಗ್ಗೆಯೂ ಹೇಳಿಕೊಡುವ ನಿಟ್ಟಿನಲ್ಲಿ ಪ್ರಯತ್ನ ನಡೆಯುತ್ತಿದೆ. ಗ್ರಾಮಸ್ಥ, ಆಧ್ಯಾತ್ಮ ಹಾಗೂ ಸಮಾಜ ಸೇವೆಯೇ ಸ್ವಾಮಿ ವಿವೇಕಾನಂದರ 'ಋಷಿ ಆದರ್ಶ'.

–ಸ್ವಾಮಿ ಮುಕ್ತಿದಾನಂದಜಿ

ಸಾಲಿಗ್ರಾಮದ ಉಪ ತಹಶೀಲ್ದಾರ್ ಹಾಸನದಲ್ಲಿ ಆತ್ಮಹತ್ಯೆ



ಮಡಿಕೇರಿ,ಮೇ 31– ಮೂಲತಃ ಗೋಣಿಕೊಪ್ಪ ಸಮೀಪದ ತೂಚಮಕೇರಿ ನಿವಾಸಿ ಮೈಸೂರು ಸಾಲಿಗ್ರಾಮದಲ್ಲಿ ಉಪ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಕರ್ತಮಾಡ ತಿಮ್ಮಯ್ಯ(52) ಎಂಬವರು ಹಾಸನ ನಗರದ ಬಿ.ಎಂ ರಸ್ತೆಯಲ್ಲಿರುವ ಲಾಡ್ಜ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.

ಶನಿವಾರ ರಾತ್ರಿ ನೇಣಿಗೆ ಶರಣಾಗುವ ಮುನ್ನ 4 ಪುಟಗಳ ಡೆತ್‌ನೋಟ್ ಬರೆದಿಟ್ಟಿದ್ದು, ಪೊಲೀಸರು ಅದನ್ನು ವಶಕ್ಕೆ ಪಡೆದಿದ್ದಾರೆ ಎನ್ನಲಾಗಿದೆ. ತಿಮ್ಮಯ್ಯನವರು ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ ತಿಳಿದ ಹಾಸನದ ಸಹೋದ್ಯೋಗಿಗಳು, ನಿವಾಸಿಗಳು ಆಘಾತ ವ್ಯಕ್ತಪಡಿಸಿದ್ದಾರೆ. ಕಚೇರಿಯಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದ ತಿಮ್ಮಯ್ಯನವರು ಒಳ್ಳೆಯ ಹೆಸರನ್ನು ಗಳಿಸಿದ್ದರು ಎಂದು ಸ್ಮರಿಸಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯ ಬಗ್ಗೆ ತನಿಖೆ ನಡೆಸುತ್ತಿರುವ ಪೊಲೀಸರು ಮೃತರ ಮನೆಯವರು, ಸಹೋದ್ಯೋಗಿಗಳಿಂದ ಹೇಳಿಕೆ ಪಡೆದುಕೊಂಡಿದ್ದಾರೆ.

ಮೈಸೂರು ಜಿಲ್ಲೆ ಸಾಲಿಗ್ರಾಮದಲ್ಲಿ ಉಪ ತಹಶೀಲ್ದಾರ್ ಆಗಿ ಕರ್ತವ್ಯದಲ್ಲಿದ್ದ ತಿಮ್ಮಯ್ಯ, 3 ವರ್ಷಗಳ ಹಿಂದೆ ಹಾಸನದಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಹಾಸನ ನಗರದ ಚನ್ನಪಟ್ಟಣದ ದ್ಯಾವಮ್ಮ ಬಡಾವಣೆಯಲ್ಲಿ ಕುಟುಂಬಸ್ಥರೊಂದಿಗೆ ವಾಸವಾಗಿದ್ದರು. ಲಾಡ್ಜ್‌ನ ಸಿಬ್ಬಂದಿಗಳು ನೀಡಿದ ದೂರಿನ ಮೇರೆಗೆ ಸ್ಥಳಕ್ಕಾಗಮಿಸಿದ ಪೊಲೀಸರು ಸ್ಥಳ ಮಹಜರು ನಡೆಸಿದರು. ಬಳಿಕ ಮೃತದೇಹವನ್ನು ಸ್ಥಳೀಯ ಸರಕಾರಿ ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ ಎಂದು ತಿಳಿದು ಬಂದಿದೆ. ಪೊಲೀಸ್ ತನಿಖೆ ಬಳಿಕ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬರಲಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಶಮಂತ್‌ಗೆ ಶೇ.96.8 ಅಂಕ




ನಾಪೋಕ್ಲು: ಸಮೀಪದ ಬೇತು ಗ್ರಾಮದ ಎಕ್ಸಲ್ ಸ್ಕೂಲ್ ಆಫ್ ಎಜುಕೇಶನ್ ವಿದ್ಯಾರ್ಥಿ ಟಿ.ಆರ್.ಶಮಂತ್ ಎಸ್‌ಎಸ್‌ಎಲ್‌ಸಿ ಪರೀಕ್ಷೆ 2 ರಲ್ಲಿ 605 ಅಂಕ ಗಳಿಸಿ ಉತ್ತಮ ಸಾಧನೆ ಮಾಡಿದ್ದಾನೆ. ಈತ ನಾಪೋಕ್ಲು ಕಲ್ಲು ಮೊಟ್ಟೆ ನಿವಾಸಿ ರಮೇಶ್ ಮತ್ತು ಚಂದ್ರಕಲಾ ದಂಪತಿ ಪುತ್ರ.

ಶಾಸಕ ಎ.ಎಸ್.ಪೊನ್ನಣ್ಣಗೆ ಮಂತ್ರಿ ಸ್ಥಾನ ನೀಡಲು ವಿವಿಧ ಸಂಘಟನೆಗಳ ಒತ್ತಾಯ

ಮಡಿಕೇರಿ, ಮೇ 31–ರಾಜ್ಯದ ನೂತನ ಮಂತ್ರಿಮಂಡಲದಲ್ಲಿ ಶಾಸಕ ಎ.ಎಸ್. ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಆಗ್ರಹಿಸಿದ್ದಾರೆ.

ಜಾತ್ಯಾತೀತ ಹಾಗೂ ಪಕ್ಷಾತೀತ ನಾಯಕರಾಗಿರುವ ಪೊನ್ನಣ್ಣ ಕೇವಲ ಕೊಡಗು ಮಾತ್ರವಲ್ಲ ಇಡೀ ಕರ್ನಾಟಕದ ಆಸ್ತಿಯಾಗಿದ್ದು, ಇವರಿಗೆ ಸಚಿವ ಸ್ಥಾನ ನೀಡುವುದರಿಂದ ರಾಜ್ಯದ ಭವಿಷ್ಯ ಉತ್ತಮವಾಗಲಿದೆ ವಿರಾಜಪೇಟೆ ಶಾಸಕರಾಗಿ ಯಾವುದೇ ಭೇಧಭಾವವಿಲ್ಲದೆ ಸರ್ವರೂ ಸಮಾನರು ಎಂಬ ಭಾವನೆಯಲ್ಲಿ ಪಕ್ಷಾತೀತವಾಗಿ ಕ್ಷೇತ್ರದ ಅಭಿವೃದ್ಧಿಗಾಗಿ ಹಾಗೂ ಜನಹಿತಕ್ಕಾಗಿ ಶ್ರಮಿಸಿದ್ದಾರೆ. ಮಂತ್ರಿಮಂಡಲದ ಪ್ರತಿಯೊಬ್ಬರೊಂದಿಗೆ ಆತ್ಮೀಯರಾಗಿರುವ ಅವರು ತಮ್ಮ ದಕ್ಷ ಕಾರ್ಯವೈಖರಿಯಿಂದಲೇ ಹೈಕಮಾಂಡ್‌ನ ಮೆಚ್ಚುಗೆ ಪಡೆದಿದ್ದಾರೆ. ಇವರಿಂದ ಕೊಡಗಿನಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಎಂ.ಸಿ. ನಾಣಯ್ಯ, ಎಂ.ಎಂ.ನಾಣಯ್ಯ ಹಾಗೂ ಎಂ.ಪಿ.ಅಪ್ಪಚ್ಚು ರಂಜನ್ ನಂತರ ಯಾವ ಕೊಡವರಿಗೂ ಸಚಿವ ಸ್ಥಾನ ಲಭಿಸಿಲ್ಲ. ಆದ್ದರಿಂದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೊಡವ ಜನಾಂಗಕ್ಕೆ ಸಚಿವ ಸ್ಥಾನ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.



ನಾಪೋಕ್ಲು: ವಿರಾಜಪೇಟೆಯ ಶಾಸಕರೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆಗಿರುವ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣನವರಿಗೆ ಮಂತ್ರಿ ಸ್ಥಾನ ನೀಡುವಂತೆ ನಾಪೋಕ್ಲು ಕೊಡವ ಸಮಾಜ ಅಧ್ಯಕ್ಷರು ಮುಂಡಂಡ ಸಿ.ನಾಣಯ್ಯ ಒತ್ತಾಯಿಸಿದ್ದಾರೆ.

ಜಿಲ್ಲೆಯಿಂದ ಇಪ್ಪತ್ತೈದು ವರುಷಗಳಲ್ಲಿ ಪ್ರತಿನಿಧಿಸಿದ ಶಾಸಕರಿಗೆ ದೀರ್ಘಾವಧಿಯ ಮಂತ್ರಿಗಿರಿಯನ್ನು ನೀಡದೆ ಜಿಲ್ಲೆ ಅಭಿವೃದ್ಧಿ ವಂಚಿತವಾಗಿದೆ. ಸರಕಾರದಲ್ಲಿ ಕ್ಯಾಬಿನೆಟ್ ಶ್ರೇಣಿಯ ಮಂತ್ರಿ ಪದವಿಯನ್ನು ಪಡೆದು ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಪ್ರಯತ್ನಿಸಬಹುದು ಎಂದು ನಿರೀಕ್ಷಿಸಿದ್ದ ನಾಡಿನ ಜನತೆಗೆ ಭ್ರಮನಿರಸನವಾಯಿತು. ತದನಂತರ ರಾಜ್ಯದ ಕೊಡವ ಸಮಾಜಗಳಾದಿಯಾಗಿ ಹಲವು ಸಂಘ ಸಂಸ್ಥೆಗಳು ಪೊನ್ನಣ್ಣನವರನ್ನು ಮಂತ್ರಿಮಂಡಲಕ್ಕೆ ಸೇರಿಸಬೇಕು ಎಂದು ಹಲವು ಬಾರಿ ಒತ್ತಾಯಿಸಲಾಗಿತ್ತಾದರೂ ಯಾವುದೇ ಫಲ ದೊರೆಯಲಿಲ್ಲ. ಇದರಿಂದ ಜಿಲ್ಲೆಯ ಜನತೆ ನಿರೀಕ್ಷಿಸಿದ ಅಭಿವೃದ್ಧಿ ಕಾರ್ಯಗಳು ನಡೆಯದೆ ಜಿಲ್ಲೆ ಬಡವಾಗುತ್ತಿದೆ. ಈ ನಿಟ್ಟಿನಲ್ಲಿ, ಕೊಡಗು ಜಿಲ್ಲೆಯನ್ನು ಸರ್ವ ರೀತಿಯಿಂದಲೂ ಅಭಿವೃದ್ಧಿ ಪಡಿಸಲು ಮಂತ್ರಿಮಂಡಲದಲ್ಲಿ ಉತ್ತಮ ಸ್ಥಾನವನ್ನು ಒದಗಿಸುವುದರೊಂದಿಗೆ, ಜಿಲ್ಲೆಯ ಉಸ್ತುವಾರಿ ಸಚಿವರನ್ನಾಗಿ ನೇಮಿಸಬೇಕೆಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ವಿರಾಜಪೇಟೆ : ಶಾಸಕ ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ನೀಡುವಂತೆ ಕೊಡವ ಸಂಘಗಳ ಒಕ್ಕೂಟದ ಅಧ್ಯಕ್ಷ ಮಾದಂಡ ಎಸ್.ಪೂವಯ್ಯ ಆಗ್ರಹಿಸಿದ್ದಾರೆ. ಕೊಡಗಿಗೆ ಪ್ರಾತಿನಿಧ್ಯ ನೀಡುವ ನಿಟ್ಟಿನಲ್ಲಿ ಮುಖ್ಯಮಂತ್ರಿಯಾಗಿರುವ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಪ್ರಮುಖ ಖಾತೆಯೊಂದಿಗೆ ಶಾಸಕ ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ನೀಡುವಂತಾಗಬೇಕು. ಸಿದ್ದರಾಮಯ್ಯ ಮುಖ್ಯ ಮಂತ್ರಿಯಾಗಿದ್ದ ವೇಳೆ ಪೊನ್ನಣ್ಣ ಅವರು ಕಾನೂನು ಸಲಹೆಗಾರರಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಅಲ್ಲದೆ ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದ ಅಭಿವೃದ್ಧಿಗೆ ಮತ್ತು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡುತ್ತಿರುವಲ್ಲಿ ಶಾಸಕ ಪೊನ್ನಣ್ಣ ಯಶಸ್ವಿ ಆಗಿದ್ದು, ಅವರಿಗೆ ಸಚಿವ ಸ್ಥಾನ ನೀಡುವಂತೆ ಎಂ.ಎಸ್. ಪೂವಯ್ಯ ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ನಾಯಿಯನ್ನು ಬೆನ್ನಟ್ಟಿ ಮನೆಯ ಅಂಗಳ ಪ್ರವೇಶಿಸಿದ ಕಾಡಾನೆ



ಮಡಿಕೇರಿ: ನಾಯಿಯನ್ನು ಬೆನ್ನಟ್ಟಿದ್ದ ಕಾಡಾನೆಯೊಂದು ಮನೆಯ ಗೇಟ್ ತೆರೆದು ಅಂಗಳಕ್ಕೆ ಪ್ರವೇಶಿಸಿದ ಘಟನೆ ಗೋಣಿಕೊಪ್ಪಲು ಪೊನ್ನಂಪೇಟೆ ರಸ್ತೆಯ ಅರುವತೋಕ್ಲು ಗ್ರಾಮದಲ್ಲಿ ನಡೆದಿದೆ. ಇಲ್ಲಿನ ಕಾಫಿ ಬೋರ್ಡ್ ಸಮೀಪವಿರುವ ಕಬ್ಬಚೀರ ಬಿದ್ದು ಉತ್ತಪ್ಪ ಎಂಬವರ ಮನೆಯ ಅಂಗಳಕ್ಕೆ ಗೇಟ್ ತೆರೆದು ಕಾಡಾನೆ ನುಗ್ಗಿದ್ದು, ಈ ದೃಶ್ಯಗಳು ಕಟ್ಟಡದಲ್ಲಿ ಅಳವಡಿಸಿದ್ದ ಸಿ.ಸಿ. ಕ್ಯಾಮರಾದಲ್ಲಿ ಸೆರೆಯಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕಾಡಾನೆಯನ್ನು ಕಂಡ ನಾಯಿಯೊಂದು ಬೊಗಳುತ್ತಾ ಹೊದಾಗ ನಾಯಿಯನ್ನು ಕಾಡಾನೆ ಬೆನ್ನಟ್ಟಿದೆ. ಈ ವೇಳೆ ನಾಯಿ ಕಾಂಪೌಂಡ್ ಹಾರಿ ಮನೆಯ ಅಂಗಳ ಪ್ರವೇಶಿಸಿದ್ದು, ಕಾಡಾನೆ ಕೂಡ ಗೇಟ್ ಅನ್ನು ನೂಕಿ ಒಳ ನುಗ್ಗಿ ಅಂಗಳಕ್ಕೆ ಆಗಮಿಸಿದೆ. ನಾಯಿ ಓಡಿ ಹೋದ ಬಳಿಕ ಕಾಡಾನೆ ಮತ್ತದೇ ಮಾರ್ಗವಾಗಿ ವಾಪಸ್ ತೆರಳಿದೆ. ರೋಷದಲ್ಲಿದ್ದ ಕಾಡಾನೆ ಮನೆಯ ಅಂಗಳದಲ್ಲಿದ್ದ ಹೂ ಕುಂಡಗಳು ಸೇರಿದಂತೆ ಯಾವುದೇ ವಸ್ತುವನ್ನು ಹಾನಿ ಮಾಡದಿರುವುದು ಕಂಡು ಬಂದಿದೆ.

ಈ ಭಾಗದಲ್ಲಿ ಪ್ರತಿ ವರ್ಷ ಕಾಡಾನೆ ಮಧ್ಯರಾತ್ರಿ ವೇಳೆ ಕಾಣಿಸಿಕೊಳ್ಳುತ್ತಿತ್ತು. ಕಾಫಿ ಬೋರ್ಡ್ ಸಮೀಪ ಇರುವ ತರಕಾರಿ ಅಂಗಡಿಗೆ ತೆರಳಿ ಹಣ್ಣು ಹಂಪಲುಗಳನ್ನು ತಿಂದು ಹೋಗುತ್ತಿದ್ದುದು ಸಾಮಾನ್ಯವಾಗಿತ್ತು. ಆದರೆ ಈ ಬಾರಿ ಬೇರೆ ಕಾಡಾನೆ ಕಾಣಿಸಿಕೊಂಡಿದ್ದು, ಈ ಭಾಗದಲ್ಲಿರುವ ಕಾಫಿ ತೋಟಗಳಲ್ಲಿ ಕಾಡಾನೆ ಬೀಡು ಬಿಟ್ಟಿರಬಹುದು ಎಂದು ಶಂಕಿಸಲಾಗಿದೆ.

ವಿಜೃಂಭಣೆಯಿಂದ ಜರುಗಿದ ಬಸವ ಜಯಂತಿ ಆಚರಣೆ

ಕುಶಾಲನಗರ: ಅಖಿಲ ಭಾರತ ವೀರ ಶೈವ ಲಿಂಗಾಯತ ಮಹಾಸಭಾ, ಕುಶಾಲನಗರ ತಾಲೂಕು ಘಟಕದ ಆಶ್ರಯದಲ್ಲಿ ಇಲ್ಲಿನ ಗಾಯಿತ್ರಿ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಶನಿವಾರ ಸಂಜೆ ಏರ್ಪಡಿಸಿದ್ದ 6ನೇ ವರ್ಷದ ಬಸವ ಜಯಂತಿ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.



ಬಸವ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಹಿಳಾ ಭಕ್ತ ಸಮೂಹ

ವಿರಾಜಪೇಟೆ ಅರಮೇರಿ ಕಳಂಚೇರಿ ಮಠಾಧೀಶ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಜಗಜ್ಯೋತಿ ಬಸವೇಶ್ವರರ ಜೀವನ ಸಂದೇಶಗಳನ್ನು ಹಾಗೂ ಬದುಕಿನ ಮೌಲ್ಯಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಜಯಂತಿಗಳನ್ನು ಆಚರಿಸುವಾಗ ನಾವು ಬಸವಣ್ಣ ಅವರನ್ನು ಸ್ಮರಣೆಮಾಡುತ್ತೇವೆ, ಅವರ ಆಲೋಚನೆಗಳನ್ನು ಹಾಗೂ ಅವರು ಕೊಟ್ಟ ಜೀವನ ಸಂದೇಶಗಳನ್ನು ಹೇಳುತ್ತೇವೆ. ಆದರೆ ನಾವು ಎಷ್ಟು ಅವುಗಳನ್ನು ಅನುಸಂಧಾನ ಮಾಡಿಕೊಂಡಿದ್ದೇವೆ ಎಂಬುದನ್ನು ಯೋಚಿಸಿದರೆ ನಿಜವಾಗಲು ನಾವು ಬಸವಣ್ಣ ಅವರನ್ನು ಕಳೆದುಕೊಂಡಿದ್ದೇವೆ ಎಂಬ ಭಾವನೆ ಭಾಸವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ಆಶಯ ನುಡಿಗಳನ್ನಾಡಿ, 12ನೇ ಶತಮಾನದ ಬಸವಣ್ಣ ಹಾಗೂ ಇಂದು 21ನೇ ಶತಮಾನ ಸುಮಾರು ಸಾವಿರ ವರ್ಷಗಳ ಅಂತರದಲ್ಲಿ ನಾವು ಇದ್ದೇವೆ. ಪ್ರತಿಯೊಬ್ಬರಿಗೂ ಬಸವಾದಿ ಶರಣರ ತತ್ವ ಆದರ್ಶಗಳು ದಾರಿ ದೀಪವಾಗಿವೆ. ಅವರ ಬದುಕು ಯಾವಾಗಲು ನಡೆ,ನುಡಿ ಒಂದಾಗಿತ್ತು. ಅವರ ಬದುಕು ಸಾರ್ವಕಾಲಿಕ, ಸಮಾಜಮುಖಿ ಆಗಿತ್ತು ಎಂದರು.

ತೊರೆನೂರು ವಿರಕ್ತ ಮಠದ ಶ್ರೀ ಮಲ್ಲೇಶ ಸ್ವಾಮೀಜಿ, ಮೈಸೂರು ಬಸವಜ್ಞಾನ ಮಂದಿರದ ಪೀಠಾಧ್ಯಕ್ಷೆ ಡಾ. ಮಾತೆ ಬಸವಾಂಜಲಿದೇವಿ ಮಾತನಾಡಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕುಶಾಲನಗರ ಘಟಕದ ಹೆಚ್.ಎಂ.ಮಧುಸೂದನ್. ಅಧ್ಯಕ್ಷತೆ ವಹಿಸಿದ್ದರು. ಕೊಡ್ಲಿಪೇಟೆ ಕಲ್ಲಳ್ಳಿ ಮಠದ ರುದ್ರಮುನಿ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಹೆಚ್. ವಿ. ಶಿವಪ್ಪ, ಕುಶಾಲನಗರ ಸಂಘಟನಾ ಕಾರ್ಯದರ್ಶಿ ಎಸ್. ಧರ್ಮೇಂದ್ರ, ಬಿ. ಬಿ. ಲೋಕೇಶ್, ಬಸವೇಶ್ವರ ಸೌಹಾರ್ದ ಸಹಕಾರ ಸಂಘ ಅಧ್ಯಕ್ಷ ಬಿ.ಎಸ್.ಶಾಂಭ ಶಿವಮೂರ್ತಿ, ರಾಜ್ಯ ವೀರಶೈವ ನೌಕರರ ಸಂಘದ ಜಿಲ್ಲಾಧ್ಯಕ್ಷ ಎಸ್. ನಂದೀಶ್, ಮಹಿಳಾ ಅಧ್ಯಕ್ಷೆ ದೀಪಿಕಕರುಣ್, ಯುವ ಘಟಕದ ಅಧ್ಯಕ್ಷ ಮೋಕ್ಷತ್‌ರಾಜ್, ಅಕ್ಕನ ಬಳಗ ಕಮಲ ಉದಯಕುಮಾರ್, ಹೇಮಲತಾ, ಎಸ್.ಕೆ.ಸೌಭಾಗ್ಯ ಪಾಲ್ಗೊಂಡಿದ್ದರು.

ವರ್ಣರಂಜಿತ ಮೆರವಣಿಗೆ : ಬಸವ ಜಯಂತಿ ಅಂಗವಾಗಿ ಪಟ್ಟಣದ ಬೈಚನಹಳ್ಳಿ ಮಾರಮ್ಮ ದೇವಸ್ಥಾನ ಬಳಿಯಿಂದ ಆರಂಭಗೊಂಡ ವರ್ಣರಂಜಿತ ಮೆರವಣಿಗೆಗೆ ತೊರೆನೂರ ವಿರಕ್ತ ಮಠದ ಮಲ್ಲೇಶ ಸ್ವಾಮೀಜಿ ಚಾಲನೆ ನೀಡಿದರು. ಅಲಂಕೃತ ವಾಹನದಲ್ಲಿ ಶ್ರೀ ಬಸವೇಶ್ವರ ಭಾವಚಿತ್ರವನ್ನು ಇಟ್ಟು ವಾದ್ಯಗೋಷ್ಠಿ ಹಾಗೂ ಪೂರ್ಣಕುಂಭ ಕಳಶ ಹೊತ್ತ ಮಹಿಳೆಯರು ಹಾಗೂ ವಿವಿಧ ಕಲಾತಂಡಗಳ ನೇತೃತ್ವದಲ್ಲಿ ಬಿಎಂ ರಸ್ತೆ ಮೂಲಕ ರಥಬೀದಿಯಿಂದ ಗಾಯಿತ್ರಿ ಕಲ್ಯಾಣ ಮಂಟಪದ ವರೆಗೆ ಮೆರವಣಿಗೆ ನಡೆಸಲಾಯಿತು.

ಚಿಕ್ಕಮಗಳೂರು ತರಿಕೇರೆಯ ಶ್ರೀ ಚಾಮುಂಡೇಶ್ವರಿ ಕಲಾ ತಂಡದ ಕಲಾವಿದೆ ಶೃತಿ ನೇತೃತ್ವದಲ್ಲಿ ಕಲಾವಿದರು ಪ್ರದರ್ಶಿಸಿ ನೃತ್ಯ ಹಾಗೂ ವೀರಭದ್ರೇಶ್ವರ ವೀರಗಾಸೆ ಕುಣಿತ ಮೆರವಣಿಗೆ ಮೆರಗು ನೀಡಿತು. ಮೆರವಣಿಗೆಯಲ್ಲಿ ವಿವಿಧ ಮಠಾಧೀಶರು, ಸಮಾಜದ ಮುಖಂಡರು ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾ ತಾಲೂಕು ಘಟಕ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಗೋಣಿಕೊಪ್ಪ ಸುತ್ತಮುತ್ತ ಧಾರಾಕಾರ ಮಳೆ



ಮಡಿಕೇರಿ: ಗೋಣಿಕೊಪ್ಪ ಪಟ್ಟಣ ಮತ್ತು ಸುತ್ತಮುತ್ತಲಿನ ಗ್ರಾಮ ವ್ಯಾಪ್ತಿಯಲ್ಲಿ ಭಾನುವಾರ ಸಂಜೆ ವೇಳೆ ಗುಡುಗು, ಗಾಳಿ ಸಹಿತ ಕೆಲ ಕಾಲ ಧಾರಾಕಾರ ಮಳೆಯಾದ ಬಗ್ಗೆ ವರದಿಯಾಗಿದೆ.

ಭಾರಿ ಗಾಳಿಗೆ ಕೊನೆಗೊಪ್ಪಲಿನಿಂದ ಪೊನ್ನಂಪೇಟೆಗೆ ತೆರಳುವ ರಸ್ತೆಯಲ್ಲಿರುವ ಗ್ಯಾರೇಜ್ ಮೇಲೆ ಮರ ಬಿದ್ದು ಗ್ಯಾರೇಜ್‌ಗೆ ಹಾನಿಯಾಗಿದೆ. ಗ್ಯಾರೇಜ್‌ನ ಮೇಲ್ಛಾವಣಿ, ತಗಡಿನ ಶೀಟ್‌ಗಳು ಧ್ವಂಸವಾಗಿದ್ದು, ಗ್ಯಾರೇಜ್ ಮಾಲೀಕರಿಗೆ ನಷ್ಟ ಸಂಭವಿಸಿದೆ. ಗಾಳಿ ಸಹಿತ ಮಳೆ ಸುರಿದ ಹಿನ್ನೆಲೆಯಲ್ಲಿ ಅರುವತೋಕ್ಲು ಕೆಹೆಚ್‌ಬಿ ಕಾಲೋನಿ ರಸ್ತೆಯಲ್ಲಿ ಮರ ರಸ್ತೆಗೆ ಅಡ್ಡಲಾಗಿ ಉರುಳಿ ಬಿದ್ದಿದೆ. ಪರಿಣಾಮ 4ಕ್ಕೂ ಅಧಿಕ ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ಮನೆಯೊಂದರ ಗೇಟ್‌ಗೂ ಹಾನಿಯಾಗಿದೆ. ವಿದ್ಯುತ್ ತಂತಿಗಳು ತುಂಡಾಗಿದ್ದು, ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಕಾಫಿಬೋರ್ಡ್, ಪಿ.ಹೆಚ್.ಎಸ್ ಕಾಲೋನಿ ರಸ್ತೆಯಲ್ಲಿ ಕೆಲ ಕಾಲ ಸಂಪರ್ಕ ಕಡಿತಗೊಂಡ ಬಗ್ಗೆಯೂ ವರದಿಯಾಗಿದೆ.

ವಸತಿ ಹಾಗೂ ನಿವೇಶನ ರಹಿತರ ಸಮೀಕ್ಷೆಗೆ ಅರ್ಜಿ ಆಹ್ವಾನ

ಮಡಿಕೇರಿ, ಮೇ 31–ರಾಜೀವ್ ಗಾಂಧಿ ವಸತಿ ನಿಗಮದ ಸೂಚನೆಯಂತೆ ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ)–2.0 ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಸತಿ ಸೌಲಭ್ಯ ಕಲ್ಪಿಸುವ ಸಲುವಾಗಿ ವಸತಿ ರಹಿತ ಹಾಗೂ ನಿವೇಶನ ರಹಿತರ ಸಮೀಕ್ಷೆಗೆ ಅರ್ಜಿ ಸಲ್ಲಿಸಲು ಜೂ. 30ರವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ತಿಳಿಸಿದ್ದಾರೆ.

ಎಸ್‌ಐಆರ್‌ನ ನ್ಯೂನತೆ ಖಂಡಿಸಿ ಪ್ರತಿಭಟನೆ



ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಯಲ್ಲಿ ನ್ಯೂನತೆಗಳಿರುವುದನ್ನು ಖಂಡಿಸಿ ನಗರದಲ್ಲಿ ಎಸ್‌ಐಆರ್ ವಿರೋಧಿ ಒಕ್ಕೂಟ ಪ್ರತಿಭಟನೆ ನಡೆಸಿತು.

ಚಾಮರಾಜನಗರ, ಮೇ 31–ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಯಲ್ಲಿ ನ್ಯೂನತೆಗಳಿರುವುದನ್ನು ಖಂಡಿಸಿ ಎಸ್‌ಐಆರ್ ವಿರೋಧಿ ಜಾತ್ಯಾತೀತ ಪಕ್ಷಗಳ, ಜನಪರ ಸಂಘಟನೆಗಳ ಒಕ್ಕೂಟದಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಯನ್ನು ಖಂಡಿಸಿ ಘೋಷಣೆಗಳನ್ನು ಕೂಗುತ್ತಾ ಕೆಲಕಾಲ ಪ್ರತಿಭಟನೆ ನಡೆಸಿ ಜಿಲ್ಲಾಡಳಿತದ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು,

ಈ ಪರಿಷ್ಕರಣೆಯಲ್ಲಿ ಎಲ್ಲಾ ದಸ್ತಾವೇಜುಗಳಿದ್ದರೂ ಲಾಜಿಕಲ್ ಡಿಸ್ಕ್ರಿಪೆನ್ಸಿ ಹೆಸರಿನಲ್ಲಿ ಹೆಸರಿನ, ದಿನಾಂಕಗಳ, ವಿಳಾಸದ ಸಣ್ಣಪುಟ್ಟ ವ್ಯತ್ಯಾಸ ಇದ್ದರೂ ಸಾಕು ಅನುಮಾನಾಸ್ಪದ ಮತದಾರರು ಎಂದು ಮತದಾನದ ಹಕ್ಕನ್ನು ನಿರಾಕರಿಸಲಾಗುತ್ತದೆ ಎಂದು ಆರೋಪಿಸಿದರು. ಇದು ಬಡವರು, ಅಲ್ಪಸಂಖ್ಯಾತರು, ಅನಕ್ಷರಸ್ಥರಿಗೆ ತೊಂದರೆಯಾಗುತ್ತದೆ, ಇದನ್ನು ಖಂಡಿಸಿ ಪ್ರತಿಭಟನೆ ನಡೆಸಿ ಜನಜಾಗೃತಿ ಮೂಡಿಸಲಾಗುತ್ತದೆ ಎಂದರು,

ಕರಡು ಪಟ್ಟಿ ತಯಾರಾದ ಮೇಲೆ ಕಡ್ಡಾಯವಾಗಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳನ್ನು ಕರೆದು ಅದರಲ್ಲಿ ಅದು ಸಾರ್ವಜನಿಕ ಪರಿಶೀಲನೆ ಒಳಪಡಬೇಕು. ಮುಕ್ತವಾಗಿ ತಿದ್ದುಪಡಿಗಳನ್ನು ಸಂಗ್ರಹಿಸಿದ ನಂತರವೇ ಅಂತಿಮಗೊಳಿಸಬೇಕು. ಜನ ದುಡಿಯಲು ದೂರ ದೂರ ಹೋಗಿರುವುದರಿಂದ, ಕೂಡಲೇ ದಾಖಲೆಗಳನ್ನು ಪಡೆಯುವುದು ಸುಲಭ ಇಲ್ಲದಿರುವುದರಿಂದ ಅಪೀಲ್ ಮತ್ತು ಪರಿಶೀಲನೆಗೆ ಕನಿಷ್ಟ 6 ತಿಂಗಳ ಸಮಯಾವಕಾಶ ಇರ ಬೇಕು ಎಂದರು. ಇದಕ್ಕೆ ರಾಜ್ಯ ಸರ್ಕಾರದ ಒತ್ತಾಯ ಇರಬೇಕು ಅಗತ್ಯಬಿದ್ದರೆ ಅದು ಸುಪ್ರೀಂ ಕೋರ್ಟಿಗೂ ಹೋಗಬೇಕು.

ಪ್ರತಿಭಟನೆಯಲ್ಲಿ ಸಂಚಾಲಕ ಕೆ. ವೆಂಕಟರಾಜು ಎಸ್‌ಡಿಪಿಐ ಸಂಘಟನೆಯ ಅಬ್ರಾರ್ ಅಹಮ್ಮದ್, ಖಲೀಲ್ ವುಲ್ಲಾ, ಮಹೇಶ್, ಸೈಯದ್ ಆರೀಫ್, ಜಬೀನೂರ್, ಸೈಯದ್, ಮಹಮ್ಮದ್ ಅಮೀಕ್, ಬಂಗಾರಸ್ವಾಮಿ, ಸಂಘಸೇನಾ, ಕಾಂಗ್ರೆಸ್ ಪಕ್ಷದ ಮಹಮ್ಮದ್ ಅಸ್ಗರ್, ಬಿ.ಕೆ.ರವಿಕುಮಾರ್, ನಸ್ರುಲ್ಲಾ, ಮಹದೇವ್, ನಾಗರಾಜು, ಸ್ವಾಮಿ, ರವಿಗೌಡ್ಡ, ನಾಗರತ್ನ, ಚಿನ್ನಮ್ಮ, ಕಲಾವತಿ, ಶಕುಂತಲಾ, ಗುರುಸ್ವಾಮಿ, ಪುಣಜನೂರು ದೊರೆಸ್ವಾಮಿ, ಅಬ್ರಾಹಿ ಡಿಸಿಲ್ವಾ ಸೇರಿದಂತೆ ಇತರರು ಭಾಗವಹಿಸಿದ್ದರು.

ಸಮಾಜದಲ್ಲಿ ಆರೋಗ್ಯವಂತರೇ ನಿಜವಾದ ಶ್ರೀಮಂತರು



ಚಾಮರಾಜನಗರ ಬಸವ ರಾಜೇಂದ್ರ ಮೆಡಿಕಲ್‌ಟ್ರಸ್ಟ್ ನಿರ್ಮಿಸಿರುವ ಹಿಮಗಿರಿ ಆಯುಷ್ ಆಸ್ಪತ್ರೆಯನ್ನು ಗಣ್ಯರು ಉದ್ಘಾಟಿಸಿದರು.

ಚಾಮರಾಜನಗರ, ಮೇ. 31–ಬಿಳಿಗಿರಿ ಬನ ದಕ್ಷಿಣ ಭಾರತದ ಪುಣ್ಯ ಭೂಮಿ, ಹಿಮಗಿರಿ ತಂಪಾದ ಗಾಳಿ, ಹರಿಯುವ ನದಿ, ವನಸ್ಪತಿ, ಔಷಧಿ ಒಳಗೊಂಡ ಹೆಸರು ಹಿಮಗಿರಿ ನಾಮಧೇಯ ನಿಜಕ್ಕೂ ಶ್ಲಾಘನೀಯ ಎಂದು ಬಿಳಿಗಿರಿ ರಂಗನ ಬೆಟ್ಟದ ವಿಶ್ವ ಶಾಂತಿನಿಕೇತನ ಆಶ್ರಮದ ಸ್ವಾಮಿ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲೆಯ ಯಳಂದೂರು ತಾಲೂಕಿನ ಪ್ರಸಿದ್ದ ಧಾರ್ಮಿಕ ಸ್ಥಳ ಬಿಳಿಗಿರಿರಂಗನ ಬೆಟ್ಟದ ವಿವೇಕಾನಂದ ಕೇಂದ್ರದ ಹಿಂಭಾಗದಲ್ಲಿ ಚಾಮರಾಜನಗರ ಬಸವ ರಾಜೇಂದ್ರ ಮೆಡಿಕಲ್‌ಟ್ರಸ್ಟ್ ವತಿಯಿಂದ ನಿರ್ಮಿಸಿರುವ "ಹಿಮಗಿರಿ ಆಯುಷ್ ಆಸ್ಪತ್ರೆ ಉದ್ಘಾಟನೆಯನ್ನು ನೆರವೇರಿಸಿ, ಶಕ್ತಿ, ವಯಸ್ಸಿಗನುಗುಣವಾಗಿ ಆಹಾರ ಸೇವನೆ ಮಾಡಬೇಕು. ಸಮಯಕ್ಕೆ ಸರಿಯಾಗಿ ಹೊಟ್ಟೆ ಹಸಿವಾಗುವವರು, ಮಲಗಿದಾಗ ನಿದ್ರೆ ಮಾಡುವವರೇ ಆರೋಗ್ಯವಂತರು. ಆರೋಗ್ಯವೇ ಪರಮ ಭಾಗ್ಯವೆಂಬಂತೆ ನಿಜವಾದ ಆರೋಗ್ಯವಂತರೇ ಸಿರಿವಂತರು ಎಂದು ತಿಳಿಸಿದರು. ಬಸವ ರಾಜೇಂದ್ರ ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ ಡಾ. ಎಂ.ಬಸವ ರಾಜೇಂದ್ರ ಪೊನ್ನಂಪೇಟೆ ಕೃಷಿ ವಿಜ್ಞಾನ ಕಾಲೇಜಿನ ಪ್ರೊಫೆಸರ್ ಡಾ. ಜಡೇ ಮಾದೇಗೌಡ ಮಾತನಾಡಿದರು.

ರಾಮಕೃಷ್ಣ ಆಶ್ರಮದ ಗುರೂಜಿ ರಂಜನ್ ಮಹಾರಾಜ್ ಮಾತನಾಡಿ, ಬಿಳಿಗಿರಿರಂಗನ ಬೆಟ್ಟ ಹಿಮಗಿರಿ ಅರ್ಥಪೂರ್ಣವಾದ ಹೆಸರು. ಶರೀರ ಇರುವುದು ಧರ್ಮದ ಸಾಧನೆಗೆ ಎಂಬ ಮಾತಿನಂತೆ ಭಗವಂತನ ಸಾಕ್ಷಾತ್ಕಾರವೇ ಮನುಷ್ಯನ ಉದ್ದೇಶ. ಇದಕ್ಕೆ ಶರೀರವನ್ನು ಸದೃಢವಾಗಿಟ್ಟು ಕೊಳ್ಳಬೇಕು. ಉದ್ಯಮಿ, ರೈತ, ಕಾರ್ಮಿಕ ಶರೀರ ಸದೃಢವಾಗಿದ್ದರೆ ಅವರವರ ಕರ್ತವ್ಯ ಸಾಧಿಸಲು ಸಾಧ್ಯ. ಡಾ. ಬಸವ ರಾಜೇಂದ್ರ ಅವರು ತಮ್ಮ ದೂರದೃಷ್ಟಿಯಿಂದ ಗಿರಿಜನರ ಆರೋಗ್ಯದ ದೃಷ್ಟಿಯಿಂದ ಬಿಳಿಗಿರಿರಂಗನಬೆಟ್ಟದಲ್ಲಿ ಹಿಮಗಿರಿ ಆಯುಷ್ ಆಸ್ಪತ್ರೆ ತೆರೆದಿದ್ದು, ಎತ್ತರಕ್ಕೆ ಬೆಳೆಯಲಿ ಎಂದು ಶುಭ ಕೋರಿದರು.

ಬಿಳಿಗಿರಿ ರಂಗನ ಬೆಟ್ಟದ ವಾಸ್ತು ಶಾಸ್ತ್ರಜ್ಞ ಬಾಲಸುಬ್ರಮಣ್ಯ ಗುರೂಜಿ, ಜಿ.ಪಂ.ಮಾಜಿ ಸದಸ್ಯ ಜಡೆ ಸಿದ್ದಮ್ಮ, ತಾಲೂಕು ಸೋಲಿಗ ಅಭಿ ವೃದ್ಧಿ ಸಂಘದ ಅಧ್ಯಕ್ಷೆ ಭೇದಮ್ಮ, ಬಿಳಿಗಿರಂಗನ ಬೆಟ್ಟದ ಗ್ರಾ.ಪಂ ಮಾಜಿ ಅಧ್ಯಕ್ಷ ಪ್ರದೀಪ್ ಕುಮಾರ್, ಮಾಜಿ ಉಪಾಧ್ಯಕ್ಷ ಶ್ರೀನಿವಾಸ ನಾಯಕ, ನಾಯಕ ಜನಾಂಗದ ಯಜಮಾನರಾದ ಹೆಚ್ ನಾಗೇಶ್, ಕಾಂಗ್ರೆಸ್ ಮುಖಂಡ ಸೋಮನಾಯಕ, ಬಸವ ರಾಜೇಂದ್ರ ಆಸ್ಪತ್ರೆಯ ಛೇರ್ಮನ್ ಜಿ.ಮಹದೇವಪ್ಪ, ಸ್ತ್ರೀ ಮತ್ತು ಪ್ರಸೂತಿ ತಜ್ಞರಾದ ಡಾ.ಶ್ವೇತಾ ಶಿಧರ್, ಡಾ.ಮಹೇಶ್ ಸೇರಿದಂತೆ ಆಸ್ಪತ್ರೆ ಸಿಬ್ಬಂದಿವರ್ಗ ಹಾಗೂ ಆಶ್ರಮದ ಸಿಬ್ಬಂದಿ, ಸ್ಥಳೀಯರಿದ್ದರು.

ಇಬ್ಬರು ಅಪ್ರಾಪ್ತ ಬಾಲಕಿಯರ ನಾಪತ್ತೆ



ಭಾರತಿ



ವಸಂತ

ಗುಂಡ್ಲುಪೇಟೆ: ಬಹಿರ್ದೆಶೆಗೆ ಹೋಗುವುದಾಗಿ ಮನೆಯಲ್ಲಿ ಹೇಳಿ ಇಬ್ಬರು ಅಪ್ರಾಪ್ತ ಬಾಲಕಿಯರು ಕಾಣೆಯಾಗಿರುವ ಬಗ್ಗೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬುಡಕಟ್ಟು ಜನಾಂಗದ ಜೇನುಕುರುಬ ಸಮುದಾಯಕ್ಕೆ ಸೇರಿದ ಪಟ್ಟಣದ ಜೆಎಸ್‌ಎಸ್ ಕಾಲೇಜಿನ ಎದುರು ಭಾಗದಲ್ಲಿರುವ ಆರ್‌ಆರ್ ಬಡಾವಣೆಯ ನಿವಾಸಿಗಳಾದ ಇಂದು ಹಾಗೂ ರವಿ ಎಂಬವರ ಪುತ್ರಿ ಪಟ್ಟಣದ ಸರ್ಕಾರಿ ಉನ್ನತೀಕರಿಸಿದ ಪ್ರಾಥಮಿಕ ಶಾಲೆಯ 6ನೇ ತರಗತಿ ವಿದ್ಯಾರ್ಥಿನಿ ಭಾರತಿ(12) ಮತ್ತು ಇಂದು ಅವರ ಅಕ್ಕ ಈಶ್ವರಿ ಅವರ ಮಗಳು 8ನೇ ತರಗತಿ ವಿದ್ಯಾರ್ಥಿನಿ ವಸಂತ(14) ಕಾಣೆಯಾಗಿರುವ ಬಾಲಕಿಯರು.

ಮೇ 28ರ ಸಂಜೆ ಬಹಿರ್ದೆಸೆಗೆಂದು ಹೋಗಿಬರುವುದಾಗಿ ಮನೆಯಿಂದ ಹೊರಟವರು ವಾಪಸ್ಸಾಗಿಲ್ಲ ಸಂಬಂಧಿಕರ ಮನೆಗಳಲ್ಲಿ ಹುಡುಕಾಟ ನಡೆಸಿದರೂ ಇಬ್ಬರೂ ಪತ್ತೆಯಾಗಿಲ್ಲ. ಮೇ 29ರಂದು ಪಟ್ಟಣದ ಪೊಲೀಸರಿಗೆ ದೂರು ನೀಡಿದ್ದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿಶ್ವ ತಂಬಾಕು ರಹಿತ ದಿನ: ಜಾಗೃತಿ ಜಾಥಾ



ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಮನೋನಿಧಿ ವಿದ್ಯಾಸಂಸ್ಥೆ ಜಾಗೃತಿ ಜಾಥಾ ನಡೆಸಿತು.

ಚಾಮರಾಜನಗರ, ಮೇ 31–ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಮನೋನಿಧಿ ವಿದ್ಯಾಸಂಸ್ಥೆ ವತಿಯಿಂದ ಜಾಗೃತಿ ಜಾಥಾವನ್ನು ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಈ ಜಾಗೃತಿ ಜಾಥಾಕ್ಕೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್ ಹಾಗೂ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ಜಾಥಾವು ಬಿ.ರಾಚಯ್ಯ ಜೋಡಿ ರಸ್ತೆ, ಭುವನೇಶ್ವರಿ ವೃತ್ತದಿಂದ ಚಾಮರಾಜೇಶ್ವರ ದೇವಸ್ಥಾನಕ್ಕೆ ಆಗಮಿಸಿ ಅಂತ್ಯಗೊಂಡಿತು.

ಬಳಿಕ ದೇವಾಲಯದ ಆವರಣದಲ್ಲಿ ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳನ್ನು ಕುರಿತು ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಕಿರು ನಾಟಕ ಹಾಗೂ ಮೂಕಾಭಿನಯವನ್ನು ಪ್ರದರ್ಶಿಸಿದರು. ಸಂಸ್ಥೆಯ ಮುಖ್ಯಸ್ಥೆ ಡಾ.ಶೈಲಜಾ ಕೃಪಾನಿಧಿ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಸಂಸ್ಥೆ ಕಾರ್ಯದರ್ಶಿ ಆಲ್ಬರ್ಟ್ ಮನೋರಾಜ್, ಸದಸ್ಯರಾದ ಸ್ತುತ್ಯ ಮನೋನಿಧಿ, ಸ್ತೋತ್ರ ನರ್ಸಿಂಗ್ ಕಾಲೇಜು, ಪ್ಯಾರಾ ಮೆಡಿಕಲ್ ಕಾಲೇಜು, ಫಾರ್ಮಸಿ ಕಾಲೇಜು, ಪಿ.ಯು ಕಾಲೇಜು, ಅಲ್ಲೈಡ್ ಹೆಲ್ತ್ ಸೈನ್ಸ್ ಕಾಲೇಜಿನ ಪ್ರಾಂಶುಪಾಲರು, ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಆದರ್ಶ ಶಾಲೆಗೆ ನೂತನ್ ಮಾದಪ್ಪ ಆಯ್ಕೆ

ಕೊಳ್ಳೇಗಾಲ: ಇತ್ತೀಚೆಗೆ ನಡೆದ ಆದರ್ಶ ಪರೀಕ್ಷೆಯಲ್ಲಿ ಪಟ್ಟಣದ ವಾಸಿ ನೂತನ್ ಎಲ್.ಮಾದಪ್ಪ ಅತ್ಯಧಿಕ ಅಂಕಗಳಿಸಿ ಉತ್ತೀರ್ಣರಾಗುವ ಮೂಲಕ ಪ್ರಪ್ರಥಮ ವಿದ್ಯಾರ್ಥಿಯಾಗಿ ಶಾಲೆಗೆ ಆಯ್ಕೆಯಾಗಿದ್ದಾರೆ.



ನೂತನ್ ಎಲ್ ಮಾದಪ್ಪ ಆದರ್ಶ ಶಾಲೆ ನಡೆಸಿದ್ದ ನೂರು ಅಂಕಗಳ ಪರೀಕ್ಷೆಯಲ್ಲಿ 79 ಅಂಕಗಳಿಸಿ ತೇರ್ಗಡೆ ಹೊಂದುವ ಮೂಲಕ ಹೆಚ್ಚು ಅಂಕಗಳಿಸಿ ಆದರ್ಶ ಶಾಲೆಗೆ ಆಯ್ಕೆಯಾಗಿದ್ದಾರೆ ಎಂದು ಮುಖ್ಯಶಿಕ್ಷಕರಾದ ಕುಮಾರಿ ಪ್ರಿಯದರ್ಶಿನಿ ತಿಳಿಸಿದ್ದಾರೆ. ಈತ ಪಟ್ಟಣದ ನಿವಾಸಿ ಬಿಂಧು ಲೋಕೇಶ್ ಪುತ್ರ. ಪುರಸಭೆ ಮಾಜಿ ಸದಸ್ಯ ಬಸವರಾಜು, ವಿನಾಯಕ ಗೆಳೆಯರ ಬಳಗದ ಅಧ್ಯಕ್ಷ ನಾಗೇಂದ್ರಸ್ವಾಮಿ, ಶ್ರೀನಿವಾಸ್ ಅಭಿನಂದಿಸಿದ್ದಾರೆ.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ



ಶುದ್ಧ ಕುಡಿಯುವ ನೀರಿನ ಘಟಕವನ್ನು ಶ್ರೀ ಚನ್ನಬಸವ ಸ್ವಾಮೀಜಿ ಉದ್ಘಾಟಿಸಿದರು.

ಚಾಮರಾಜನಗರ, ಮೇ 31–ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಶುದ್ಧ ನೀರು ಸಹ ಪ್ರಮುಖವಾದದ್ದು ಇದನ್ನು ರಿಯಾಯಿತಿ ದರದಲ್ಲಿ ಒದಗಿಸುವ ಉದ್ದೇಶದಿಂದ ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘವು ಸ್ಥಾಪಿಸುತ್ತಿರುವುದು ಸಮಾಜಮುಖಿ ಕೆಲಸವಾಗಿದೆ ಎಂದು ನಗರದ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮೀಜಿ ಹೇಳಿದರು.

ನಗರದ ಮಹಾಮನೆ ಮುಂಭಾಗ ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘವು ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿ, ಜನರ ಆರೋಗ್ಯ ದೃಷ್ಟಿಯಿಂದ ಶುದ್ಧ ಕುಡಿಯುವ ನೀರು ಅಗತ್ಯವಾಗಿದ್ದು, ಸುತ್ತಮುತ್ತಲಿನ ಜನರು ಸದುಪಯೋಗ ಪಡೆದುಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ, ರಾಮಸಮುದ್ರ ಕಂಬಳೀಶ್ವರ ಮಠದ ಮಹಾದೇವ ಸ್ವಾಮೀಜಿ, ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ಪಿ. ಬಸಪ್ಪ ಸೇರಿದಂತೆ ಕಾರ್ಯಕಾರಿ ಮಂಡಳಿ ಸದಸ್ಯರು, ಮಾಜಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಕದಳಿ ಮಹಿಳಾ ವೇದಿಕೆಯವರು, ವಿವಿಧ ಸಂಘ ಸಂಸ್ಥೆ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಇದ್ದರು.

ಎಸ್. ರಾಜಸಿಂಹ ನಿಧನ



ಚಾಮರಾಜನಗರ, ಮೇ 31–ನಗರದ ರಥದ ಬೀದಿ ನಿವಾಸಿ ಎಸ್.ರಾಜಸಿಂಹ (51) ಶನಿವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಸಹೋದರ ಲಕ್ಷ್ಮೀನರಸಿಂಹ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ನಡೆಯಿತು. ರಾಜಸಿಂಹ ನಿಧನಕ್ಕೆ ಪತ್ರಿಕೆ ಮಾರಾಟಗಾರರಾದ ಮೋಹನ್, ರಮೇಶ್, ಸುರೇಶ್, ಕಲಾವಿದ ರವಿಚಂದ್ರಪ್ರಸಾದ್ ಸಂತಾಪ ಸೂಚಿಸಿದ್ದಾರೆ.

ರಾಷ್ಟ್ರಮಟ್ಟದ ಸುಗ್ಗಿಯರ ಕಲೋತ್ಸವ ಗಾಯನ ಸೀಸನ್–3 ಕಾರ್ಯಕ್ರಮ

ಗ್ರಾಮೀಣ ಪ್ರತಿಭೆಗಳಿಂದ ಸಾಂಸ್ಕೃತಿಕ ಬೆಳವಣಿಗೆ: ಶಾಸಕ ಜಿಟಿಡಿ



ಮೈಸೂರಿನ ಹೂಟಗಳ್ಳಿಯ ಹೌಸಿಂಗ್ ಬೋರ್ಡ್‌ನ ಶ್ರೀ ಅನಂತೇಶ್ವರ ಭವನದಲ್ಲಿ ರಾಷ್ಟ್ರಮಟ್ಟದ ಸುಗ್ಗಿಯರ ಕಲೋತ್ಸವ ಗಾಯನ ಸೀಸನ್–3 ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮೈಸೂರು, ಮೇ 31– ಸರ್ವಕಲಾ ಸೇವಾ ಟ್ರಸ್ಟ್ ಹಾಗೂ ಪಂಚಾಯತ್ ಗ್ರಾಮೀಣಾಭಿವೃದ್ಧಿ ರೈತರ ಸೇವಾ ಸಮಿತಿ ಮೈಸೂರು ಜಿಲ್ಲಾ ಘಟಕದ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರ ಮಟ್ಟದ ಸುಗ್ಗಿಯರ ಕಲೋತ್ಸವ ಗಾಯನ ಸೀಸನ್–3 ಕಾರ್ಯಕ್ರಮವು ನಗರದ ಹೂಟಗಳ್ಳಿಯ ಹೌಸಿಂಗ್ ಬೋರ್ಡ್‌ನ ಶ್ರೀ ಅನಂತೇಶ್ವರ ಭವನದಲ್ಲಿ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮವು ಪರಮಪೂಜ್ಯ ಶ್ರೀನಿವಾಸನ್ ಎನ್. ಸ್ವಾಮೀಜಿಯವರು ಹಾಗೂ ಶ್ರೀ ಶ್ರೀ ರಮಾನಂದ ಗುರೂಜಿ ಯವರು ಅವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಆಶೀರ್ವಚನ ನೀಡಿದ ಇಬ್ಬರೂ ಆಧ್ಯಾತ್ಮಿಕ ಮುಖಂಡರು, ಸಂಗೀತ ಮತ್ತು ಕಲೆಗಳು ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು.

ಗ್ರಾಮೀಣ ಭಾಗದ ಯುವ ಪ್ರತಿಭೆಗಳಿಗೆ ಸೂಕ್ತ ಅವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮ ಶ್ಲಾಘನೀಯ ಕಾರ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜಿ.ಟಿ. ದೇವೇಗೌಡರು ಮಾತನಾಡಿ, ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಇಂತಹ ಕಾರ್ಯಕ್ರಮಗಳು ಸಮಾಜದ ಸಾಂಸ್ಕೃತಿಕ ಬೆಳವಣಿಗೆಗೆ ಪೂರಕವಾಗಿವೆ ಎಂದು ಹೇಳಿದರು.

ಕನ್ನಡ ಚಿತ್ರರಂಗದ ಖ್ಯಾತ ಹಾಸ್ಯನಟ ಮಂಗಳಗೌರಿ ಮುರುಳೀಧರ್ ಅವರು ವಿಶೇಷ ಆಹ್ವಾನಿತರಾಗಿ ಭಾಗವಹಿಸಿ ತಮ್ಮ ಹಾಸ್ಯಮಯ ಮಾತುಗಳ ಮೂಲಕ ಸಭಿಕರನ್ನು ರಂಜಿಸಿದರು ಹಾಗೂ ಯುವ ಕಲಾವಿದರಿಗೆ ಪ್ರೋತ್ಸಾಹದ ಮಾತುಗಳನ್ನಾಡಿದರು.

ಕಾರ್ಯಕ್ರಮದ ಮುಖ್ಯ ಭಾಗವಾಗಿ ರಕ್ತದಾನಿ ಮಂಜು ಕನಸು ಕಂಡಂತ ಚಿರಜೀವ ಸೇವಾ ಟ್ರಸ್ಟ್ ಮತ್ತು ನೀಮಾ ಲೋಬೋ ಮೇಡಂ ರವರ ಸಪ್ತಸ್ವರ ಮೆಲೋಡಿಸ್ ಪೋಸ್ಟರ್ ಅನ್ನು ಶಾಸಕರು ಮತ್ತು ಗಣ್ಯರು ಉದ್ಘಾಟನೆ ಮಾಡಿದರು.

ಬಳಿಕ ರಕ್ತದಾನಿ ಮಂಜು ರವರ ಮುಂದಿನ ಬೆಳವಣಿಗೆಗೆ ಎಲ್ಲರೂ ಆಶೀರ್ವಾದ ಮಾಡಿದರು.


ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಗಾಯನ ಪ್ರತಿಭೆಗಳು ತಮ್ಮ ಸುಮಧುರ ಗಾಯನದ ಮೂಲಕ ನೆರೆದಿದ್ದ ಪ್ರೇಕ್ಷಕರ ಮನಗೆದ್ದರು. ಭಕ್ತಿಗೀತೆ, ಭಾವಗೀತೆ, ಜನಪದ ಗೀತೆ ಹಾಗೂ ಚಲನಚಿತ್ರ ಗೀತೆಗಳ ಪ್ರಸ್ತುತಿಯು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು.

ಸಮಾರಂಭದಲ್ಲಿ ಮಹಾದೇವಸ್ವಾಮಿ, ದಾಸೇಗೌಡ, ಸುಧಾಮಣಿ, ಯಮುನ ಹೆಚ್.ಎಲ್, ನೀಮಾ ಲೋಬೋ, ಚಂದ್ರಿಕಾ ಸುರೇಶ್, ಭಾಗ್ಯ ತಿಮ್ಮರಾಜೇ ಗೌಡ, ಭಾಗ್ಯ ಲೋಕೇಶ್, ನಾಗರತ್ನ ರಮೇಶ್, ಭಾಗ್ಯ ಮೋಹನ್, ಡಾ. ನಾಗರಾಜು ವಿ. ಭೈರಿ, ಶ್ರೀನಿವಾಸ್‌ರಾವ್, ಎಂ.ಜೆ. ಕಿರಣ್‌ಗೌಡ, ಪುರುಷೋತ್ತಮ. ಕೆ.ಎಸ್, ಬಿ.ಪಿ. ಸಂದೇಶ್, ವಿ.ಕೆ. ದಿವ್ಯಾ, ರಾಜಶೇಖರ್, ಯಾದವ್ ಹರೀಶ್, ದಿನೇಶ್, ಪ್ರಶಾಂತ್ ಅರುಣ್‌ಪುರ, ವಿಕ್ರಂ ಅಯ್ಯಂಗಾರ್, ನಾಗೇಂದ್ರ, ಪ್ರದೀಪ್ ಕುಮಾರ್, ಗಿರೀಶ್.ಎಸ್.ಆರ್, ಲತಾ ದೊರೆಸ್ವಾಮಿ, ಶೈಲಜಾ.ವಿ, ಭೈರ ಹೆಚ್.ಆರ್, ಡಾ. ಲಯನ್‌ಕುಮಾರ್, ಸುರೇಶ್ ಹಾಗೂ ಸವಿತಾ.ಎಸ್. ಗೌಡ ಸೇರಿದಂತೆ ಇತರ ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವ್ಯಕ್ತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಗಾಯನ ಸ್ಪರ್ಧೆಗಳಲ್ಲಿ ವಿಜೇತರಾದ ಪ್ರತಿಭೆಗಳಿಗೆ ಟ್ರೋಫಿ, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆಗಳನ್ನು ವಿತರಿಸಲಾಯಿತು. ನೂರಾರು ಕಲಾಭಿಮಾನಿಗಳು, ಕಲಾವಿದರು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ನಡೆದ ಈ ಕಲೋತ್ಸವವು ಯಶಸ್ವಿಯಾಗಿ ಸಂಪನ್ನಗೊಂಡು ಗ್ರಾಮೀಣ ಪ್ರತಿಭೆಗಳ ಅನಾವರಣಕ್ಕೆ ಉತ್ತಮ ವೇದಿಕೆಯಾಯಿತು.

ಶ್ರೀಮತಿ ನೀಮಾ ಲೋಬೋ, ಡಾ. ಜೋಸೆಫ್ ಲೋಬೋ, ಶ್ರೀ ಯಾದವ್ ಹರೀಶ್ ಹಾಗೂ ಪಿಜಿಆರ್ ಎಸ್‌ಎಸ್‌ನ ರಕ್ತದಾನಿ ಮಂಜು ರವರುಗಳು ಕಾರ್ಯಕ್ರಮವನ್ನು ಆಯೋಜಿಸಿದ್ದರು

ಸಾಂಸ್ಕೃತಿಕ ನಗರಿಯಲ್ಲಿ ಮೈನವಿರೇಳಿಸಿದ ಕುಸ್ತಿ ಪಂದ್ಯಾವಳಿ



ಕುಸ್ತಿ ಅಖಾಡದಲ್ಲಿ ಜಟ್ಟಿಗಳು ಕಾದಾಟ ನಡೆಸುತ್ತಿರುವುದು.

ಮೈಸೂರು, ಮೇ 31(ವಿವಿಹೆಚ್)– ಮಣ್ಣಿನ ಸುಗಂಧ, ಬ್ಯಾಂಡ್ ನಾದ, ಸಾವಿರಾರು ಅಭಿಮಾನಿಗಳ ಹರ್ಷೋದ್ಗಾರಗಳ ನಡುವೆ ನಗರದ ಡಿ. ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಭಾನುವಾರ ನಾಡಿನ ಸಾಂಪ್ರದಾಯಿಕ ಕ್ರೀಡೆಯಾದ ಕುಸ್ತಿ ಪಂದ್ಯಾವಳಿಯು ಮೈನವಿರೇಳಿಸಿತು.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಹಾಗೂ ಅಶೋಕಪುರಂ ಫ್ರೆಂಡ್ಸ್ ಸಹಯೋಗದೊಂದಿಗೆ ಡಾಕ್ಟರ್.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ನಗರದ ಕರ್ನಾಟಕ ವಸ್ತು ಪ್ರದರ್ಶನ ಪಕ್ಕದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಭಾನುವಾರ ರಾಷ್ಟ್ರಮಟ್ಟದ 30 ಜೊತೆ ನಾಡಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿತ್ತು.

ಅಖಾಡದಲ್ಲಿ ಕುಸ್ತಿಪಟುಗಳು ತಮ್ಮ ಬಲ, ಚಾತುರ್ಯ ಮತ್ತು ಧೈರ್ಯ ಪ್ರದರ್ಶಿಸುತ್ತಿದ್ದರೆ, ಪ್ರೇಕ್ಷಕರು ಚಪ್ಪಾಳೆಗಳ ಮೂಲಕ ಅವರನ್ನು ಹುರಿದುಂಬಿಸಿದರು. ರಾಷ್ಟ್ರೀಯ ಮಟ್ಟದ 30 ಜೋಡಿ ನಾಡ ಕುಸ್ತಿ ಪಂದ್ಯಾವಳಿಯ ಪ್ರತಿಯೊಂದು ಸೆಣಸಾಟವೂ ರೋಚಕತೆಯಿಂದ ಕೂಡಿದ್ದು, ಸಂಪ್ರದಾಯ ಮತ್ತು ಕ್ರೀಡಾ ಸಂಸ್ಕೃತಿಯ ಸಂಗಮದಂತಿದ್ದ ಈ ಕಾರ್ಯಕ್ರಮ ಕುಸ್ತಿ ಪ್ರೇಮಿಗಳಿಗೆ ಹಬ್ಬದ ವಾತಾವರಣವನ್ನು ಸೃಷ್ಟಿಸಿತು.

ಜಿಲ್ಲೆ, ರಾಜ್ಯ, ದೇಶ ಹಾಗೂ ವಿದೇಶಗಳಿಂದ ಆಗಮಿಸಿದ್ದ ಕುಸ್ತಿಪಟುಗಳು ಪಂದ್ಯಾವಳಿಯಲ್ಲಿ ಭಾಗವಹಿಸಿ ತಮ್ಮ ಕೌಶಲ್ಯ ಪ್ರದರ್ಶಿಸಿದರು. ಕ್ರೀಡಾಂಗಣಕ್ಕೆ ಅಭಿಮಾನಿಗಳು ಆಗಮಿಸಿ ಕುಸ್ತಿ ಪಂದ್ಯಗಳನ್ನು ವೀಕ್ಷಿಸಿ ಕ್ರೀಡಾಪಟುಗಳನ್ನು ಹುರಿದುಂಬಿಸಿದರು. ಪ್ರತಿ ಜೋಡಿಯ ನಡುವಿನ ಸೆಣಸಾಟವು ರೋಚಕತೆಯಿಂದ ಕೂಡಿದ್ದು, ಪ್ರೇಕ್ಷಕರಿಂದ ಭರ್ಜರಿ ಚಪ್ಪಾಳೆ ಹಾಗೂ ಮೆಚ್ಚುಗೆ ವ್ಯಕ್ತವಾಯಿತು.

ನೇಪಾಳದ ಜನಪ್ರಿಯ ಮನರಂಜನಾ ಕುಸ್ತಿಪಟು ಪೈ. ದೇವತಾಪರ ಹಾಗೂ ಹರಿಯಾಣದ ಪೈ. ಮಂಜಿತ್ ಸಿಂಗ್ ಅವರ ಕಾದಾಟ ಎಲ್ಲರನ್ನು ರೋಮಾಂಚನಗೊಳಿಸಿತು. ಈ ಕುಸ್ತಿಯಲ್ಲಿ ಪೈ. ದೇವತಾಪರ ಅಂತಿಮ ಕ್ಷಣದಲ್ಲಿ ಗೆದ್ದು ಬೀಗಿದರು. ಮಾರ್ಫಿಟ್ ಕಾಳಗದಲ್ಲಿ ಹರಿಯಾಣ ಸೋನಿಪತ್ ಪೈ. ರೋಹಿತ್ ದಹಿಯಾ ಹಾಗೂ ಪುಣೆ ಅಂತರಾಷ್ಟ್ರೀಯ ಕುಸ್ತಿಪಟು ಶಿವರಾಂ ದಾದಾ ತಾಲಿಂ ಪೈ. ಸಮೀರ್ ಶೇಖ್ ನಡುವೆ ನಡೆದ ಕಾಳಗದಲ್ಲಿ ರೋಹಿತ್ ದಹಿಯಾ ತಮ್ಮ ತೋಳ್ಬಲ ಪ್ರದರ್ಶಿಸಿ ಗೆಲುವು ದಕ್ಕಿಸಿಕೊಂಡರು. ಕುಸ್ತಿ ವ್ಯವಸ್ಥಾಪಕ ಪೈ. ಕೃಷ್ಣ ಅವರ ಪುತ್ರ ವಿಶಾಲ್ ಅಶೋಕಪುರಂನ ಪೈ. ವಿಶಾಲ್ ಮಳವಳ್ಳಿ ಪೈ. ಶಿವು ಅವರನ್ನು ಮಣಿಸುವಲ್ಲಿ ಯಶಸ್ವಿಯಾದರು.

ದಾವಣಗೆರೆ ಕ್ರೀಡಾನಿಲಯ ಪೈ. ಸಂಜೀವ್ ಕೊರವರ ಹಾಗೂ ಪುಣೆ ಪೈ. ಹರಿಲ್ ಕಚೇರಿ ನಡುವೆ 30 ನಿಮಿಷಗಳ ಕಾಳಗ ಎಲ್ಲರನ್ನು ಕುರ್ಚಿಯ ತುದಿಯಲ್ಲಿ ಕೂರುವಂತೆ ಮಾಡಿತು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಪುರುಷೋತ್ತಮ್, ಮಾಜಿ ಉಪ ಮೇಯರ್ ಸಿದ್ಧರಾಜು, ಪ್ರದೀಪ್, ವಕೀಲ ಉಮೇಶ್, ದಸಂಸ ಜಿಲ್ಲಾ ಸಂಚಾಲಕ ಹಾಗೂ ಕುಸ್ತಿ ವ್ಯವಸ್ಥಾಪಕ ಪೈ. ಕೃಷ್ಣ, ಆಯೋಜಕ ಅಭಿಷೇಕ್ ಉಪಸ್ಥಿತರಿದ್ದರು.

ಚಿಕ್ಕಬಳ್ಳಾಪುರದಲ್ಲಿ ಭೀಕರ ಸರಣಿ ಅಪಘಾತ: ಐವರು ಸಾವು, ಹತ್ತಕ್ಕೂ ಹೆಚ್ಚು ಮಂದಿಗೆ ಗಂಭೀರ ಗಾಯ

ಥಾರ್ ಕಾರು ಡಿಕ್ಕಿ ಹೊಡೆದು ಕ್ಯಾಂಟರ್‌ಗೆ ಅಪ್ಪಳಿಸಿದ ಆಟೋ ನಜ್ಜುಗುಜ್ಜು



ಚಿಕ್ಕಬಳ್ಳಾಪುರ: ಭೀಕರ ಸರಣಿ ಅಪಘಾತ ಸಂಭವಿಸಿ, ಆಟೋದಲ್ಲಿದ್ದ ಐವರು ಸ್ಥಳದಲ್ಲೇ ಸಾವನ್ನಪ್ಪಿರುವ ದುರ್ಘಟನೆ ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲೂಕಿನ ಸುಂಕಲಮ್ಮ ದೇವಸ್ಥಾನದ ಬಳಿ ಭಾನುವಾರ ನಡೆದಿದೆ.

ಬಾಗೇಪಲ್ಲಿ ಪಟ್ಟಣದ ನಿವಾಸಿಗಳಾದ ಉಮಾದೇವಿ(55), ವಿಜಯಾ(40), ಲಕ್ಷ್ಮಮ್ಮ(50), ಸರೋಜಮ್ಮ ಹಾಗೂ ಆಟೋ ಚಾಲಕ ಆಂಜಿನಪ್ಪ(35) ಸಾವನ್ನಪ್ಪಿದ್ದು, ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿರುವ 10ಕ್ಕೂ ಹೆಚ್ಚು ಜನರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ರಸ್ತೆಯಲ್ಲಿ ವೇಗವಾಗಿ ಬಂದ ಥಾರ್ ಕಾರು ತನ್ನ ಮುಂದೆ ಚಲಿಸುತ್ತಿದ್ದ ಆಟೋಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಆಟೋ ನಿಯಂತ್ರಣ ತಪ್ಪಿ ಮುಂಭಾಗದಲ್ಲಿದ್ದ ಕ್ಯಾಂಟರ್ ವಾಹನಕ್ಕೆ ಅಪ್ಪಳಿಸಿದೆ. ಪರಿಣಾಮ ಆಟೋ ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಅದರಲ್ಲಿದ್ದ ಐವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನಾ ಸ್ಥಳಕ್ಕೆ ಚಿಕ್ಕಬಳ್ಳಾಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೌಶಲ್ ಚೌಕ್ಸೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಬಾಗೇಪಲ್ಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಆರಂಭಿಸಿದ್ದಾರೆ.

ಹಿಮಾಚಲದಲ್ಲಿ ಪ್ರಪಾತಕ್ಕೆ ಬಿದ್ದ ಟ್ಯಾಕ್ಸಿ; ಬೆಂಗಳೂರಿನ ಕುಟುಂಬ ಸೇರಿ 8 ಮಂದಿ ಸಾವು

ಚಂಬಾ: ಹಿಮಾಚಲ ಪ್ರದೇಶದಲ್ಲಿ ಭಾನುವಾರ ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಟ್ಯಾಕ್ಸಿಯೊಂದು 500 ಮೀಟರ್ ಆಳದ ಪ್ರಪಾತಕ್ಕೆ ಬಿದ್ದು, ಚಾಲಕ ಸೇರಿ 8 ಮಂದಿ ಸಾವನ್ನಪ್ಪಿದ್ದಾರೆ.

ಚಂಬಾ ಜಿಲ್ಲೆಯ ಪಂಗಿ ಪ್ರದೇಶದ ಬೈರಾಗಢ–ಪಂಗಿ–ಸಚ್ ಪಾಸ್ ರಸ್ತೆಯ ಕಲಾವನ್ ಬಳಿ ಈ ದುರಂತ ಸಂಭವಿಸಿದ್ದು, ಬೆಂಗಳೂರಿನ ಒಂದು ಕುಟುಂಬ ಮತ್ತು ಛತ್ತೀಸ್‌ಗಢದ ಇನ್ನೊಂದು ಕುಟುಂಬ ಹಾಗೂ ಸ್ಥಳೀಯ ಚಾಲಕ ಸೇರಿದಂತೆ 8 ಮಂದಿ ಮೃತಪಟ್ಟಿದ್ದಾರೆ ಎಂದು ಚಂಬಾ ಪೊಲೀಸ್ ವರಿಷ್ಠಾಧಿಕಾರಿ ವಿಜಯ್ ಸಕ್ಲಾನಿ ತಿಳಿಸಿದ್ದಾರೆ. ವಾಹನವು ಚಾಲಕನ ನಿಯಂತ್ರಣ ತಪ್ಪಿ ಆಳವಾದ ಪ್ರಪಾತಕ್ಕೆ ಬಿದ್ದ ಪರಿಣಾಮ ಎಲ್ಲರೂ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಹೆಚ್ಚುವರಿ ಉಪ ಆಯುಕ್ತ ಅಮಿತ್ ಮೆಹ್ರಾ ದೃಢಪಡಿಸಿದ್ದಾರೆ.

ಡಾ.ಯತೀಂದ್ರರಿಗೆ ಡಿಸಿಎಂ, ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನ ನೀಡಿ

ಕಾಂಗ್ರೆಸ್ ವರಿಷ್ಠರಿಗೆ ಮುಖಂಡರು, ಕಾರ್ಯಕರ್ತರ ಒತ್ತಾಯ

ತಿ.ನರಸೀಪುರ, ಮೇ 31– ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನದೊಂದಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನ ನೀಡುವಂತೆ ವರುಣ ಹಾಗೂ ತಗಡೂರು ಬ್ಲಾಕ್ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪಕ್ಷದ ವರಿಷ್ಠರನ್ನು ಒತ್ತಾಯಿಸಿದರು.

ವರುಣ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಮುಂಭಾಗ ಭಾನುವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಜಮಾಯಿಸಿದ್ದ ನೂರಾರು ಕಾರ್ಯಕರ್ತರು ಹಾಗೂ ಮುಖಂಡರು ಎಂಎಲ್‌ಸಿ ಡಾ.ಯತೀಂದ್ರ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಹಕ್ಕೋತ್ತಾಯ ಮಂಡಿಸಿದರು.

ತಿ.ನರಸೀಪುರ ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ಮಾತನಾಡಿ, ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಅಧಿಕಾರವಿದ್ದರೂ, ಇಲ್ಲದಿದ್ದರೂ ಪಕ್ಷ ಸಂಘಟನೆ, ಜನಸೇವಾ ಕಾರ್ಯಗಳೊಂದಿಗೆ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ನಿರಂತರವಾಗಿ ಕಾರ್ಯ ನಿರ್ವಹಿಸಿದ್ದಾರೆ. ವರುಣ ಸೇರಿದಂತೆ ರಾಜ್ಯದ ವಿವಿಧೆಡೆ ಯುವಜನರು, ರೈತರು, ಮಹಿಳೆಯರು ಹಾಗೂ ಹಿಂದುಳಿದ ವರ್ಗದವರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ಎಂಎಲ್‌ಸಿ ಡಾ.ಯತೀಂದ್ರ ಅವರು ಕಾಂಗ್ರೆಸ್ ಯುವ ನಾಯಕತ್ವದ ಪ್ರಮುಖ ಮುಖವಾಗಿ ಹೊರಹೊಮ್ಮಿದ್ದಾರೆ. ಅವರ ಸಂಘಟನಾ ಸಾಮರ್ಥ್ಯ, ಸರಳ ವ್ಯಕ್ತಿತ್ವ ಮತ್ತು ಜನಪರ ಕಾಳಜಿ ಪರಿಗಣಿಸಿ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.



ಸಭೆಯಲ್ಲಿ ತಿ.ನರಸೀಪುರ ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ಮಾತನಾಡಿದರು.

ಕರ್ನಾಟಕ ರಾಜ್ಯ ಆದಿಜಾಂಬವ ಅಭಿವೃದ್ಧಿ ನಿಗಮದ ನಿರ್ದೇಶಕ ಸಿದ್ದರಾಮನಹುಂಡಿ ಕುಮಾರ ಮಾತನಾಡಿ, ಎಂಎಲ್‌ಸಿ ಡಾ.ಯತೀಂದ್ರ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವುದರಿಂದ ಯುವ ನಾಯಕತ್ವಕ್ಕೆ ಉತ್ತೇಜನ ದೊರೆಯಲಿದ್ದು, ಪಕ್ಷದ ತಳಮಟ್ಟದ ಕಾರ್ಯಕರ್ತರಿಗೂ ಹೆಚ್ಚಿನ ಪ್ರೇರಣೆ ಸಿಗಲಿದೆ. ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಬಲಪಡಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಲಿದ್ದಾರೆ ಎಂದರು.

ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಟಿ.ಎಸ್.ಪ್ರಶಾಂತ್ ಬಾಬು ಮಾತನಾಡಿ, ರಾಜ್ಯದ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಆಶಯಗಳನ್ನು ಸಾಕಾರಗೊಳಿಸುವಲ್ಲಿ ಡಾ.ಯತೀಂದ್ರ ಪಾತ್ರ ಮಹತ್ವದ್ದಾಗಿದೆ. ತಂದೆ ಸಿದ್ದರಾಮಯ್ಯ ಅವರ ಮಾರ್ಗದರ್ಶನದಲ್ಲಿ ರಾಜಕೀಯ ಅನುಭವ ಗಳಿಸಿರುವ ಅವರು ಪಕ್ಷದ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗಾಗಿ ಯುವ ನಾಯಕತ್ವಕ್ಕೆ ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶದಿಂದ ಅವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡುವುದು ಸೂಕ್ತವಾಗಲಿದೆ ಎಂದು ಅಭಿಪ್ರಾಯಪಟ್ಟರು.

ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ ಮಾತನಾಡಿ, ಸಿದ್ದರಾಮಯ್ಯ ಅವರು ನೂತನ ಸರ್ಕಾರದಲ್ಲಿ ನನಗಾಗಲಿ, ನನ್ನ ಮಗನಿಗಾಗಲೀ ಯಾವುದೇ ಸ್ಥಾನ ಬೇಡವೆಂದು ಹೇಳಿದ್ದಾರೆ. ಅದು ಅವರಲ್ಲಿರುವ ದೊಡ್ಡತನ. ಹೀಗಾಗಿ ಕಾರ್ಯಕರ್ತರು ಸುಮ್ಮನೆ ಕೂರುವಂತಿಲ್ಲ. ನೂರಾರು ಸಂಖ್ಯೆಯಲ್ಲಿ ನಿಯೋಗ ತೆರಳಿ ಸಿದ್ದರಾಮಯ್ಯರ ಮನವೊಲಿಸಿ ಯತೀಂದ್ರರಿಗೆ ಉಪ ಮುಖ್ಯಮಂತ್ರಿ ಹುದ್ದೆ ಕೊಡಿಸುವಂತೆ ಒತ್ತಾಯಿಸಬೇಕಿದೆ ಎಂದರು.

ಸಿದ್ದು ಭೇಟಿಗೆ ಬೆಂಗಳೂರಿಗೆ ಹೊರಟ ಕಾರ್ಯಕರ್ತರು

ಸಭೆ ನಂತರ ನೂರಾರು ಕಾರ್ಯಕರ್ತರು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಎಂಎಲ್‌ಸಿ ಡಾ.ಯತೀಂದ್ರ ಅವರಿಗೆ ಉಪ ಮುಖ್ಯ ಮಂತ್ರಿ ಸ್ಥಾನ ಕೊಡಿಸಲು ಶಿಫಾರಸ್ಸು ಮಾಡಬೇಕೆಂದು ಒತ್ತಾಯಿಸಲು ಬೆಂಗಳೂರಿಗೆ ತೆರಳಿದರು. ಯಾವುದೇ ಹುದ್ದೆ ಬೇಡ ಎಂಬ ನಿರ್ಧಾರ ಕೈಬಿಟ್ಟು ಹೈಕಮಾಂಡ್‌ಗೆ ಒತ್ತಡ ತಂದು ಉಪ ಮುಖ್ಯಮಂತ್ರಿ ಹಾಗೂ ಸಚಿವ ಸ್ಥಾನ ಕೊಡಿಸಲು ಮನಸ್ಸು ಬದಲಾಯಿಸುವಂತೆ ಒತ್ತಾಯಿಸಲು ನಿಯೋಗ ಬೆಂಗಳೂರಿಗೆ ಹೊರಟಿತು.

ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹಾದೇವಣ್ಣ, ಮಹದೇಶ್ವರಬೆಟ್ಟದ ಧರ್ಮದರ್ಶಿ ಭಾಗ್ಯಮ್ಮ, ದೇವರತ್ನ ಫೌಂಡೇಶನ್ ಅಧ್ಯಕ್ಷ ಎಂ.ಸಿ ಹುಂಡಿ ಶಿವಪ್ರಸಾದ್, ಗ್ರಾಪಂ ಮಾಜಿ ಅಧ್ಯಕ್ಷ ಹಾರೋಪುರ ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ರಾಯರಹುಂಡಿ ರವಿ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಕುಪ್ಯ ಗ್ರಾಪಂ ಮಾಜಿ ಅಧ್ಯಕ್ಷ ರಘು, ಪ.ಜಾತಿ ಘಟಕದ ಅಧ್ಯಕ್ಷ ಸೋಮಸುಂದರ, ಅಹಿಂದ ಜವರಪ್ಪ, ತಾಪಂ ಮಾಜಿ ಅಧ್ಯಕ್ಷ ರಮೇಶ್, ಪುರಿ ನಟರಾಜು, ಅಪ್ಸದ್ ಖಾನ್, ಕೃಷ್ಣಮೂರ್ತಿ, ಮೋಸಿನ್ ಖಾನ್, ಎರಡೂ ಬ್ಲಾಕ್‌ಗಳ ಅಧ್ಯಕ್ಷರು, ಸದಸ್ಯರು, ಮುಖಂಡರು ಭಾಗವಹಿಸಿದ್ದರು.

ಶಾಸಕ ದರ್ಶನ್ ಧ್ರುವನಾರಾಯಣ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ

ಮಲ್ಕುಂಡಿ: ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಹೆಡಿಯಾಲ ಗ್ರಾಪಂ ಮಾಜಿ ಅಧ್ಯಕ್ಷ ನೆಹಮತ್ ಉಲ್ಲಾಖಾನ್ ಒತ್ತಾಯಿಸಿದ್ದಾರೆ.



ನೆಹಮತ್

ಈ ಸಂಬಂಧ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಸೇವಕರಾಗಿ ಪಕ್ಷ ಅವರಿಗೆ ವಹಿಸಿದ ಹುದ್ದೆಯನ್ನು ನಿಷ್ಠೆಯಿಂದ ನಿಭಾಯಿಸಿ ರಾಜ್ಯದ ಮೂಲೆ ಮೂಲೆಗೂ ಸಂಚರಿಸಿ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಿದ್ದಾರೆ. ಜೊತೆಗೆ ರಾಜ್ಯ ಹಾಗೂ ರಾಷ್ಟ್ರ ರಾಜಕಾರಣಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. 2 ಬಾರಿ ಸಂಸದರಾಗಿ ಚಾಮರಾಜನಗರ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡಿ ರಾಜ್ಯದಲ್ಲೇ ಅತ್ಯುತ್ತಮ ಸಂಸದರು ಎಂದು ಹೆಸರು ಪಡೆದಿದ್ದ ಧ್ರುವನಾರಾಯಣ್ ಅವರು ನಮ್ಮನ್ನು ಅಗಲಿದ್ದಾರೆ. ಪ್ರಸ್ತುತ ಅವರು ಜೀವಂತವಾಗಿದ್ದರೇ ಉತ್ತಮ ಸ್ಥಾನದಲ್ಲಿ ಇರುತ್ತಿದ್ದರು. ಅವರ ಅಕಾಲಿಕ ಮರಣದಿಂದಾಗಿ ಅವರ ಪುತ್ರ ದರ್ಶನ್ ಧ್ರುವನಾರಾಯಣ್ ಅವರು ರಾಜಕೀಯ ಪ್ರವೇಶಿಸಿ ಪ್ರಪ್ರಥಮ ಬಾರಿಗೆ ಶಾಸಕರಾಗಿ ಕಳೆದ 3 ವರ್ಷದಲ್ಲಿ ಕ್ಷೇತ್ರದ ಅಭಿವೃದ್ಧಿ ಸೇರಿದಂತೆ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ ತಂದೆ ಹಾದಿಯಲ್ಲೇ ನಡೆಯುತ್ತಿದ್ದಾರೆ. ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಮಾದರಿಯಾಗಿ ಅಭಿವೃದ್ಧಿ ಪಡಿಸುತ್ತಿದ್ದಾರೆ ಎಂದ ಅವರು ಹೆಚ್.ಡಿ.ಕೋಟೆ ಶಾಸಕರಾದ ಅನಿಲ್ ಚಿಕ್ಕಮಾದು ಅವರು ಸಹ ಶಾಸಕರಾಗಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಮುಂದಿನ ದಿನಗಳಲ್ಲಿ ದರ್ಶನ್ ಹಾಗೂ ಅನಿಲ್ ಅವರು ಜೋಡೆತ್ತಾಗಿ ಪಕ್ಷ ಸಂಘಟಿಸುವುದರಿಂದ ಅವರಿಗೆ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಬೋನಿಗೆ ಬಿದ್ದ ಹೆಣ್ಣು ಚಿರತೆ

ಹೆಚ್.ಡಿ.ಕೋಟೆ, ಮೇ 31– ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಮೂರು ವರ್ಷದ ಹೆಣ್ಣು ಚಿರತೆ ಬಿದ್ದಿದೆ.

ತಾಲೂಕಿನ ಭೋಗೇಶ್ವರ ಕಾಲೋನಿ ನಿವಾಸಿ ಶಿವಲಿಂಗೇಗೌಡ ಎಂಬುವರ ಜಮೀನಿನಲ್ಲಿ ಕಳೆದ ಒಂದು ವಾರದ ಹಿಂದೆ ಇರಿಸಿದ್ದ ಬೋನಿನಲ್ಲಿ ಮೂರು ವರ್ಷದ ಹೆಣ್ಣು ಚಿರತೆ ಸೆರೆಯಾಗಿದೆ.


ಹಲವು ತಿಂಗಳಿಂದ ಈ ಭಾಗದಲ್ಲಿ ಚಿರತೆ ಹಾವಳಿ ಹೆಚ್ಚಾದ ಹಿನ್ನೆಲೆಯಲ್ಲಿ ರೈತರು ಚಿರತೆಯನ್ನು ಸೆರೆ ಹಿಡಿಯುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದ್ದರು. ರೈತರ ಮನವಿಗೆ ಸ್ಪಂದಿಸಿದ ಅಧಿಕಾರಿಗಳು ಜಮೀನಿನಲ್ಲಿ ಬೋನ್ ಇರಿಸಿದ್ದರು. ಅದರಂತೆ ಚಿರತೆ ಬೋನಿಗೆ ಬಿದ್ದಿದ್ದು, ರೈತ ಶಿವಲಿಂಗೇಗೌಡ ಎಂದಿನಂತೆ ಜಮೀನಿಗೆ ತೆರಳಿದ್ದ ವೇಳೆ ಬೋನಿಗೆ ಬಿದ್ದಿದ್ದ ಚಿರತೆ ಕಂಡು ತಕ್ಷಣ ಅರಣ್ಯ ಇಲಾಖೆಗೆ ತಿಳಿಸಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಚಿರತೆಯನ್ನು ರಕ್ಷಿಸಿ, ಆರೋಗ್ಯ ಪರಿಶೀಲಿಸಿದರು. ಬಳಿಕ ಚಿರತೆಯನ್ನು ಕಾಡಿಗೆ ಬಿಟ್ಟಿದ್ದಾರೆ. ಈ ವೇಳೆ ಎಸಿಎಫ್ ಸುಮಿತ್ರ, ಆರ್‌ಎಫ್‌ಓ ರಾಮಾಂಜು ನೇಯಲು, ಅರಣ್ಯ ಇಲಾಖೆ ಸಿಬ್ಬಂದಿ ಹಾಜರಿದ್ದರು.



ಬೋನಿನಲ್ಲಿ ಸೆರೆಯಾಗಿರುವ ಚಿರತೆ

ದೇವಾಲಯಗಳಲ್ಲಿ ಲಕ್ಷಾಂತರ ರೂ., ಚಿನ್ನಾಭರಣ ಕಳವು





ಶ್ರೀರಾಮ ಮತ್ತು ಬಸವೇಶ್ವರ ದೇವಸ್ಥಾನ.

ಹೆಚ್.ಡಿ.ಕೋಟೆ: ದೇವಾಲಯಗಳ ಬಾಗಿಲು ಒಡೆದು ಲಕ್ಷಾಂತರ ರೂ. ಹಾಗೂ ಚಿನ್ನಾಭರಣ ದೋಚಿರುವ ಘಟನೆ ತಾಲೂಕಿನ ಚಿಕ್ಕಕೆರೆಯೂರು ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಚಿಕ್ಕಕೆರೆಯೂರು ಗ್ರಾಮದ ಗ್ರಾಮಸ್ಥರು ಒಗ್ಗೂಡಿ ಲಕ್ಷಾಂತರ ರೂ. ವೆಚ್ಚದಲ್ಲಿ ಗ್ರಾಮದಲ್ಲಿ ಶ್ರೀರಾಮ ಮತ್ತು ಬಸವೇಶ್ವರ ದೇವಸ್ಥಾನ ನಿರ್ಮಿಸಿದ್ದರು. ಇತ್ತೀಚೆಗೆ ದೇವಾಲಯಗಳನ್ನು ಉದ್ಘಾಟಿಸಲಾಗಿತ್ತು. ಅಲ್ಲದೇ ದೇವಾಲಯದ ಗೋಲಕದಲ್ಲಿ ಲಕ್ಷಾಂತರ ರೂ. ಸಂಗ್ರಹವಾಗಿತ್ತು ಎನ್ನಲಾಗಿದೆ. ಇದನ್ನು ಗಮನಿಸಿದ್ದ ದುಷ್ಕರ್ಮಿಗಳು ಶುಕ್ರವಾರ ರಾತ್ರಿ ಶ್ರೀರಾಮ ಮತ್ತು ಬಸವೇಶ್ವರ ದೇವಸ್ಥಾನದ ಬಾಗಿಲು ಒಡೆದು ದೇವರ ಮೇಲೆ ಹಾಕಿದ್ದ ಚಿನ್ನಾಭರಣ ಹಾಗೂ ಗೋಲಕದಲ್ಲಿದ್ದ ಹಣವನ್ನು ದೋಚಿ ಪರಾರಿಯಾಗಿದ್ದಾರೆ. ಶನಿವಾರ ಮುಂಜಾನೆ ಎಂದಿನಂತೆ ಪೂಜೆ ಸಲ್ಲಿಸಲು ಅರ್ಚಕ ನಂಜಪ್ಪ ಆಗಮಿಸಿದಾಗ ಕಳ್ಳತನ ನಡೆದಿರುವುದು ಬೆಳಕಿಗೆ ಬಂದಿದ್ದು, ಕೂಡಲೇ ಗ್ರಾಮಸ್ಥರಿಗೆ ಹಾಗೂ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಎಸ್‌ಐ ಸುರೇಶ್ ನಾಯಕ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಾ.ಹೆಚ್.ಸಿ.ಮಹದೇವಪ್ಪಗೆ ಡಿಸಿಎಂ, ಸಚಿವ ಸ್ಥಾನ ನೀಡುವಂತೆ

ಇಂದು ಮೈಸೂರಿನಲ್ಲಿ ಬೃಹತ್ ಪ್ರತಿಭಟನೆ

ತಿ.ನರಸೀಪುರ: ಸಚಿವ ಸಂಪುಟದಲ್ಲಿ ಹಿರಿಯರಾದ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಕೈ ಬಿಟ್ಟಿರುವುದಕ್ಕೆ ಹೈಕಮಾಂಡ್ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಪಕ್ಷದ ಕಚೇರಿಯಲ್ಲಿ ಭಾನುವಾರ ಸಭೆ ನಡೆಸಿ, ಉಗ್ರ ಹೋರಾಟ ನಡೆಸಲು ತೀರ್ಮಾನಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಜಮಾಯಿಸಿದ ಕಾರ್ಯಕರ್ತರು ಹಾಗೂ ಮುಖಂಡರು ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಈ ಭಾಗದ ಹಿರಿಯ ನಾಯಕರಾಗಿರುವ ಮಹದೇವಪ್ಪ ಅವರನ್ನು ಮರೆತಿರುವ ಪಕ್ಷದ ನಾಯಕರ ವಿರುದ್ಧ ಆಕ್ರೋಶ ಹೊರಹಾಕಿದರಲ್ಲದೆ, ಉಪ ಮುಖ್ಯಮಂತ್ರಿ ಇಲ್ಲವೇ ಉನ್ನತ ಖಾತೆ ಸಚಿವ ಸ್ಥಾನ ನೀಡುವಂತೆ ಪ್ರತಿಭಟನೆ ನಡೆಸಲು ನಿರ್ಧರಿಸಿದರು.

ತಾಪಂ ಮಾಜಿ ಅಧ್ಯಕ್ಷ ಕುಕ್ಕೂರು ಗಣೇಶ್ ಮಾತನಾಡಿ, ಡಾ.ಹೆಚ್.ಸಿ. ಮಹದೇವಪ್ಪ ಅವರು ಡಿಸಿಎಂ ಇಲ್ಲವೇ ಮತ್ತೆ ಸಚಿವರಾಗಬೇಕು. ಇದು ಲಕ್ಷಾಂತರ ಕಾರ್ಯಕರ್ತರ ಹಕ್ಕೋತ್ತಾಯ. ಮೊದಲ ಹಂತದಲ್ಲಿ ಜೂ.1 ರಂದು ಮಧ್ಯಾಹ್ನ 12 ಗಂಟೆಗೆ ಮೈಸೂರು ಟೌನ್ ಹಾಲ್ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಮುಂಭಾಗ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. 2ನೇ ದಿನ ಹಲವು ಜಿಲ್ಲೆಗಳ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟಿಸುತ್ತೇವೆ ಎಂದರು.



ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಉಪ ಮುಖ್ಯಮಂತ್ರಿ ಇಲ್ಲವೇ ಸಚಿವ ಸ್ಥಾನ ನೀಡುವಂತೆ ಮುಖಂಡರು ಒತ್ತಾಯಿಸಿದರು.

ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವೀರೇಂದ್ರ ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಉಮೇಶ್, ಬಿ.ಬಸವರಾಜು, ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಚನ್ನಕೇಶವ, ಜಿಪಂ ಮಾಜಿ ಸದಸ್ಯರಾದ ಹೊನ್ನನಾಯಕ, ಸೋಸಲೆ ಮಹದೇವಸ್ವಾಮಿ, ಮಂಡಲ ಪಂಚಾಯಿತಿ ಮಾಜಿ ಪ್ರಧಾನ ಹೆಚ್.ವಿ.ಶೇಷಾದ್ರಿ, ಬನ್ನೂರು ಪುರಸಭಾ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಮಾಜಿ ಉಪಾಧ್ಯಕ್ಷರಾದ ಬಿ.ಸಿ.ಪಾರ್ಥಸಾರಥಿ, ಬಿ.ಎಸ್.ರಾಮಲಿಂಗೇಗೌಡ, ತಾಪಂ ಮಾಜಿ ಸದಸ್ಯರಾದ ರಾಮಲಿಂಗಯ್ಯ, ದೊಡ್ಡಮೂಲಗೂಡು ಸ್ವಾಮಿಗೌಡ, ನರಸಿಂಹ ಮಾದನಾಯಕ, ರಂಗಸ್ವಾಮಿ, ಡೈರಿ ಅಧ್ಯಕ್ಷ ಕುಮಾರ್, ಪಪಂ ಮಾಜಿ ಅಧ್ಯಕ್ಷ ನಾಗೇಶ, ಮಾಜಿ ಹಳೇ ಹೆಮ್ಮಿಗೆ ಸೋಮಣ್ಣ, ಎಂ.ಬಿ.ಸಾಗರ್, ಅನುಪ್ ಗೌಡ, ಅಶೋಕ್, ಮಂಜು ಸೇರಿದಂತೆ ಇತರರಿದ್ದರು.

ಎಸ್.ಹೆಚ್.ಲಿಂಗರಾಜು ನಿಧನ



ಸರಗೂರು: ಪಟ್ಟಣದ 9ನೇ ವಾರ್ಡ್ ನಿವಾಸಿ, ಸರಗೂರು ತಾಲೂಕು ವಾಹನ ಚಾಲಕರ ಸಂಘದ ಗೌರವಾಧ್ಯಕ್ಷ ಎಸ್.ಹೆಚ್.ಲಿಂಗರಾಜು(52) ಶನಿವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಪಟ್ಟಣದ ನಾಯಕ ಸಮಾಜದ ರುದ್ರಭೂಮಿಯಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿತು.

‘ಮನ್ ಕಿ ಬಾತ್’ನಲ್ಲಿ ಯುವ ಕ್ರೀಡಾಪಟುಗಳ ಸಾಧನೆ ಬಣ್ಣಿಸಿದ ಪ್ರಧಾನಿ ನರೇಂದ್ರ ಮೋದಿ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮನ್ ಕೀ ಬಾತ್‌ನ 134ನೇ ಸಂಚಿಕೆಯಲ್ಲಿ ಭಾರತೀಯ ಕ್ರೀಡಾ ಪ್ರತಿಭೆಗಳ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿ, ಕೆಲ ಸಾಧಕರೊಂದಿಗೆ ಸಂವಾದ ನಡೆಸಿದರು.

ಕ್ರೀಡಾ ಜಗತ್ತಿನಲ್ಲಿ ಹೊಸ ದಾಖಲೆಗಳನ್ನು ಬರೆದ ಭಾರತದ ಯುವ ಪ್ರತಿಭೆಗಳನ್ನು ಮುಕ್ತಕಂಠದಿಂದ ಶ್ಲಾಘಿಸುವುದರ ಜೊತೆಗೆ ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಮರಳಿ ದೇಶಕ್ಕೆ ತರುವಲ್ಲಿ ಯಶಸ್ವಿಯಾಗಿರುವುದಾಗಿ ತಿಳಿಸಿದರು.

ಇತ್ತೀಚಿನ ಕ್ರೀಡಾಕೂಟಗಳಲ್ಲಿ ಅದ್ಭುತ ಪ್ರದರ್ಶನ ನೀಡಿ, ಹೊಸ ಇತಿಹಾಸ ಸೃಷ್ಟಿಸಿದ ಪ್ರಮುಖ ಅಥ್ಲೀಟ್‌ಗಳಾದ ಗುರಿಂದರ್‌ವೀರ್ ಸಿಂಗ್, ವಿಶಾಲ್ ಕುಮಾರ್, ತೇಜಸ್ವಿನ್ ಶಂಕರ್, ದೇವ್ ಮೀನಾ ಅವರ ಸಾಧನೆಯನ್ನು ಪ್ರಶಂಸಿಸಿದರು.



ನಮ್ಮ ಯುವ ಕ್ರೀಡಾಪಟುಗಳು ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಹಳೆಯ ದಾಖಲೆಗಳನ್ನು ಧೂಳೀಪಟ ಮಾಡುತ್ತಿದ್ದು, ಪ್ರತಿಯೊಬ್ಬ ಸಾಧಕನ ಯಶೋಗಾಥೆಯೂ ಭಾರತದ ಕ್ರೀಡಾ ಭವಿಷ್ಯದ ಬಲವಾದ ಹೆಜ್ಜೆಯಾಗಿದೆ ಎಂದು ಸಂಭ್ರಮಪಟ್ಟರು.

ಸಾಂಸ್ಕೃತಿಕ ರಂಗದಲ್ಲಿ ಭಾರತ ಸಾಧಿಸಿರುವ ಮತ್ತೊಂದು ದೊಡ್ಡ ಯಶಸ್ಸನ್ನು ಪ್ರಕಟಿಸಿದ ಪ್ರಧಾನಿ ಮೋದಿ, ತಮಿಳುನಾಡಿನ ಪ್ರಸಿದ್ಧ ಚೋಳರ ರಾಜವಂಶದ ಕಾಲಕ್ಕೆ ಸೇರಿದ ಪುರಾತನ ಮತ್ತು ಅತ್ಯಂತ ಅಪರೂಪದ ಕಲಾಕೃತಿಯನ್ನು ಯಶಸ್ವಿಯಾಗಿ ಭಾರತಕ್ಕೆ ಮರಳಿ ತರಲಾಗಿದೆ. ಈ ಕಲಾಕೃತಿಯನ್ನು ಈ ಹಿಂದೆ ಭಾರತದಿಂದ ಕಾನೂನುಬಾಹಿರವಾಗಿ ವಿದೇಶಕ್ಕೆ ಸಾಗಿಸಲಾಗಿತ್ತು. ಜಾಗತಿಕ ರಾಜತಾಂತ್ರಿಕ ಪ್ರಯತ್ನಗಳು ಮತ್ತು ಕಟ್ಟುನಿಟ್ಟಾದ ನಿಯಮಗಳ ಮೂಲಕ ಇದನ್ನು ತಾಯ್ನಾಡಿಗೆ ತರಲಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಭಾರತದಿಂದ ಕಳುವಾಗಿದ್ದ ನೂರಾರು ಪವಿತ್ರ ವಿಗ್ರಹಗಳು ಮತ್ತು ಕಲಾಕೃತಿಗಳನ್ನು ಜಗತ್ತಿನ ವಿವಿಧ ದೇಶಗಳಿಂದ ಭಾರತಕ್ಕೆ ವಾಪಸ್ ತರಲಾಗುತ್ತಿದ್ದು, ಇದು ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಗೌರವಿಸುವ ಕೆಲಸವಾಗಿದೆ ಎಂದು ನುಡಿದರು.

ಸಂಸದ ಯದುವೀರ್ ನೇತೃತ್ವದಲ್ಲಿ ಮನ್ ಕೀ ಬಾತ್ ವೀಕ್ಷಣೆ



ನಾಗನಹಳ್ಳಿ ಗ್ರಾಮದಲ್ಲಿ ಭಾನುವಾರ ಸಂಸದ ಯದುವೀರ್ ಒಡೆಯರ್ ನೇತೃತ್ವದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ 134ನೇ ಮನ್ ಕೀ ಬಾತ್ ಕಾರ್ಯಕ್ರಮ ವೀಕ್ಷಣೆ ಮಾಡಲಾಯಿತು.

ಮೈಸೂರು,ಮೇ 31(ಪಿಎಂ)– ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ವತಿಯಿಂದ ನಾಗನಹಳ್ಳಿ ಗ್ರಾಮದಲ್ಲಿ ಭಾನುವಾರ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ನೇತೃತ್ವದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ 134ನೇ ಮನ್ ಕೀ ಬಾತ್ ಕಾರ್ಯಕ್ರಮ ವೀಕ್ಷಣೆ ಮಾಡಲಾಯಿತು.

ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು 134ನೇ ಮನ್ ಕೀ ಬಾತ್ ಕಾರ್ಯಕ್ರಮದ ಮೂಲಕ ದೇಶದ ಜನತೆಯನ್ನು ಉದ್ದೇಶಿಸಿ ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ಪ್ರತಿಯೊಬ್ಬ ನಾಗರಿಕನ ಪಾತ್ರ ಮಹತ್ವದ್ದಾಗಿದೆ ಎಂದು ಕರೆ ನೀಡಿದರು. ದೇಶದ ಸಾಂಸ್ಕೃತಿಕ ಪರಂಪರೆ, ಪರಿಸರ ಸಂರಕ್ಷಣೆ, ಯುವ ಜನರ ಸಾಧನೆ, ಮಹಿಳಾ ಸಬಲೀಕರಣ, ಸ್ವಚ್ಛತೆ, ಆತ್ಮನಿರ್ಭರ ಭಾರತ ಹಾಗೂ ಸಾಮಾಜಿಕ ಜವಾಬ್ದಾರಿಗಳ ಕುರಿತು ತಮ್ಮ ಮನದಾಳದ ವಿಚಾರಗಳನ್ನು ಹಂಚಿಕೊಂಡರು.

ದೇಶದ ವಿವಿಧ ಭಾಗಗಳಲ್ಲಿ ಸಾಮಾನ್ಯ ನಾಗರಿಕರು ಕೈಗೊಂಡಿರುವ ಅಸಾಮಾನ್ಯ ಸಾಧನೆಗಳನ್ನು ಉಲ್ಲೇಖಿಸಿದ ಪ್ರಧಾನಿ ಮೋದಿ ಅವರು, ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಲು ಜನಸಾಮಾನ್ಯರ ಪಾಲ್ಗೊಳ್ಳುವಿಕೆ ಅತ್ಯಗತ್ಯ ಎಂದು ತಿಳಿಸಿದರು.

ಪರಿಸರ ಸಂರಕ್ಷಣೆ, ನೀರಿನ ಉಳಿತಾಯ, ಸ್ವಚ್ಛತಾ ಅಭಿಯಾನ ಹಾಗೂ ಸ್ಥಳೀಯ ಉತ್ಪನ್ನಗಳಿಗೆ ಉತ್ತೇಜನ ನೀಡುವ ಮೂಲಕ ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ದೇಶದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವ ಯುವಜನರು, ಮಹಿಳೆಯರು, ರೈತರು, ವಿಜ್ಞಾನಿಗಳು ಹಾಗೂ ಸಾಮಾಜಿಕ ಕಾರ್ಯಕರ್ತರ ಸೇವೆಯನ್ನು ಪ್ರಧಾನಿ ಮೋದಿ ಅವರು ಶ್ಲಾಘಿಸಿದರು. ಹೊಸ ಆವಿಷ್ಕಾರಗಳು, ತಂತ್ರಜ್ಞಾನ ಮತ್ತು ಜನಸೇವೆಯ ಮೂಲಕ ಭಾರತವನ್ನು ವಿಶ್ವದ ಮುಂಚೂಣಿ ರಾಷ್ಟ್ರವನ್ನಾಗಿ ರೂಪಿಸುವ ಸಂಕಲ್ಪವನ್ನು ಅವರು ವ್ಯಕ್ತಪಡಿಸಿದರು.

134ನೇ ಮನ್ ಕೀ ಬಾತ್ ಕಾರ್ಯಕ್ರಮವನ್ನು ಚಾಮುಂಡೇಶ್ವರಿ ಕ್ಷೇತ್ರದ ನಾಗನಹಳ್ಳಿ ಗ್ರಾಮದ ಬಿಜೆಪಿ ಮುಖಂಡ ರಮೇಶ್ ಅವರ ನಿವಾಸದಲ್ಲಿ ವೀಕ್ಷಿಸಲಾಯಿತು. ಚಾಮುಂಡೇಶ್ವರಿ ಕ್ಷೇತ್ರ ಗ್ರಾಮಾಂತರ ಮಂಡಲ ಬಿಜೆಪಿ ಅಧ್ಯಕ್ಷ ವೈ.ಟಿ.ರವಿ ಲಕ್ಷ್ಮೀಪುರ, ಬಿಜೆಪಿ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಾರ್ಗದರ್ಶನ ದೇಶದ ಅಭಿವೃದ್ಧಿಗೆ ಪ್ರೇರಣೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು ಎಂದು ಪ್ರಕಟಣೆ ತಿಳಿಸಿದೆ.

ಬಿಜೆಪಿ ಮುಖಂಡರಾದ ಎಸ್.ಆರ್.ಗೋಪಾಲ್ ರಾವ್, ಹಿನಕಲ್ ಶ್ರೀನಿವಾಸ್, ನಾಗನಹಳ್ಳಿ ರಮೇಶ್, ಗೆಜ್ಜಗಳ್ಳಿ ಮಹೇಶ್, ಶಿವಕುಮಾರ್ ಚಿಕ್ಕಾನ್ಯ, ಹೇಮಂತ್ ಕುಮಾರ್, ಹಿನಕಲ್ ಗಣೇಶ್, ಬೆಲವತ್ತ ಸುರೇಶ್, ದಾರಿಪುರ ಡಿ.ಚಂದ್ರಶೇಖರ್, ಪ್ರಮೀಳಾ ನಾಯಕ್, ಜ್ಯೋತಿ, ನಟರಾಜು, ಆಲನಹಳ್ಳಿ ಮಹದೇವಸ್ವಾಮಿ, ಸುನೀಲ್, ಕೃಷ್ಣ ಕುಮಾರ್, ಶ್ರೀಕಂಠಸ್ವಾಮಿ, ಅಮರ್ ಮತ್ತಿತರರು ಹಾಜರಿದ್ದರು.

ಸೇವಾ ಕಾರ್ಯಗಳೊಂದಿಗೆ ಎಸ್.ಬಸವರಾಜು ಜನ್ಮದಿನ ಆಚರಣೆ; ಸಂಭ್ರಮ

ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಸೇರಿ ಗಣ್ಯರಿಂದ ಶುಭ ಹಾರೈಕೆ

ಮೈಸೂರು,ಮೇ 31(ಪಿಎಂ)– ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದ ಸಂಸ್ಥಾಪಕ ಎಸ್.ಬಸವರಾಜು ಅವರ ಹುಟ್ಟುಹಬ್ಬವನ್ನು ಸೇವಾ ಕಾರ್ಯಗಳೊಂದಿಗೆ ಭಾನುವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಮುಖ್ಯ ಶಾಖೆಯ ಆವರಣದಲ್ಲಿ ಸಾವಿರಾರು ಜನರಿಗೆ ಅನ್ನದಾನ ಮಾಡಲಾಯಿತು. ಜೊತೆಗೆ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ನೂರಾರು ಜನರು ರಕ್ತದಾನ ಮಾಡಿದಾರು. ಬಸವಮಾರ್ಗದ ನಾಲ್ಕು ಶಾಖೆಯಲ್ಲೂ ಬಸವರಾಜು ಅವರಿಂದ ಕೇಕ್ ಕಟ್ ಮಾಡಿಸಿ ಹಾರ, ತುರಾಯಿ ಹಾಕಿ ಅಭಿಮಾನಿಗಳು ಸನ್ಮಾನ ಮಾಡಿದರು. ಪಟಾಕಿ ಹೊಡೆದು ಸಂಭ್ರಮಿಸಿದರು.


ಮುಖ್ಯ ಶಾಖೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಗಣ್ಯರು ಭಾಗವಹಿಸಿ ಅವರಿಗೆ ಶುಭ ಕೋರಿದರು. ಇದೇ ವೇಳೆ ಮಾತನಾಡಿದ ಎಸ್.ಬಸವರಾಜು ಅವರು, ನಾನು 17 ವರ್ಷಗಳು ಕುಡಿತದ ಚಟಕ್ಕೆ ದಾಸನಾಗಿದ್ದೆ. ಆ ಸಮಯದಲ್ಲಿ ಎಲ್ಲವನ್ನೂ ಕಳೆದುಕೊಂಡಿದ್ದೆ. ಆ ಸಂದರ್ಭದಲ್ಲಿ ನನ್ನ ಹುಟ್ಟುಹಬ್ಬವನ್ನು ಮದ್ಯಪಾನದೊಂದಿಗೆ ಆಚರಿಸಲಾಗುತ್ತಿತ್ತು. ನಾನು ಕುಡಿದು, ಇತರರಿಗೂ ಕುಡಿಸುತ್ತಿದ್ದ ಆಚರಣೆಯಾಗಿತ್ತು. ಆದರೆ ಈಗ ವ್ಯಸನ ಬಿಟ್ಟ ಮೇಲೆ ನನ್ನ ಜನ್ಮದಿನದ ಪರಿಕಲ್ಪನೆ ಬದಲಾಗಿದೆ. ಸ್ನೇಹಿತರು, ಸಿಬ್ಬಂದಿ ಹಾಗೂ ಅಭಿಮಾನಿಗಳು ವಿಶೇಷವಾಗಿ ಆಚರಣೆ ಮಾಡುತ್ತಾರೆ. ಕುಡಿತ ಬಿಟ್ಟರೆ ಎಲ್ಲವೂ ಸಿಗುತ್ತದೆ ಎನ್ನುವುದಕ್ಕೆ ನಾನೇ ಸ್ಪಷ್ಟ ನಿದರ್ಶನ. ವ್ಯಸನಮುಕ್ತ ಜೀವನ ಮಾಡುವುದೇ ದೊಡ್ಡ ಸಾಧನೆ. ನನ್ನ ಜನ್ಮದಿನವನ್ನು ಈ ದಿನ ವಿಶೇಷವಾಗಿ ಆಚರಿಸಲಾಗುತ್ತದೆ. ಇದಕ್ಕೆ ನಾನು ಸದಾಕಾಲ ಋಣಿಯಾಗಿರುತ್ತೇನೆ ಎಂದು ಭಾವುಕರಾದರು.

ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಬಸವಣ್ಣ ಅವರು ವ್ಯಸನಮುಕ್ತ ಸಮಾಜ ನಿರ್ಮಿಸಲು ಹಗಲಿರುಳೆನ್ನದೆ ಶ್ರಮಿಸುತ್ತಿದ್ದಾರೆ. ಉಚಿತವಾಗಿ ಕುಡಿತ ಬಿಡಿಸುವ ಶಿಬಿರಗಳನ್ನು ಆಯೋಜಿಸಿ ವ್ಯಸನಿಗಳನ್ನು ಸರಿದಾರಿಗೆ ತರುತ್ತಿದ್ದಾರೆ. ಅವರ ಕಾಯಕ ನಿರಂತರವಾಗಿ ಸಾಗಲಿ ಎಂದು ಆಶಿಸಿದರು.

ಹುಣಸೂರು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಬಸವಣ್ಣ ಅವರು ತಾವು ಅನುಭವಿಸಿದ ಕಷ್ಟವನ್ನು ಮತ್ತೊಬ್ಬರು ಅನುಭವಿಸಬಾರದು ಎಂದು ಮನಗಂಡು ಬಸವಮಾರ್ಗ ಎನ್ನುವ ಸಂಸ್ಥೆಯನ್ನು ಸ್ಥಾಪಿಸಿ ವ್ಯಸನಮುಕ್ತ ಸಮಾಜ ನಿರ್ಮಿಸುತ್ತಿದ್ದಾರೆ. ದೇವರು ಅವರಿಗೆ ಮತ್ತಷ್ಟು ಶಕ್ತಿ, ಸಾಮರ್ಥ್ಯ ಕೊಟ್ಟು ಕಾಪಾಡಲಿ ಎಂದು ಆಶಯ ವ್ಯಕ್ತಪಡಿಸಿದರು.



ಹೆಬ್ಬಾಳು ಬಸವಮಾರ್ಗ ವ್ಯಸನಮುಕ್ತ ಕೇಂದ್ರದ ಆವರಣದಲ್ಲಿ ಎಸ್.ಬಸವರಾಜು ಅವರ ಜನ್ಮದಿನವನ್ನು ಸೇವಾ ಕಾರ್ಯಗಳೊಂದಿಗೆ ಆಚರಿಸಲಾಯಿತು.



ಹುಣಸೂರು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಸನ್ಮಾನಿಸಿ ಶುಭ ಕೋರಿದರು.

ಬಿಜೆಪಿ ಮುಖಂಡ ಕಿರಣ್‌ಗೌಡ ಮಾತನಾಡಿ, ಬಸವಣ್ಣ (ಎಸ್.ಬಸವರಾಜು) ಅವರು ಸಮಾಜಮುಖಿ ಕೆಲಸಗಳಿಗೆ ಹೆಸರುವಾಸಿ. ವ್ಯಸನಮುಕ್ತ ಸಮಾಜಕ್ಕೆ ಉಚಿತವಾಗಿ ಶಿಬಿರವನ್ನು ಆಯೋಜಿಸುವುದರೊಂದಿಗೆ ಮಕ್ಕಳಿಗೆ ಉಚಿತವಾಗಿ ಬೇಸಿಗೆ ಶಿಬಿರ ಆಯೋಜಿಸಿ ಮಕ್ಕಳಿಗೆ ನೈತಿಕ ಪ್ರಜ್ಞೆ ಮೂಡಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಗ್‌ಬಾಸ್ ಖ್ಯಾತಿಯ ವರ್ತೂರ್ ಸಂತೋಷ್ ಮಾತನಾಡಿ, ಬಸವಣ್ಣ ಅವರ ಸಮಾಜಮುಖಿ ಕಾರ್ಯ ಎಲ್ಲರಿಗೂ ಪ್ರೇರಣೆಯಾಗಲಿ. ಸಮಾಜ ಕಟ್ಟುವ ಅವರ ಕಾಯಕ ನಿರಂತರವಾಗಿ ಸಾಗಲಿ ಎಂದು ಆಶಿಸಿದರು.

ಕಾಮಿಡಿ ಕಿಲಾಡಿ ಖ್ಯಾತಿಯ ಹಿತೇಶ್ ಮಾತನಾಡಿ, ಬಸವಣ್ಣ ಅವರು ಸಮಾಜಮುಖಿ ಕೆಲಸಗಳಿಂದ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಬಡವರು ಮತ್ತು ತುಳಿತಕ್ಕೆ ಒಳಪಟ್ಟವರ ಸೇವೆ ಮಾಡುತ್ತಿರುವ ಅವರ ಕಾರ್ಯಕ್ಕೆ ಶುಭವಾಗಲಿ ಎಂದು ಹರಸಿದರು. ಕಾಮಿಡಿ ಕಿಲಾಡಿ ಖ್ಯಾತಿಯ ಸೂರಜ್ ಮಾತನಾಡಿ, ಬಸವಣ್ಣ ಅವರು ಸ್ನೇಹ ಜೀವಿಗಳು. ಎಲ್ಲರ ಹಿತಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಸಮಾಜ ಸೇವೆಗೆಂದೇ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ ಎಂದರು.



ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಹೂಗುಚ್ಛ ನೀಡಿ ಶುಭ ಹಾರೈಸಿದರು.

ಮೈಸೂರು ಮಿತ್ರ

ಸೋಮವಾರ 1 ಜೂನ್ 2026

ಮನುಷ್ಯರಂತೆ ಜಾನುವಾರುಗಳಿಗೂ 'ಆಧಾರ್ ಕಾರ್ಡ್'

ಜಾನುವಾರುಗಳಿಗೆ ಮಜಲ್ ಬಯೋಮೆಟ್ರಿಕ್ ಆಧಾರಿತ ಡಿಜಿಟಲ್ ಗುರುತಿನ ಸಂಖ್ಯೆ ನೀಡಲು ನಿರ್ಧಾರ

- ಮಂಡ್ಯ, ಬೆಂಗಳೂರಿನಲ್ಲಿ ಪ್ರಾಯೋಗಿಕ ಯಶಸ್ಸು
- ದೇಶದಲ್ಲೆ ಕರ್ನಾಟಕದಲ್ಲಿ ಮೊದಲ ಪ್ರಯೋಗ
- ಎಐ ಆಧಾರಿತ ಡಿಜಿಟಲ್ ವ್ಯವಸ್ಥೆ
- ಸ್ಕ್ಯಾನ್ ನಿಂದ ಜಾನುವಾರುಗಳ ಸಮಗ್ರ ವಿವರ ಕ್ಷಣ ಮಾತ್ರದಲ್ಲಿ ಲಭ್ಯ
- ವಂಚನೆ ತಪ್ಪಿಸಿ ಪಾರದರ್ಶಕತೆ ತರಲು ಹೊಸ ತಂತ್ರಜ್ಞಾನ ಪರಿಚಯ

ಮೈಸೂರು, ಮೇ31(ಬಿಎಲ್‌ಯು)– ಜಾನುವಾರುಗಳ ವಿಮೆ, ಸಾವಿಗೆ ಪರಿಹಾರ ಸೇರಿದಂತೆ ಇತರೆ ಮಾಹಿತಿಗಳನ್ನು ಟ್ರ್ಯಾಕ್ ಮಾಡಲು ಅನುಕೂಲವಾಗುವಂತೆ ಸರ್ಕಾರ ಮನುಷ್ಯರಿಗೆ ನೀಡುವ ಆಧಾರ್ ಕಾರ್ಡ್ ಮಾದರಿಯಲ್ಲಿಯೇ ಜಾನುವಾರುಗಳಿಗೆ ಮಜಲ್ ಬಯೋಮೆಟ್ರಿಕ್ಸ್ ಆಧಾರಿತ ಡಿಜಿಟಲ್ ಗುರುತಿನ ಸಂಖ್ಯೆ ನೀಡುವ ವಿಶಿಷ್ಟ ಯೋಜನೆಯನ್ನು ಮೈಸೂರು, ಮಂಡ್ಯ ಸೇರಿದಂತೆ ರಾಜ್ಯದೆಲ್ಲೆಡೆ ಜಾರಿಗೆ ತರಲು ಮುಂದಾಗಿದೆ. ಎಐ ಆಧಾರಿತ ನೂತನ ತಂತ್ರಜ್ಞಾನದಿಂದ ಜಾನುವಾರುಗಳ ವಿವರ ಕೈಬೆರಳಿನಲ್ಲಿ ದೊರೆಯಲಿದೆ.

ಆಧುನಿಕತೆ ತಂತ್ರಜ್ಞಾನದ ಕ್ರಾಂತಿಯಿಂದ ಹಲವು ವ್ಯವಸ್ಥೆಗಳು ಹೈಟೆಕ್ ಆಗುತ್ತಿದೆ. ಈಗ ಜಾನುವಾರುಗಳ ಮಾಹಿತಿ ಕೂಡ ಹೈಟೆಕ್ ಆಗುತ್ತಿದ್ದು, ಸ್ಕ್ಯಾನ್ ಮಾಡುತ್ತಿದ್ದಂತೆ ಎಲ್ಲಾ ವಿವರಗಳು ಸುಲಭವಾಗಿ ದೊರೆಯುವ ವಿಶಿಷ್ಟ ವ್ಯವಸ್ಥೆಯನ್ನು ಸರ್ಕಾರ ಪರಿಚಯಿಸುತ್ತಿದೆ.

ಪ್ರಸ್ತುತ ಜಾನುವಾರುಗಳ ಕಿವಿಗೆ 'ಇಯರ್ ಟ್ಯಾಗ್' ಅಳವಡಿಸಲಾಗಿದೆ. ಜಾನುವಾರುಗಳ ಆರೋಗ್ಯ ದಾಖಲೆಗಳನ್ನು ನಿರ್ವಹಿಸಲು, ವಿಮೆ ಪರಿಹಾರ ನೀಡಲು ಇದು ಸಹಾಯಕವಾಗುತ್ತದೆ. ಪ್ರತಿಯೊಂದು ಜಾನುವಾರುವಿಗೆ ಪ್ರತ್ಯೇಕ ಸಂಖ್ಯೆ ನೀಡಲಿದ್ದು, ಲಸಿಕೆ, ಚಿಕಿತ್ಸೆ, ಹುಟ್ಟಿದ ವರ್ಷ ಸೇರಿದಂತೆ ಇತರೆ ವಿವರಗಳು ಟ್ಯಾಗ್ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ. ಆದರೆ ಈಗ ರಾಜ್ಯ ಸರ್ಕಾರ ಜಾನುವಾರುಗಳಿಗೆ ಮಜಲ್ ಬಯೋಮೆಟ್ರಿಕ್ಸ್ ಆಧಾರಿತ ಗುರುತಿನ ವ್ಯವಸ್ಥೆ ಜಾರಿಗೊಳಿಸುತ್ತಿದೆ. ಬಾರ್ಕೋಡ್ ಆಧಾರಿತ ಈ ವ್ಯವಸ್ಥೆಯು ಜಾನುವಾರುಗಳ ಆಧಾರ್ ಕಾರ್ಡ್ ಆಗಲಿದೆ.

ಇಡೀ ದೇಶದಲ್ಲಿ ಮೊದಲ ಬಾರಿಗೆ ಕರ್ನಾಟಕ ಸರ್ಕಾರ ಈ ನೂತನ ತಂತ್ರಜ್ಞಾನವನ್ನು ಪರಿಚಯಿಸುತ್ತಿದೆ. ಬಯೋಮೆಟ್ರಿಕ್ ಅಥವಾ ಮಜಲ್ ಬಯೋಮೆಟ್ರಿಕ್ ತಂತ್ರಜ್ಞಾನ ಆಧಾರಿತ ಹೊಸ ವ್ಯವಸ್ಥೆಯಲ್ಲಿ ಜಾನುವಾರುಗಳಿಗೆ ಸಾಂಪ್ರದಾಯಿಕ ಇಯರ್– ಟ್ಯಾಗ್ ಬದಲಾಯಿಸಿ, ಎಐ ಆಧಾರಿತ ತಂತ್ರ ಜ್ಞಾನದ ಮೂಲಕ ಜಾನುವಾರುವನ್ನು ಸ್ಪಷ್ಟವಾಗಿ ಗುರುತಿಸಲು ಹಾಗೂ ಟ್ರ್ಯಾಕ್ ಮಾಡಲು ರಾಜ್ಯ ಸರ್ಕಾರ ಡಿಜಿಟಲ್ ಕ್ರಾಂತಿ ಮಾಡುತ್ತಿದೆ.

ಜಾನುವಾರುಗಳ ಮೂತಿಯ ರೇಖೆಗಳು ಅಥವಾ ಮಜಲ್ ಪ್ರಿಂಟ್ ಮನುಷ್ಯರ ಬೆರಳಚ್ಚಿನಂತೆ ವಿಶಿಷ್ಟವಾಗಿರುತ್ತದೆ. ಇದನ್ನು ಸ್ಕ್ಯಾನ್ ಮಾಡುವ ಮೂಲಕ ಪ್ರಾಣಿಗಳ ನಿಖರ ಗುರುತು ಪತ್ತೆ ಹಚ್ಚಬಹುದು.

ಈಗ ಮನುಷ್ಯರಿಗೆ ಆಧಾರ್ ಕಾರ್ಡ್ ಮಾಡುವಾಗ ಬಯೋ ಮೆಟ್ರಿಕ್ ಆಧಾರಿತವಾಗಿ ಬೆರಳಚ್ಚು, ಕಣ್ಣಿನ ದೃಷ್ಟಿ ರೇಖೆಗಳ ಕರಾರುವಕ್ಕಾಗಿ ಕಲೆ ಹಾಕಿ ಅದನ್ನು ಅವರ ಸಂಖ್ಯೆಯಲ್ಲಿ ದಾಖಲಿಸಲಾಗುತ್ತದೆ. ಇದರಿಂದ ಯಾವುದೇ ವ್ಯಕ್ತಿಯ ಆಧಾರ್ ಸಂಖ್ಯೆಯನ್ನು ನಮೂದಿಸಿದರೆ ಬೆರಳಚ್ಚು ಹಾಗೂ ಕಣ್ಣಿನ ದೃಷ್ಟಿಯಿಂದ ಅವರನ್ನು ಸುಲಭವಾಗಿ ಪತ್ತೆ ಮಾಡಬಹುದು.



ಇದೇ ಮಾದರಿಯಲ್ಲಿ ಜಾನುವಾರುಗಳಿಗೆ ಮೂತಿಯ ರೇಖೆಗಳ ಮೂಲಕ ಮಾಹಿತಿ ಕಲೆ ಹಾಕಿ ದಾಖಲಿಸಲಾಗುತ್ತದೆ. ನೂತನ ತಂತ್ರಜ್ಞಾನದ ಹೈಟೆಕ್ ಉಪಕರಣದಲ್ಲಿ ಜಾನುವಾರುವನ್ನು ಸ್ಕ್ಯಾನ್ ಮಾಡಿದರೆ ಆ ಪ್ರಾಣಿಯ ನಿಖರ ಗುರುತು ಪತ್ತೆ ಹಚ್ಚಬಹುದಾಗಿದೆ.

ಇದರಿಂದ ಜಾನುವಾರುಗಳ ಕಳ್ಳತನ ತಡೆಗಟ್ಟುವುದು, ಹೈಟೆಕ್ ವಿಮಾ ಸೌಲಭ್ಯಗಳನ್ನು ಪಾರದರ್ಶಕವಾಗಿ ಒದಗಲಿದೆ. ಬಹು ಮುಖ್ಯವಾಗಿ ಸರ್ಕಾರದ ಯೋಜನೆಯಲ್ಲಿ ನಡೆಯುವ ವಂಚನೆಗಳ ನಿಯಂತ್ರಣ, ಮೃತಪಡುವ ಜಾನುವಾರುಗಳ ವಿಮಾ ಸೌಲಭ್ಯವನ್ನು ಸುಲಭವಾಗಿ ನೀಡುವುದು ಸೇರಿದಂತೆ ಹಲವು ಸೌಲಭ್ಯಗಳು ಹೈಟೆಕ್ ತಂತ್ರಜ್ಞಾನದಿಂದ ದೊರೆಯಲಿದೆ.

ಇದಲ್ಲದೆ ಜಾನುವಾರು ಮಾಲೀಕರ ವಿವರ, ಜಾನುವಾರುಗಳ ಆರೋಗ್ಯ ತಪಾಸಣೆ, ಲಸಿಕೆ ಸೇರಿದಂತೆ ಸಮಗ್ರ ಮಾಹಿತಿಗಳು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿ ಟ್ರ್ಯಾಕ್ ಮಾಡಬಹುದಾಗಿದೆ. ಈ ವಿಧಾನದಿಂದ ಜಾನುವಾರವನ್ನು ಸ್ಕ್ಯಾನ್ ಮಾಡಿದರೆ ಅದರ ಸಂಪೂರ್ಣ ವಿವರ ಲಭ್ಯವಾಗುತ್ತದೆ.

ಇಡೀ ದೇಶದಲ್ಲಿ ಎಲ್ಲಾ ಜಾನುವಾರುಗಳ ಕಿವಿಗೆ ಇಯರ್ ಟ್ಯಾಗ್ ಅಳವಡಿಸಲಾಗುತ್ತಿದೆ. ಆದರೆ ಈಗ ಇಯರ್ ಟ್ಯಾಗ್‌ಗೆ ಪರ್ಯಾಯವಾಗಿ ಮಜಲ್ ಬಯೋಮೆಟ್ರಿಕ್ ನೂತನ ವ್ಯವಸ್ಥೆಯನ್ನು ಇಡೀ ದೇಶದಲ್ಲೆ ಮೊದಲ ಬಾರಿಗೆ ಕರ್ನಾಟಕದಲ್ಲಿ ಜಾರಿಗೊಳಿಸಲಾಗುತ್ತಿದೆ.

ನೂತನ ತಂತ್ರಜ್ಞಾನದಿಂದ ರೈತರಿಗೆ ಲಸಿಕೆ ದಿನಾಂಕಗಳು ಅವರ ಮೊಬೈಲ್‌ಗೆ ಎಸ್‌ಎಂಎಸ್ ಅಲರ್ಟ್ ಬರಲಿದೆ. ಇದರಿಂದ ಆಗ ತಾನೆ ಜನಿಸುವ ಕರುಗಳಿಗೂ ಡಿಜಿಟಲ್ ದಾಖಲೆ ಮಾಡಬಹುದಾಗಿದೆ. ಮೂಗಿನ ಫೋಟೋವನ್ನು ಸ್ಕ್ಯಾನ್ ಮಾಡುವ ಎಐ ಆಧಾರಿತ ಮಜಲ್ ಬಯೋಮೆಟ್ರಿಕ್ ಡಿಜಿಟಲ್ ತಂತ್ರಜ್ಞಾನದಿಂದ ಜಾನುವಾರುಗಳ ಟ್ರ್ಯಾಕಿಂಗ್ ಹಾಗೂ ದೃಢೀಕರಣದಲ್ಲಿ ಪಾರದರ್ಶಕತೆ ತರಬಹುದಾಗಿದೆ.

ಅಲ್ಲದೆ ಸ್ಕ್ಯಾನ್ ಮಾಡಿದ ಕೂಡಲೆ ಜಾನುವಾರು ಸಮಗ್ರ ಮಾಹಿತಿ ಪರದೆಯ ಮೇಲೆ ಕೂಡಲೆ ತೆರೆದಿಟ್ಟುಕೊಳ್ಳುತ್ತದೆ.

> "ಮಂಡ್ಯ ಹಾಗೂ ಬೆಂಗಳೂರಿನಲ್ಲಿ ಮಜಲ್ ಬಯೋಮೆಟ್ರಿಕ್ಸ್ ತಂತ್ರ ಜ್ಞಾನ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಪರಿಚಯಿಸಲಾಗಿತ್ತು. ಇದರಲ್ಲಿ ಯಶಸ್ಸು ಕೂಡ ದೊರೆತಿದೆ. ಆದರೂ ಕೆಲವು ತಾಂತ್ರಿಕ ಲೋಪಗಳಿದ್ದು, ಅದನ್ನು ಸರಿಪಡಿಸು ಕಾರ್ಯ ನಡೆಯುತ್ತಿದೆ.
>
> – ಡಾ. ನಾಗರಾಜ್, ಸಹಾಯಕ ನಿರ್ದೇಶಕ, ಪಶು ಸಂಗೋಪನಾ ಇಲಾಖೆ ಮೈಸೂರು.

ಬೆಂಗಳೂರನ್ನು ವಿಶ್ವದ ಎರಡನೆ ಸಿಲಿಕಾನ್ ವ್ಯಾಲಿ ಎನ್ನಲಾಗುತ್ತದೆ. ಈ ಹಿನ್ನೆಲೆಯಲ್ಲಿ ಬೆಂಗಳೂರನ್ನು ಸಿಲಿಕಾನ್ ಸಿಟಿ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ವಿಶ್ವದ ಪ್ರತಿಷ್ಠಿತ ಐಟಿ ಕಂಪನಿಗಳಿರುವ ಬೆಂಗಳೂರಿನಲ್ಲಿ ತಂತ್ರಜ್ಞಾನ ಸಂಶೋಧನೆಯ ಸಂಸ್ಥೆಗಳು ಕೂಡ ನೆಲೆಯೂರಿವೆ. ಇವುಗಳ ಸಹಕಾರದಿಂದ ರಾಜ್ಯ ಸರ್ಕಾರದ ಇ– ಆಡಳಿತ ಇಲಾಖೆ ನೂತನ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದೆ.

ನೂತನ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೊಳಿಸುವ ಸಂಬಂಧ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು ಸೇರಿದಂತೆ ಇತರೆ ಜಿಲ್ಲೆಗಳ ಪಶು ಸಂಗೋಪನಾ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಸಮಾಲೋಚನೆ ನಡೆಸಲಾಗಿದೆ.

ಪ್ರಾಯೋಗಿಕವಾಗಿ ಜಾರಿಗೊಳಿಸಿದ ವ್ಯವಸ್ಥೆಯಲ್ಲಿ ಕೆಲಲೋಪಗಳು ಕಂಡು ಬಂದಿದ್ದು, ಅದನ್ನು ಸರಿಪಡಿಸಿಕೊಂಡು ಎಲ್ಲಾ ಪಕ್ಕಾ ಆದ ಮೇಲೆ ರಾಜ್ಯಾದ್ಯಂತ ಇದನ್ನು ಪರಿಚಯಿಸಲು ಸರ್ಕಾರ ನಿರ್ಧರಿಸಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕೆಡಿ (ಕ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಬೆಲ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕಾಟಾಳನ್ (ಕ)	4 ಪ್ರದರ್ಶನಗಳು
ಲಿಡೋ	
ಆತುಡು(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ಮೈಸೂರಲ್ಲಿ ಅಖಿಲ ಭಾರತ ಅಂಚೆ ನೌಕರರ ಸಂಘದ 41ನೇ ದ್ವೈವಾರ್ಷಿಕ ಅಧಿವೇಶನ

ಹಿರಿಯರ ಶ್ರಮದಿಂದ ನಮಗೆಲ್ಲ ಉತ್ತಮ ಸಂಬಳ



ಅಖಿಲ ಭಾರತ ಅಂಚೆ ನೌಕರರ ಸಂಘದ ವತಿಯಿಂದ ನಡೆದ 41ನೇ ದ್ವೈವಾರ್ಷಿಕ ಅಧಿವೇಶನ

ಮೈಸೂರು, ಮೇ31(ಜಿಎ)–ಅಖಿಲ ಭಾರತ ಅಂಚೆ ನೌಕರರ ಸಂಘದ ವತಿಯಿಂದ 41ನೇ ದ್ವೈವಾರ್ಷಿಕ ಅಧಿವೇಶನ ನಡೆಸಲಾಯಿತು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಪ್ರಾದೇಶಿಕ ದೂರ ಸಂಪರ್ಕ ತರಬೇತಿ ಕೇಂದ್ರದಲ್ಲಿ ನಡೆದ ಅಧಿವೇಶನದಲ್ಲಿ ಮೈಸೂರು ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಜಿ.ಹರೀಶ್ ಮಾತನಾಡಿ, ಸಂಘ ಬೆಳವಣಿಗೆಗೆ ಎಲ್ಲಾ ಸದಸ್ಯರು ಶ್ರಮಿಸಬೇಕು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಸಲಹೆ ನೀಡಿದರು.

ವಿಭಾಗದ ಕಾರ್ಯದರ್ಶಿ ವನಜಾಕ್ಷಿ ಮಾತನಾಡಿ, ನಮ್ಮ ಸಂಘದ ಹಿರಿಯ ಸದಸ್ಯರನ್ನು ಈ ವೇಳೆ ನೆನಪಿಸಿಕೊಳ್ಳಬೇಕು. ಅವರ ಶ್ರಮದ ಪರಿಣಾಮ ಇಂದು ನಾವೆಲ್ಲರೂ ಇಲಾಖೆಯಲ್ಲಿ ನೌಕರರಾಗಿ ಉತ್ತಮ ಸಂಬಳ ಪಡೆದುಕೊಳ್ಳುತ್ತಿದ್ದೇವೆ ಎಂದು ಸ್ಮರಿಸಿದರು.

ಸಭೆಯಲ್ಲಿ ಅಖಿಲ ಭಾರತ ಅಂಚೆ ನೌಕರರ ಸಂಘದ ಉಪಾಧ್ಯಕ್ಷ ಎನ್.ಭೈರಯ್ಯ ಅಧ್ಯಕ್ಷತೆ ವಹಿಸಿದರು. ಈ ವೇಳೆ ಕರ್ನಾಟಕ ವಲಯ ಅಧ್ಯಕ್ಷ ರವಿ ಜಿ.ಪಾಟೀಲ್, ವಲಯ ಕಾರ್ಯದರ್ಶಿಗಳಾದ ರಾಘವೇಂದ್ರ, ರುದ್ರೇಶ್, ಸಂಘದ ಸದಸ್ಯರಾದ ರಂಗಸ್ವಾಮಿ, ಸಿ.ಆರ್.ಮೋಹನ್, ಬಿ.ವಿ.ರಘು ಗಿರಿಧರ್, ರಾಜಕುಮಾರ್, ಹೆಚ್.ಎಲ್.ಕೆಂಡಗಣ್ಣಸ್ವಾಮಿ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಹುಣಸೂರು ರಸ್ತೆಯಲ್ಲಿ ಕಾರು ಪಲ್ಟಿ; ಅದೃಷ್ಟವಶಾತ್ ಪ್ರಯಾಣಿಕರು ಪಾರು



ಹುಣಸೂರು ರಸ್ತೆಯಲ್ಲಿ ಅಪಘಾತಕ್ಕೀಡಾಗಿ ಕಾರು ಪಲ್ಟಿಯಾಗಿತ್ತು.

ಮೈಸೂರು,ಮೇ 31(ಪಿಎಂ)– ಮೈಸೂರಿನ ಹುಣಸೂರು ರಸ್ತೆಯಲ್ಲಿ ಕೇರಳ ಪ್ರಯಾಣಿಕರಿದ್ದ ಕಾರೊಂದು ರಸ್ತೆ ವಿಭಜಕದಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದ್ದು, ಅದೃಷ್ಟವಶಾತ್ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಯಾಣಿಕರು ಪಾರಾಗಿದ್ದಾರೆ.

ಇಲ್ಲಿನ ರುಚಿ ಹೋಟೆಲ್ ಸಮೀಪ ಕೇರಳದ ವೋಕ್ಸ್‌ವ್ಯಾಗನ್ ವೆಂಟೋ (ಕೆಎಲ್–63, 9595) ಕಾರು ಚಾಲಕನ ನಿಯಂತ್ರಣ ತಪ್ಪಿ ಸ್ವಯಂ ಆಗಿ ಅಪಘಾತಕ್ಕೀಡಾಗಿದ್ದು, ಕೇರಳದ ಕ್ಯಾಲಿಕಟ್ ಮೂಲದ ಪ್ರಯಾಣಿಕರು ಪಾರಾಗಿದ್ದಾರೆ. ಭಾನುವಾರ ಬೆಳಗ್ಗೆ ಹುಣಸೂರು ಕಡೆಯಿಂದ ಮೈಸೂರಿಗೆ ಬರುತ್ತಿದ್ದ ವೇಳೆ ಘಟನೆ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 31– ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ಕಲ್ಯಾಣ ವರ್ಗಗಳ ಇಲಾಖೆ ವತಿಯಿಂದ ಮೆಟ್ರಿಕ್ ನಂತರ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ಸೇರಿದ ಪಿಯುಸಿ, ಪಿಯುಸಿ ಸಮಾನಾಂತರ ಡಿಪ್ಲೋಮಾ, ಐ.ಟಿ.ಐ ಕೋರ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಪ್ರವರ್ಗ–1, ಎಸ್‌ಸಿ & ಎಸ್‌ಟಿ ರೂ. 2.50 ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ ರೂ. 1 ಲಕ್ಷದೊಳಗಿರಬೇಕು. ಪ್ರವೇಶ ಬಯಸುವ ವಿದ್ಯಾರ್ಥಿಗಳು ಜೂನ್ 15 ರೊಳಗೆ ಇಲಾಖೆಯ https://shp.karnataka.gov.in/bcwd ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 8050770004 ನ್ನು ಸಂಪರ್ಕಿಸಬಹುದೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೈಸೂರು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಾಸ್ಥ್ಯ ಆರೋಗ್ಯಕ್ಕೆ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಸಮತೋಲನ ಮುಖ್ಯ

ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅಭಿಪ್ರಾಯ



ಮೈಸೂರಿನ ಉತ್ತರಾಧಿ ಮಠದಲ್ಲಿ ಭಾನುವಾರ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಆರೋಗ್ಯ ಶಿಬಿರದಲ್ಲಿ ಮೈಸೂರು ರಾಜ ವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಅವರು ಸ್ವತಃ ಆರೋಗ್ಯ ತಪಾಸಣೆಯಲ್ಲಿ ಭಾಗಿಯಾಗುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು.

ಮೈಸೂರು, ಮೇ31(ಬಿಎಲ್‌ಯು)– ಸ್ವಾಸ್ಥ್ಯ ಆರೋಗ್ಯಕ್ಕೆ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಸಮತೋಲನ ಮುಖ್ಯ ಎಂದು ಮೈಸೂರು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರಿನ ಉತ್ತರಾಧಿ ಮಠದ ಆವರಣದಲ್ಲಿ ಇಂದು ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಫೌಂಡೇಷನ್ ಹಾಗೂ ಇತರೆ ಸಂಘ ಸಂಸ್ಥೆಗಳ ಜೊತೆಗೂಡಿ ಆಯೋಜಿಸಿದ್ದ ಆರೋಗ್ಯ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಮಾನಸಿಕ, ದೈಹಿಕ ಹಾಗೂ ಆಧ್ಯಾತ್ಮಿಕ ಸಮತೋಲ ಕಾಯ್ದುಕೊಂಡರೆ ಸ್ವಾಸ್ಥ್ಯ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಹೇಳಿದರು.

ಮೈಸೂರು ನಗರದ ಸರ್ವರ ಆರೋಗ್ಯಕ್ಕಾಗಿ ಈ ಶಿಬಿರವನ್ನು ಆಯೋಜಿಸಲಾಗಿದೆ. ಎಲ್ಲರೂ ಆರೋಗ್ಯ ತಪಾಸಣೆಯಲ್ಲಿ ಭಾಗಿಯಾಗುವ ಮೂಲಕ ಆರೋಗ್ಯ ಸಮಸ್ಯೆ ಪರಿಹರಿಸಿಕೊಳ್ಳಿ ಎಂದು ಸಲಹೆ ನೀಡಿದರು.

ತರುವಾಯ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ ಅವರು, ಪ್ರಸ್ತುತ ಬಹಳಷ್ಟು ಮಂದಿ ಕೆಲವು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಆದ ಕಾರಣ ಅನಾರೋಗ್ಯ ಎದುರಾಗುವ ಮುನ್ನ ಜೀವನ ಶೈಲಿ ಹಾಗೂ ಆಹಾರ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಈ ಮೂಲಕ ಸ್ವಾಸ್ಥ್ಯ ಆರೋಗ್ಯ ಕಾಪಾಡಬೇಕು ಎಂದು ಕಿವಿಮಾತು ಹೇಳಿದರು.

ನಗರದ ಪ್ರತಿಷ್ಠಿತ ಆಸ್ಪತ್ರೆಗಳ ವೈದ್ಯರು ಹಾಗೂ ಸಿಬ್ಬಂದಿಗಳು ಆರೋಗ್ಯ ತಪಾಸಣೆ ನಡೆಸಿ, ಉಚಿತ ಔಷಧಿಗಳನ್ನು ಕೂಡ ನೀಡಿದರು. ಉತ್ತರಾದಿ ಮಠದ ಶ್ರೀ 1008 ಸತ್ಯಾತ್ಮ ತೀರ್ಥ ಶ್ರೀಪಾದರು, ಜೆಎಆರ್‌ಸಿ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀತ್ಮ, ಸ್ವಸ್ಥ ಮೈಸೂರು ಟ್ರಸ್ಟಿ ಡಾ.ಪ್ರತಿಭಾ, ಡಾ.ಅರುಣ್, ಡಾ.ಆಂಜನೇಯಮೂರ್ತಿ, ಡಾ.ಗುರು ಬಸವರಾಜ್ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.

ಮೈಸೂರಲ್ಲಿ ಶಿವಾನುಭವ ದಾಸೋಹ ಉಪನ್ಯಾಸ



ಮೈಸೂರು, ಮೇ 31– ಮೈಸೂರಿನ ಎಂಜಿ ರಸ್ತೆಯಲ್ಲಿರುವ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಶಿವಾನುಭವ ದಾಸೋಹ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಗುಂಡ್ಲುಪೇಟೆ ಮೂಡುಗೂರು ಗ್ರಾಮದ ಶ್ರೀ ವಿರಕ್ತ ಮಠದ ಶ್ರೀ ಇಮ್ಮಡಿ ಉದ್ಧಾನ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಡಾ.ಪ್ರಸನ್ನ ಸಂತೇಕಡೂರು 'ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳ' ಕುರಿತು ತಿಳಿಸಿಕೊಟ್ಟರು. ಗಾಯಕ ಉಮ್ಮತ್ತೂರು ಉಮೇಶ್, ನಟರಾಜ್ ಮತ್ತು ವಚನ್ ವಚನ ಗಾಯನ ನಡೆಸಿಕೊಟ್ಟರು.

ಇದೇ ವೇಳೆ ಸಾಹಿತಿ ನಗರ್ಲೆ ಶಿವಕುಮಾರ್, ಜಿ.ರವಿಶಂಕರ್, ಯೋಗ ಶಿಕ್ಷಕ ಎಂ.ಮಲ್ಲಿಕಾರ್ಜುನ ಸ್ವಾಮಿ, ವೀರಶೈವ ಲಿಂಗಾಯಿತ ನಗರ ಘಟಕದ ಅಧ್ಯಕ್ಷ ಪ್ರಕಾಶ್, ಪಳನಿಸ್ವಾಮಿ, ಜನ್ನೂರು ಲಿಂಗರಾಜು, ಶಿವಮೂರ್ತಿ, ಎಂ.ಪಿ. ಪ್ರಭು, ವೀರಶೈವ ಮೂರ್ತಿ, ಚಿನ್ನಂಬಳ್ಳಿ ಮಹಾದೇವಪ್ಪ ರವಿಪ್ರಶಾಂತ್ ಸಂತೆಮರಳ್ಳಿ, ಕ್ಯಾತನಹಳ್ಳಿ ಪ್ರಕಾಶ್, ರಾಣಿಪ್ರಭಾ ಮುಂತಾದವರನ್ನು ಸನ್ಮಾನಿಸಲಾಯಿತು. ಶೀಲಾ ಶಿವಕುಮಾರ್, ಯಮುನಾ ರವಿಪ್ರಕಾಶ್, ಶಾರದಾ ಮಹೇಶ್, ಮಂಜುಳಾ ರವಿಶಂಕರ್ ಮತ್ತಿತರರಿದ್ದರು.

ಒಗ್ಗಟ್ಟಿನಿಂದ ಬ್ರಾಹ್ಮಣ ಸಮುದಾಯದ ಬಾಂಧವ್ಯ ಗಟ್ಟಿ

ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಶತಮಾನೋತ್ಸವ



ಮೈಸೂರು: ಬ್ರಾಹ್ಮಣ ಸಮುದಾಯವು ಒಗ್ಗಟ್ಟಿನಿಂದ ಸಂಘಟಿತವಾಗಿ, ಪರಸ್ಪರ ಸಹಕಾರ ನೀಡಿದಾಗ ಮಾತ್ರ ಸಮುದಾಯದ ಬಾಂಧವ್ಯ ಗಟ್ಟಿಯಾಗಲು ಸಾಧ್ಯ ಎಂದು ಮುಡಾ ಮಾಜಿ ಅಧ್ಯಕ್ಷರು ಮತ್ತು ಕೆಪಿಸಿಸಿ ಸದಸ್ಯರೂ ಆದ ಹೆಚ್.ವಿ.ರಾಜೀವ್ ಹೇಳಿದರು.

ನಗರದ ದಟ್ಟಗಳ್ಳಿಯ ಸಾ.ರಾ.ಕನ್ವೆನ್ಷನ್ ಹಾಲ್‌ನಲ್ಲಿ ಭಾನುವಾರ ನಡೆದ ಚಾಮುಂಡಿಪುರಂನ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಶತಮಾನೋತ್ಸವ ಸಂಭ್ರಮ, ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಹಾಗೂ ಸಾಮೂಹಿಕ ಸತ್ಯ ನಾರಾಯಣ ಪೂಜಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯಾವುದೇ ಒಂದು ಸಮುದಾಯದ ಪ್ರಗತಿಯು ಆಂತರಿಕ ಒಗ್ಗಟ್ಟು ಮತ್ತು ಸಂಘಟನಾ ಶಕ್ತಿ ಅವಲಂಬಿಸಿರುತ್ತದೆ. ಈ ನಿಟ್ಟಿನಲ್ಲಿ ಸಮುದಾಯದ ಬಾಂಧವ್ಯ ಹೆಚ್ಚಿಸಲು, ಒಗ್ಗಟ್ಟು ಬಲಪಡಿಸಲು ಇಂಥ ಕಾರ್ಯಕ್ರಮ ಸಹಾಯಕವಾಗಿವೆ ಎಂದು ಪ್ರತಿಪಾದಿಸಿದರು.

ಮೂಗೂರು ಕರ್ನಾಟಕ ಬ್ರಾಹ್ಮಣ ಸಮುದಾಯದವರು ತಮ್ಮ ವಿದ್ವತ್ತು, ನಾಯಕತ್ವ ಗುಣ ಮತ್ತು ಶಿಕ್ಷಣದ ಬಲದಿಂದ ಭಾರತ ಸೇರಿದಂತೆ ಜಗತ್ತಿನಾದ್ಯಂತ ಹಲವು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಸಮುದಾಯದ ಏಳಿಗೆಗೆ ಶಿಕ್ಷಣ ಅಗತ್ಯವಾಗಿದ್ದು, ಸರ್ಕಾರದ ಸೌಲಭ್ಯ ಬಳಸಿಕೊಳ್ಳಬೇಕಿದೆ ಎಂದು ತಿಳಿಸಿದರು.

ಇಂದು ಪೋಷಕರು ಮಕ್ಕಳನ್ನು ಸಮುದಾಯದ ಕಾರ್ಯಕ್ರಮದಲ್ಲಿ ತೊಡಗಿಸುತ್ತಿಲ್ಲ. ಇದರಿಂದಾಗಿ ಮುಂದಿನ ಪೀಳಿಗೆಗೆ ಬಾಂಧವ್ಯದ ಕೊಂಡಿ ಕಳಚುತ್ತಿದೆ. ಹೀಗಾಗಿ ಯುವಜನರಿಗೆ ಮಾರ್ಗದರ್ಶನ ಮಾಡುವುದು ಅಗತ್ಯವಾಗಿದೆ ಎಂದು ಸಲಹೆ ನೀಡಿದರು.

ವಿದ್ವಾನ್ ಟಿ.ವಿ.ಸತ್ಯನಾರಾಯಣ ಮಾತನಾಡಿ, ಸಮುದಾಯದವರು ಮೊದಲಿನಿಂದಲೂ ಕಾಯಕಪ್ರಿಯರು. ಉತ್ತಮ ಸಂಸ್ಕಾರ ಅಳವಡಿಸಿಕೊಂಡು ಸ್ವಾಭಿಮಾನದಿಂದ ಜೀವನ ನಡೆಸುತ್ತಿದ್ದಾರೆ. ಇಂಥ ಸಮುದಾಯ ಉಳಿಯಬೇಕು ಮತ್ತು ಬೆಳೆಯಬೇಕು. ಇದಕ್ಕಾಗಿ ನಾವು ಪರಸ್ಪರ ಜೊತೆಗೂಡಿ ಶಕ್ತಿ ತುಂಬಬೇಕು ಎಂದರು.

ಸಂಘದ ಅಧ್ಯಕ್ಷ ಎಂ.ವಿಶ್ವನಾಥಯ್ಯ ಮಾತನಾಡಿ, ಬ್ರಾಹ್ಮಣ ಸಮುದಾಯದ ಏಕತೆ ಮತ್ತು ಸಂಘಟನೆಗೆ ಒತ್ತು ನೀಡುವುದು ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಅತ್ಯಗತ್ಯ. ಸಾಮಾಜಿಕ, ಶೈಕ್ಷಣಿಕ, ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಎಲ್ಲ ಒಳಪಂಗಡಗಳು ಭೇದಭಾವ ಮರೆತು ಒಂದಾಗಬೇಕಿದೆ. ರಾಜ್ಯದಾದ್ಯಂತ 4 ಲಕ್ಷದಿಂದ 5 ಲಕ್ಷ ಸಮುದಾಯದ ಜನಸಂಖ್ಯೆ ಇದೆ ಎಂದು ತಿಳಿಸಿದರು.

ಲೋಕಕಲ್ಯಾಣಾರ್ಥವಾಗಿ 180ಕ್ಕೂ ಹೆಚ್ಚು ದಂಪತಿಗಳಿಂದ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯಿತು. ವಿವಿಧ ಕ್ಷೇತ್ರಗಳ 70 ಸಾಧಕರನ್ನು ಸನ್ಮಾನಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

ಪ್ರಧಾನ ಕಾರ್ಯದರ್ಶಿ ಕೆ.ಆರ್.ಮಂಜುನಾಥ್, ಖಜಾಂಚಿ ಎಚ್.ಎಸ್. ಶ್ರೀಕಂಠ ಶರ್ಮ, ಕಾರ್ಯದರ್ಶಿ ಹೊಮ್ಮ ಮಂಜುನಾಥ್, ಎಚ್.ಎಸ್.ನಾಗಶಯನ ಹಾಜರಿದ್ದರು.

ಆರು ಮಂದಿಯ ಬರ್ಬರ ಹತ್ಯೆ: 12 ಮಂದಿ ವಿರುದ್ಧ ಎಫ್‌ಐಆರ್

ವಿಜಯಪುರ: ವಿಜಯಪುರ ಜಿಲ್ಲೆಯ ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದಲ್ಲಿ ನಡೆದಿದ್ದ ಆರು ಮಂದಿಯ ಭೀಕರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ 12 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಈವರೆಗೂ ಯಾರನ್ನೂ ಬಂಧಿಸಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತ ಕುಟುಂಬದ ಸದಸ್ಯರೊಬ್ಬರು ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಾಗಿದ್ದು, ಹತ್ಯೆಗೀಡಾದವರಲ್ಲಿ ಒಂದೇ ಕುಟುಂಬದ ಐವರು ಸದಸ್ಯರು ಹಾಗೂ ಒಬ್ಬ ಕಾರ್ಮಿಕ ಸೇರಿದ್ದಾರೆಂದು ತಿಳಿದುಬಂದಿದೆ.

ಎಫ್‌ಐಆರ್‌ನಲ್ಲಿ ಹೆಸರಿಸಲಾದ ಬಹುತೇಕ ಆರೋಪಿಗಳು ಚಡಚಣ ಭಾಗದ ಪ್ರಭಾವಿ ವ್ಯಕ್ತಿಯಾಗಿರುವ ಕಲ್ಲಣಗೌಡ ಪಾಟೀಲ್ ಕುಟುಂಬದವರು ಎನ್ನಲಾಗಿದ್ದು, ಆಸ್ತಿ ವಿವಾದದ ಹಿನ್ನೆಲೆಯಲ್ಲಿ ಆರು ಮಂದಿಯನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಟಿಡಿಗೆ ಚಾಮುಂಡೇಶ್ವರಿಯಿಂದ ಟಿಕೆಟ್ ನೀಡಿದರೆ ಗೆಲ್ಲಿಸಲು ಪ್ರಯತ್ನಿಸುವೆ

ಜಿಪಂ ಮಾಜಿ ಸದಸ್ಯ ಮಾದೇಗೌಡ ಸ್ಪಷ್ಟನೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಎಸ್.ಮಾದೇಗೌಡ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಮೇ31(ಬಿಎಲ್‌ಯು)– ನನ್ನೊಡನೆ ಜೆಡಿಎಸ್‌ಗೆ ಸೇರ್ಪಡೆಗೊಂಡಿರುವ ಎಲ್ಲರೂ ಚಾಮುಂಡೇಶ್ವರಿ ಕ್ಷೇತ್ರದವರೆ ಹೊರತು ಬೇರೆಯವರಲ್ಲ ಎಂದು ಸ್ಪಷ್ಟಪಡಿಸಿದ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಎಸ್.ಮಾದೇಗೌಡ ಪಕ್ಷದ ವರಿಷ್ಠರು ಶಾಸಕ ಜಿ.ಟಿ.ದೇವೇಗೌಡರಿಗೆ ಟಿಕೆಟ್ ನೀಡಿದರೆ ಅವರನ್ನು ಗೆಲ್ಲಿಸಿಕೊಂಡು ಬರಲು ಪ್ರಯತ್ನಿಸುವೆ ಎಂದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಬೆಂಬಲಿಗರೆಲ್ಲರೂ ಚಾಮುಂಡೇಶ್ವರಿ ಕ್ಷೇತ್ರದವರೆಂದು ಸಾಬೀತು ಮಾಡಲು ಅವರ ಮತದಾರರ ಪಟ್ಟಿಯನ್ನು ಬಹಿರಂಗ ಮಾಡುತ್ತೇನೆ ಎಂದು ಸವಾಲು ಹಾಕಿದರು.

ನಿನ್ನೆ ನಡೆದ ಜೆಡಿಎಸ್ ಸೇರ್ಪಡೆ ಕಾರ್ಯಕ್ರಮಕ್ಕೆ ಶಾಸಕ ಜಿ.ಡಿ.ಹರೀಶ್ ಗೌಡ ಅವರನ್ನು ಆಹ್ವಾನಿಸಿದ್ದೆ. ಅವರು ಯಾವ ಕಾರಣಕ್ಕೆ ಗೈರಾದರು ಎಂಬ ಸ್ಪಷ್ಟತೆ ನನಗೆ ತಿಳಿದಿಲ್ಲ. ಶಾಸಕ ಜಿ.ಟಿ.ದೇವೇಗೌಡರ ಜೊತೆಗಿನ ಬಾಂಧವ್ಯ ನನಗೆ ಎಂದಿನಂತೆ ಇದೆ ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಜಿ.ಟಿ.ದೇವೇಗೌಡರು ಜೆಡಿಎಸ್‌ನಲ್ಲಿ ಸಕ್ರಿಯರಾಗುವ ಕುರಿತು ವರಿಷ್ಠರು ತೀರ್ಮಾನ ಮಾಡುತ್ತಾರೆ. ಇದರಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯ ಏನು ಇಲ್ಲ. ಒಂದು ವೇಳೆ ಪಕ್ಷದ ವರಿಷ್ಠರು ಅವರಿಗೇ ಟಿಕೆಟ್ ನೀಡಿದರೆ ಅವರ ಪರವಾಗಿ ಪ್ರಚಾರ ಮಾಡಿ ಗೆಲ್ಲಿಸಲು ಪ್ರಯತ್ನಿಸುವೆ ಎಂದು ತಿಳಿಸಿದರು.

ಕಾಂಗ್ರೆಸ್‌ನಲ್ಲಿ ನನಗೆ ಸ್ಥಾನಮಾನ ನೀಡಲಿಲ್ಲ ಎಂಬ ಕಾರಣಕ್ಕೆ ಆ ಪಕ್ಷ ತ್ಯಜಿಸಲಿಲ್ಲ. ಕಾಂಗ್ರೆಸ್ ವಾತಾವರಣ ನನಗೆ ಒಗ್ಗಲಿಲ್ಲ. ಈ ಕಾರಣಕ್ಕೆ ಕಾಂಗ್ರೆಸ್ ಬಿಟ್ಟು ಕುಮಾರಸ್ವಾಮಿ ಅವರ ಸಲಹೆ ಹಾಗೂ ಅನುಮತಿ ಮೇರೆಗೆ ನಾನು ಬೇಷರತ್ತಾಗಿ ಜೆಡಿಎಸ್ ಸೇರಿದ್ದೇನೆ ಎಂದು ಹೇಳಿದರು.

ಜೆಡಿಎಸ್ ಪಕ್ಷವನ್ನು ನಾನು ತಳಮಟ್ಟದಿಂದ ಕಟ್ಟಿದ್ದೇನೆ. ನನ್ನ ಶ್ರಮ ಗುರುತಿಸಿ ಪಕ್ಷ ನನಗೆ ಹಾಗೂ ಪತ್ನಿಗೆ ಅಧಿಕಾರ ನೀಡಿತ್ತು. ಇದನ್ನು ನೆನೆದು ಮತ್ತೆ ಸೇರ್ಪಡೆಗೊಂಡಿದ್ದೇನೆ. ಇದರಲ್ಲಿ ನನಗೆ ಯಾವುದೇ ಸ್ವಾರ್ಥ ಇಲ್ಲ ಎಂದರು.

ಸಾ.ರಾ.ಮಹೇಶ್ ಟೀಕಿಸುವವರು ಚುನಾವಣೆಯಲ್ಲಿ ತಾಕತ್ತು ತೋರಿಸಲಿ

ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಬಗ್ಗೆ ಟೀಕೆ ಮಾಡುವರು 2028 ರ ಚುನಾವಣೆಯಲ್ಲಿ ತಮ್ಮ ತಾಕತ್ತು ತೋರಿಸಲಿ ಎಂದು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದ ಮಾಜಿ ಕಾರ್ಪೊರೇಟರ್ ಕೆಂಪಣ್ಣ ಸವಾಲು ಹಾಕಿದರು.

ಸಾ.ರಾ.ಮಹೇಶ್ ಅವರು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿಎಸ್ ಇಬ್ಭಾಗ ಮಾಡುತ್ತಿದ್ದಾರೆಂಬ ಕೆಲವು ಜೆಡಿಎಸ್ ನಾಯಕರ ಟೀಕೆಗೆ ಕಿಡಿಕಾರಿದ ಅವರು, ಇಷ್ಟು ದಿನ ಮೌನವಾಗಿದ್ದ ಕೆಲವರು ಈಗ ತಾವು ಕೂಡ ಚಾಮುಂಡೇಶ್ವರಿ ಕ್ಷೇತ್ರದ ನಾಯಕರೆಂದು ದಿಢೀರ್ ಆಗಿ ಉದ್ಭವಗೊಂಡಿದ್ದಾರೆ ಎಂದು ಲೇವಡಿ ಮಾಡಿದರು. ಮೈಸೂರು ಜಿಲ್ಲೆಗೆ ಸಾ.ರಾ.ಮಹೇಶ್ ಅವರೆ ನಾಯಕರು. ಜೆಡಿಎಸ್ ಪಕ್ಷದ ಕಾರ್ಯಕರ್ತರು ಅವರ ಸಲಹೆ ಮಾರ್ಗದರ್ಶನದಲ್ಲಿ ಮುಂದುವರೆಯುತ್ತಾರೆ. ನಾವೆಲ್ಲಾ ಸಾ.ರಾ.ಮಹೇಶ್ ಬಿಟ್ಟು ಯಾರ ಬಳಿಯೂ ಹೋಗುವುದಿಲ್ಲ ಎಂದು ಕೆಂಪಣ್ಣ ಸ್ಪಷ್ಟನೆ ನೀಡಿದರು.

ಹಿನಕಲ್ ಗ್ರಾಮದ ವಿವಿಧ ಕಾಮಗಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರಿಂದ ಚಾಲನೆ



ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಹಿನಕಲ್ ಗ್ರಾಮದಲ್ಲಿ ಹೂಟಗಳ್ಳಿ ನಗರಸಭೆ ವತಿಯಿಂದ ಕೈಗೆತ್ತಿಕೊಂಡಿರುವ 5 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡ ಅವರು ಭಾನುವಾರ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ಮೇ 31(ಬಿಎಲ್‌ಯು)– ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಹಿನಕಲ್ ಗ್ರಾಮದಲ್ಲಿ ರಸ್ತೆ, ಕುಡಿಯುವ ನೀರು ಸೇರಿದಂತೆ ಇತರೆ ಮೂಲಭೂತ ಸೌಕರ್ಯ ಕಲ್ಪಿಸುವ 5 ಕೋಟಿ ವೆಚ್ಚದ ಕಾಮಗಾರಿಗೆ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಚಾಲನೆ ನೀಡಿದರು.

ಹಿನಕಲ್ ಗ್ರಾಮದಲ್ಲಿ ಕುಡಿಯುವ ನೀರಿನ ಪೈಪ್ ಲೈನ್, ಒಳಚರಂಡಿ, ಸಿಸಿ ರಸ್ತೆ, ರಸ್ತೆ ಡಾಂಬರೀಕರಣ ಸೇರಿದಂತೆ ಇತರೆ ಮೂಲ ಸೌಕರ್ಯ ಕಲ್ಪಿಸಲು ಹೂಟಗಳ್ಳಿ ನಗರಸಭೆಯು 5 ಕೋಟಿ ವೆಚ್ಚ ಮಾಡುತ್ತಿದೆ. ಹೂಟಗಳ್ಳಿ ನಗರಸಭೆಯಿಂದ ಕೈಗೊಂಡಿರುವ ಕಾಮಗಾರಿಗೆ ಜಿ.ಟಿ. ದೇವೇಗೌಡರು ಗುದ್ದಲಿ ನೆರವೇರಿಸಿದರು. ಹಿನಕಲ್‌ನಲ್ಲಿ ಈಗ ಕೈಗೊಂಡಿರುವ ಕಾಮ ಗಾರಿಯಿಂದ ನಾಗರಿಕರು ಎದುರಿಸುತ್ತಿದ್ದ ಬಹುತೇಕ ಸಮಸ್ಯೆಗಳು ಪರಿಹಾರ ಆಗು ತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ಕಾಮಗಾರಿ ಜೊತೆಗೆ ಇನ್ನು ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಮಾಡ ಬೇಕಿದ್ದು, ನಿಗದಿತ ಅವಧಿಯಲ್ಲಿ ಅದನ್ನು ಪೂರ್ಣಗೊಳಿಸುವುದಾಗಿ ಜಿ.ಟಿ.ದೇವೇಗೌಡರು ಭರವಸೆ ನೀಡಿದರು.

ಇಂದಿನ ಕಾರ್ಯಕ್ರಮದಲ್ಲಿ ಹೂಟಗಳ್ಳಿ ನಗರಸಭೆ ಪೌರಾಯುಕ್ತ ಚಂದ್ರಶೇಖರ್, ಎಇಇ ಮಧುಸೂದನ್, ಎಇ ಹರ್ಷ, ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಹೆಚ್.ಸಿ.ರಾಜು, ಮುಖಂಡರಾದ ಹೆಚ್.ಬಿ. ಜಗದೀಶ್, ವೆಂಕಟೇಶ್, ಸ್ವಾಮಿ, ನಾಗ ರಾಜು, ಹೊನ್ನಪ್ಪ, ಶ್ರೀನಿವಾಸ್, ಉದಯ್, ಜವರಪ್ಪ, ಶಿವಕುಮಾರ್, ರಮೇಶ್ ಸೇರಿದಂತೆ ಹಲವರು ಹಾಜರಿದ್ದರು.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು